ಕರ್ನಾಟಕ ವಿಧಾನ ಸಭೆ

ಶನಿವಾರ 29 ನೇ ಫೆಬ್ರವರಿ 1992 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.55 ಗಂಟೆಗೆ ಸಮಾವೇಶಗೊಂಡಿತು. **ಶ್ರೀ ಎಸ್. ಎಂ. ಕೃಷ್ಣ** ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಆಳುವ ಪಕ್ಷದ ಸದಸ್ಯರ ಪೀಠಗಳು ಖಾಲಿಯಾಗಿದೆ. ಹೀಗಾದರೆ ನಾವು ಹೇಗೆ ಕೆಲಸ ಮಾಡಬೇಕು? ಇದರ ಬಗ್ಗೆ ಮಾನ್ಯ ನಾಯಕರೆ ಉತ್ತರವನ್ನು ಹೇಳಬೇಕು. ಸದಸ್ಯರುಗಳು ಬರುವ ಸೂಚನೆಗಳೇ ಕಾಣುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):- ಅಧ್ಯಕ್ಷರೆ, ನಾವು ಪ್ರಾರಂಭ ಮಾಡೋಣ, ಅವರೆಲ್ಲರೂ ಸಹ ಬರುತ್ತಾರೆ.

ಸಂತಾಪ ಸೂಚನೆ

ಅಧ್ಯಕ್ಷರು:- ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ರಾಜಾ ಪಿಡ್ ನಾಯಕ್ ಹಾಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಕೆಂಪಹನುಮಯ್ಯನವರುಗಳು ನಿಧನರಾದ ಸುದ್ದಿಯನ್ನು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀ ರಾಜಾ ಪಿಡ್ ನಾಯಕ್‌ರವರು ದಿನಾಂಕ 27-2-1992 ರಂದು ನಿಧನರಾದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ರಾಜಾ ಪಿಡ್ ನಾಯಕ್‌ರವರು 3, 4 ಮತ್ತು 5 ನೇ ವಿಧಾನ ಸಭೆಗೆ ಶೋರಾಪುರ ಕ್ಷೇತ್ರದಿಂದ ಆಯ್ಕೆಯಾಗಿ ಪ್ರಶಂಸನೀಯ ಸೇವೆ ಸಲ್ಲಿಸಿದವರು. ಹರಿಜನರ ಶ್ರೇಯೋಭಿವೃದ್ಧಿ ಹಾಗೂ ಸಹಕಾರಿ ಚಳವಳಿಯಲ್ಲೂ ಸಕ್ರಿಯವಾಗಿ ಕಾರ್ಯನಿರತರಾಗಿದ್ದ ಶ್ರೀಯುತರು ಮೈಸೂರು ರಾಜ್ಯ ಸಂಗೀತ ನಾಟಕ ಆಕಾಡಮಿ ಹಾಗೂ ರಾಜ್ಯ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ.

ನಾನು ಈ ಸಭೆಯ ಸದಸ್ಯನಾಗಿದ್ದ ಕಾಲದಲ್ಲಿ ಶ್ರೀ ರಾಜಾ ಪಿಡ್ ನಾಯಕ್‌ರವರು ಕೂಡ 1962 ರಲ್ಲಿ ಸದಸ್ಯರಾಗಿದ್ದರು ಎನ್ನುವುದದನ್ನು ನೆನಸಿಕೊಂಡು, ಶ್ರೀ ರಾಜಾ ಪಿಡ್ ನಾಯಕ್‌ರವರ ನಿಧನದಿಂದ ನಮ್ಮ ರಾಜ್ಯ ಒಬ್ಬ ಸಾಮಾಜಿಕ ಹಾಗೂ ಸಕ್ರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಹಾಗೂ ಶ್ರೀ ಕೆಂಪಹನುಮಯ್ಯನವರು ದಿನಾಂಕ 27-2-1992 ರಂದು ನಿಧನರಾದರು. 1944-45 ಹಾಗೂ 1948-49ರ ಅವಧಿಯಲ್ಲಿ ಕಾರ್ಮಿಕ ಪ್ರತಿನಿಧಿಯಾಗಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಸೇವೆ ಸಲ್ಲಿಸಿರುವ ಶ್ರೀಯುತರು ರಾಜ್ಯದ ಕಾರ್ಮಿಕರ ಹಾಗೂ ಶ್ರೀ ಸಾಮಾನ್ಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಹಿರಿಯ ಜೀವಿ ಶ್ರೀ ಕೆಂಪಹನುಮಯ್ಯನವರ ಮರಣದಿಂದಾಗಿ ರಾಜ್ಯದ ಕಾರ್ಮಿಕ ವೃಂದಕ್ಕೆ ತುಂಬಲಾರದ ನಷ್ಟವಾಗಿದೆ.

ನಿಧನರಾದ ಈ ಮಾನ್ಯ ಸದಸ್ಯರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು ಎದ್ದು ನಿಂತು ಒಂದು ನಿಮಿಷ ಮೃತರ ಗೌರವಾರ್ಥ ಮೌನವನ್ನಾಚರಿಸಿತು)

ಅಧ್ಯಕ್ಷರು:- ಇವತ್ತು ಸದನದ ಕಾರ್ಯಕಲಾಪಗಳ ಸಮಿತಿಯ ತೀರ್ಮಾನದ ಪ್ರಕಾರ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ಪ್ರಾರಂಭವಾಗಬೇಕಾಗಿತ್ತು. ಆದರೆ ಇನ್ನೂ ಕೆಲವು ಮಾನ್ಯ ಸದಸ್ಯರುಗಳು ಭಾಷಣ ಮಾಡತಕ್ಕಂಥ ಕಾತುರತೆಯನ್ನು ವ್ಯಕ್ತಪಡಿಸಿರುವುದರಿಂದ ಸುಮಾರು ಹನ್ನೊಂದು ಹನ್ನೊಂದುವರೆ ಗಂಟೆಯವರೆಗೆ ಈ ಚರ್ಚೆಯನ್ನು ಮುಂದುವರೆಸಿ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಪ್ರಾರಂಭ ಮಾಡುವ ಸೂಚನೆಯನ್ನು ಸಭೆಯ ಮುಂದಿಡುತ್ತಿದ್ದೇನೆ. ಹನ್ನೊಂದುವರೆ ಗಂಟೆಗೆ ಅವರು ಉತ್ತರವನ್ನು ಕೊಡುತ್ತಾರೆ. ಅಲ್ಲಿಯವರೆಗೂ 2-3 ಜನ ಸದಸ್ಯರುಗಳು ಭಾಷಣ ಮಾಡಬಹುದು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣವು ರಾಜ್ಯ ಸರ್ಕಾರದ ಧೋರಣೆಯನ್ನು ಪ್ರತಿಬಿಂಬಿಸತಕ್ಕಂಥ ಒಂದು ಭಾಷಣವಾಗಿದೆ. ನಮ್ಮ ಪ್ರಜಾಪ್ರಭುತ್ವದಲ್ಲಿ

ಸಂವಿಧಾನಬದ್ಧವಾಗಿ ಲೋಕ ಸಭೆಯಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಗಳು ಭಾಷಣವನ್ನು ಮಾಡತಕ್ಕದ್ದು, ರಾಜ್ಯಗಳಲ್ಲಿ ರಾಜ್ಯಪಾಲರು ಭಾಷಣ ಮಾಡತಕ್ಕದು ಒಂದು ಸಂಪ್ರದಾಯ ಮತ್ತು ಇದು ಸಂವಿಧಾನದಲ್ಲಿ ಅಡಕವಾಗಿರತಕ್ಕದ್ದು. ಈ ಸಂಪ್ರದಾಯದಿಂದ ಉಪಯೋಗವಾದರೂ ಏನು ಎನ್ನತಕ್ಕ ಪ್ರಶ್ನೆಯ ಬಗ್ಗೆ ಮಾತನಾಡಿದಾಗ, ಇದು ಒಂದು ರೀತಿ ಸರ್ಕಾರ ತಯಾರು ಮಾಡಿದಂಥ ಭಾಷಣವನ್ನು ರಾಜ್ಯಪಾಲರ ಬಾಯಲ್ಲಿ ಹೇಳಿಸತಕ್ಕದ್ದು.

ಇದು ಸಂಪ್ರದಾಯವಾಗಿ ಬಂದಿದೆ. ಇದು ಒಂದು ರೀತಿಯಲ್ಲಿ ಪರಕಾಯ ಪ್ರವೇಶ ಮಾಡಿದ ಹಾಗೆ. ಯಾರದೋ ಶರೀರದಲ್ಲಿ ಇನ್ನಾರೋ ಪ್ರವೇಶ ಮಾಡಿದ ಹಾಗೆ. ಇದು ಪರಕಾಯ ಪ್ರವೇಶ. ಅದನ್ನು ನಾನು ಒಪ್ಪುತ್ತೇನೆ, ವಿರೋಧವೆಂದು ಹೇಳುತ್ತಿಲ್ಲ. ಇವತ್ತು ಏನು ನಡೆದು ಬಂದಿದೆ ಅದನ್ನು ನಾನು ಹೇಳುತ್ತಿದ್ದೇನೆ. ನನಗನಿಸುತ್ತದೆ; ಈ ಪದ್ಧತಿ ಸರಿಯೇ ಎನ್ನುವುದರ ಬಗ್ಗೆ ದೇಶದಲ್ಲಿ ಒಂದು ಚಿಂತನೆ ಆಗಲೇಬೇಕು. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದರ ಬಗ್ಗೆ ಒಂದು ಚಿಂತನೆ ಆಗಬೇಕು.

ಅಧ್ಯಕ್ಷರು:- ಇದು ರಾಜ್ಯಾಂಗದ ಡಿಕ್ಟೇಟ್, ಮ್ಯಾಂಡೇಟರಿ. ಇದು ಪರಂಪರೆಯಾಗಿ ನಡೆದುಕೊಂಡು ಬಂದಿದೆ ಎಂದಲ್ಲ, ಕನ್‌ವೆನ್‌ಷನ್‌ಗೂ, ರಾಜ್ಯಾಂಗ ಏನು ಮಾಡಬೇಕೆಂದು ಹೇಳುತ್ತದೆ. ಅದಕ್ಕೂ ಬಹಳ ವ್ಯತ್ಯಾಸವಿದೆ.

ಶ್ರೀ ವಾಟಾಳ್ ನಾಗರಾಜ್:- ಅದನ್ನು ನಾನು ಒಪ್ಪುತ್ತೇನೆ, ಆದರೆ ನನಗನಿಸುತ್ತದೆ ರಾಜ್ಯಾಂಗದಲ್ಲಿ ಅನೇಕ ತಿದ್ದುಪಡಿಗಳಾಗಿವೆ. ಈ ಬಗ್ಗೆ ಸರ್ವೋಚ್ಚ ಲೋಕಸಭೆ ಮತ್ತು ದೇಶದ ಚಿಂತಕರು ಒಂದು ಚಿಂತನೆ ಮಾಡಬೇಕು. ಇದು ಸರ್ಕಾರ ಮಾಡಿದಂತಹ ಭಾಷಣ. ಇದು ಎಲ್ಲರಿಗೂ ಗೊತ್ತಿದೆ. ಯಾರೂ ಇದನ್ನು ತಳ್ಳಿ ಹಾಕುವಂತಿಲ್ಲ, ಸರ್ಕಾರ ಮಾಡಿರುವ ಭಾಷಣ. ಈ ಭಾಷಣದ ತಯಾರಿಗೆ ಸಚಿವ ಸಂಪುಟದ ಸಭೆ ಸೇರುತ್ತದೆ. ಸಚಿವ ಸಂಪುಟ ಸಭೆಯಲ್ಲಿ ಈ ಭಾಷಣದ ಪ್ರತಿಯೊಂದು ಅಕ್ಷರಗಳನ್ನು ಸಂಪೂರ್ಣ ಒಪ್ಪತಕ್ಕಂಥದ್ದು. ಒಪ್ಪಿ ನಂತರ ಮುದ್ರಣವನ್ನು ಸರ್ಕಾರದವರೇ ಮಾಡಿಸುವುದು. ಇದಾದ ಮೇಲೆ ರಾಜ್ಯಪಾಲರು ಬರುವುದು 5 ನಿಮಿಷವಿದೆ ಎನ್ನುವಾಗ ಅವರಿಗೆ ನಮ್ಮ ಭಾಷಣ ಹೀಗೆ ಇದೆ ಸ್ವಾಮಿ, ನಮ್ಮ ಪರವಾಗಿ ನೀವು ಓದಿ ಎಂದು ಹೇಳುವುದು. ಇದು ಎಷ್ಟು ವಿಪರ್ಯಾಸವೆಂದು ನನಗನಿಸುತ್ತದೆ. ಅವರಿಗೆ ಮನಸ್ಸು ಇಲ್ಲದಿದ್ದರೂ ಅನೇಕ ವಿಚಾರಗಳನ್ನು ರಾಜ್ಯಪಾಲರ ಬಾಯಲ್ಲಿ ತುರುಕಿಸುವಂಥಾದ್ದು ಆಗುತ್ತಿದೆ. ಅವರಿಗೆ ಮನಸ್ಸು ಇರಲಿ ಇಲ್ಲದಿರಲಿ ಅವರು ಹೇಳಲೇಬೇಕು. ಈ ಒಂದು ರಾಜ್ಯಾಂಗದ ಹಕ್ಕಿನ ಬಗ್ಗೆ ನಾನು ಹೇಳುತ್ತಿಲ್ಲ. ಅದನ್ನು ನಾನು ವಿರೋಧ ಮಾಡುತ್ತಿಲ್ಲ.

ಬಹುಶಃ ನನ್ನದೂ ಒಂದು ಪ್ರಾರಂಭಿಕವಾಗಿರಬಹುದು. ಈ ಬಗ್ಗೆ ಒಂದು ಚಿಂತನೆಯಾಗಲಿ, ಒಂದು ಬದಲಾವಣೆಯಾಗಲಿ. ರಾಜ್ಯಪಾಲರ ಭಾಷಣ ಇದು ಒಂದು ಬೇಕೆ ಬೇಡವೇ ಎನ್ನುವುದರ ಬಗ್ಗೆ ಒಂದು ಚಿಂತನೆ ಆಗಬೇಕು. ಚಿಂತನೆಯಾಗಿ ಸಂವಿಧಾನದ ತಿದ್ದುಪಡಿಯಾಗಲಿ, ರಾಜ್ಯಾಂಗದ ತಿದ್ದುಪಡಿ ಆಗಬೇಕಾದ್ದು ಒಂದು ಅವಶ್ಯಕತೆ ಇದೆ ಎನ್ನುವಂತಹ ಮಾತು ನನ್ನದು. ಇದು ನನ್ನ ಬಹಳ ಪ್ರಾಮಾಣಿಕವಾದಂತಹ ಒಂದು ಅನಿಸಿಕೆ. ಈ ಬಗ್ಗೆ ಅನೇಕ ರಾಜ್ಯಗಳಲ್ಲಿ ರಾಜ್ಯಪಾಲರು ಸಹ ರಾಜ್ಯಸರ್ಕಾರದ ಭಾಷಣವನ್ನು ಬಿಟ್ಟು ಈ ಕೆಲವು ವಿಚಾರಗಳು ನನಗೆ ಒಪ್ಪಿಗೆಯಾಗಿಲ್ಲವೆಂದು ಭಾಷಣ ಮಾಡಿರತಕ್ಕಂಥದ್ದು ಉಂಟು. ಕೆಲವು ರಾಜ್ಯಗಳಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಭಾಷಣವನ್ನು ನಾನು ಓದುವುದಕ್ಕಾಗುವುದಿಲ್ಲ ಎಂದು ಹೇಳಿರತಕ್ಕದ್ದೂ ಉಂಟು, ಇದರಿಂದ ಅನೇಕ ಕಡೆ ದ್ವಂದ್ವ ಪ್ರಾರಂಭವಾಗಿದೆ. ಇದು ಒಂದು ಕಡೆ. ಮತ್ತೊಂದು ಕಡೆ ರಾಜ್ಯಾಂಗ, ಸಂವಿಧಾನ, ರಾಜ್ಯಪಾಲರು, ರಾಜಭವನ, ಇವೆಲ್ಲ ಇರಬೇಕೆಂದು ಹೇಳತಕ್ಕದ್ದು ಒಂದು ಹಕ್ಕು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇದೆ. ಪ್ರಜೆಗಳೇ ಆಡಳಿತವನ್ನು ನಡೆಸುತ್ತಿದ್ದಾರೆ. ಈ ಪ್ರಜಾಪ್ರಭುತ್ವಕ್ಕೆ ಭೂಷಣವಾಗಿ ರಾಜಾಧಿರಾಜರುಗಳು, ಚಕ್ರವರ್ತಿಗಳು ತಮ್ಮ ಅಧಿಕಾರವನ್ನು ಕಳೆದುಕೊಂಡು ಮೂಲೆಗುಂಪಾಗಿರುವಾಗ, ಇನ್ನೂ ಈ ಪ್ರಜಾಪ್ರಭುತ್ವ ಬೆಳೆಯುತ್ತಿರುವ ಸಂದರ್ಭದಲ್ಲಿ, ಈ ಪ್ರಜಾಪ್ರಭುತ್ವ ಬೇರೂರುತ್ತಿರುವ ಸಂದರ್ಭದಲ್ಲಿ ಕೂಡ ರಾಜಭವನಗಳು ಎಂದು ಹೆಸರುಗಳನ್ನು ಹಾಗಿಕೊಂಡಿದ್ದಾರೆ ಒಂದು ಕಡೆ ರಾಜಾಧಿ ರಾಜರುಗಳನ್ನು ತೆಗೆದುಹಾಗಿದ್ದೇವೆ. ಮತ್ತೊಂದುಕಡೆ ರಾಜಭವನ, ರಾಜ್ಯಪಾಲರು ಎನ್ನತಕ್ಕ ವ್ಯವಸ್ಥೆ ಏನಿದೆ ಇದು ಹೋಗಬೇಕೆಂದು ನನ್ನ ಸಂಪೂರ್ಣ ಅನಿಸಿಕೆ. ಆದುದರಿಂದ ಈ ಪ್ರಜಾಪ್ರಭುತ್ವಕ್ಕೆ ಅಣಕವಾಗಿರತಕ್ಕ ಈ ಪದ್ಧತಿ ನಮ್ಮ ದೇಶದಿಂದ ಹೋಗಬೇಕೆಂದು ನನ್ನ ಅಭಿಪ್ರಾಯ ಮತ್ತೊಂದು ಅಭಿಪ್ರಾಯವೆಂದರೆ, ಈ ದೇಶದಲ್ಲಿ ಉಳಿತಾಯ ಮಾಡುವುದರಿಂದ ಈ ದೇಶದ ಪ್ರಗತಿಗೆ ಸಾಧಕವಾಗುತ್ತದೆಂದು ತಾವು ಹೇಳುವುದಾದರೆ ಈ ಬಿಳಿ ಆನೆಯಂತಿರತಕ್ಕ ರಾಜಭವನಗಳು, ಈ ವ್ಯವಸ್ಥೆಗಳನ್ನು ಕೈ ಬಿಡುವ ಚಿಂತನೆ ಆಗಬೇಕಾದುದು ಬಹಳ ಪ್ರಮುಖವಾದ ಅಂಶವೆಂದು ಹೇಳಬಯಸುತ್ತೇನೆ.

ಇದು ಬೇಕಾದರೆ ಪ್ರಜಾಪ್ರಭುತ್ವ ಭವನ ಎಂದು ಆಗಲಿ, ಮುಖ್ಯ ಮಂತ್ರಿಗಳು, ಮಂತ್ರಿಗಳು ಎಂದು ಇರುವುದರಿಂದ ಮಂತ್ರಿಮಂಡಲ, ವಿಧಾನ ಸಭೆ, ಎನ್ನತಕ್ಕ ಹೆಸರುಗಳು ಇರಲಿ. ಇದು ಪ್ರಜಾಪ್ರಭುತ್ವ. ನಾವು ಮತ್ತೊಂದು ಕಡೆಯಲ್ಲಿ ಯಾವ ಪ್ರಜಾಪ್ರಭುತ್ವಕ್ಕೋಸ್ಕರ ಚಿಂತನೆ ಮಾಡುತ್ತಿದ್ದೇವೆ, ಯಾವ ರಾಜಮಹಾರಾಜರು ಹೋಗಬೇಕೆಂದು ನಾವು ಹೇಳುತ್ತಿದ್ದೇವೆ, ಅದರ ಪಕ್ಕದಲ್ಲೇ ಮತ್ತೊಂದು ಕಡೆ ರಾಜಭವನ, ರಾಜವೈಭವ ಇರುವುದನ್ನು ನೋಡಿದರೆ ನಮ್ಮ ಪ್ರಜಾಪ್ರಭುತ್ವಕ್ಕೂ ಈ ವ್ಯವಸ್ಥೆಗೂ ಒಂದಕ್ಕೊಂದು ತಾಳೆ ಆಗುವುದಿಲ್ಲ. ಆದುದರಿಂದ ಇದರ ಬಗ್ಗೆ ಒಂದು ದೀರ್ಘವಾದ, ಸಮಗ್ರವಾದ ಚಿಂತನೆ ಆಗಬೇಕು.

ಮತ್ತೊಂದು ಮಾತನ್ನು ಹೇಳುವುದಾದರೆ, ಗಣರಾಜ್ಯೋತ್ಸವ ಸಂದರ್ಭದಲ್ಲಿ ಧ್ವಜಾರೋಹಣ ಮಾಡುತ್ತಿರುವವರು ಮಾನ್ಯ ರಾಜ್ಯಪಾಲರು, ನಮ್ಮ ಮುಖ್ಯ ಮಂತ್ರಿಗಳಲ್ಲ. ತಾಲೂಕು ಮಟ್ಟದಲ್ಲಿ ಗಣರಾಜ್ಯೋತ್ಸವ ಸಂದರ್ಭದಲ್ಲಿ ಧ್ವಜಾರೋಣ ಮಾಡುವವರು ಒಬ್ಬ ತಹಸಿಲ್ದಾರ. ಇದು ಎಷ್ಟು ನೋವಿನ ಪ್ರಸಂಗ ಎಂದರೆ, ಚುನಾಯಿತ ಪ್ರತಿನಿಧಿಗಳು ಪಕ್ಕದಲ್ಲಿ ಕುಳಿತಿರುವಾಗ ಒಬ್ಬ ತಹಸಿಲ್ದಾರ ಧ್ವಜಾರೋಹಣ ಮಾಡುವಂಥ ಪದ್ಧತಿ ಏನಿದೆ ಇದು ಬದಲಾವಣೆ ಆಗಬೇಕು. ಮಂತ್ರಿಗಳು, ಮುಖ್ಯ ಮಂತ್ರಿಗಳು, ಚುನಾಯಿತ ಪ್ರತಿನಿಧಿಗಳು ಯಾರಿದ್ದಾರೆ ಅವರೇ ಈ ಗಣ ರಾಜ್ಯೋತ್ಸವ ಸಂದರ್ಭದಲ್ಲಿ ಧ್ವಜಾರೋಹಣ ಮಾಡಬೇಕು. ತಾಲೂಕು ಮತ್ತು ಜಿಲ್ಲೆಗಳಲ್ಲೂ ಕೂಡ ಚುನಾಯಿತ ಪ್ರತಿನಿಧಿಗಳೇ ಧ್ವಜಾರೋಹಣ ಮಾಡಬೇಕು. ಇದು ಪ್ರಜಾಪ್ರಭುತ್ವಕ್ಕೆ ಬಹಳ ಭೂಷಣವಾದುದು. ಇದರ ಬಗ್ಗೆ ಕೇಂದ್ರ ಸರ್ಕಾರ ಮತ್ತು ಲೋಕಸಭೆ ಅತ್ಯಂತ ಗಹನವಾಗಿ ಚಿಂತನೆ ಮಾಡಬೇಕು. ಈ ಭವ್ಯವಾದಂಥ, ಸುಂದರವಾದಂಥ ಮನೆಯನ್ನು ಕಟ್ಟಿಸಿದಂಥ ಕೆಂಗಲ್ ಹನುಮಂತಯ್ಯನವರಿಗೆ ಪ್ರಣಾಮಗಳು. ಅವರ ಭಾವ ಚಿತ್ರವನ್ನು ಈ ಸದನದಲ್ಲಿ ಹಾಕುವಂಥ ನಿರ್ಧಾರವನ್ನು ಕೈಗೊಂಡಿರುವುದಕ್ಕಾಗಿ ತಮಗೆ ಅಭಿನಂದಿಸುತ್ತೇನೆ. ಈ ಪವಿತ್ರ ಭವನವನ್ನು ಕಟ್ಟಿಸಿ ಈ ಕಟ್ಟಡದ ಮುಂದೆ "ಸರ್ಕಾರದ ಕೆಲಸ ದೇವರ ಕೆಲಸ" ಎನ್ನತಕ್ಕ ಒಂದು ಪವಿತ್ರ ಮಾತನ್ನು ಬರೆಸಿದರು. ಸರ್ಕಾರದ ಕೆಲಸ ದೇವರ ಕೆಲಸ ಎಂಬುದಕ್ಕೆ ಈಗ ಏನಾದರೂ ನಮ್ಮಲ್ಲಿ ಬೆಲೆ ಉಳಿದಿದೆಯೆ? ಆದುದರಿಂದ ಮಾನ್ಯ ಅಧ್ಯಕ್ಷರು ತಮ್ಮ ಆತ್ಮಕ್ಕೆ, ಹೃದಯಕ್ಕೆ ಈ "ಸರ್ಕಾರದ ಕೆಲಸ ದೇವರ ಕೆಲಸ" ಎಂಬುದಕ್ಕೆ ಒಂದು ಘನತೆ ಗೌರವ, ಪ್ರತಿಷ್ಠೆ, ಮರ್ಯಾದೆ ದೊರಕುತ್ತದೆಂಬ ಖಾತ್ರಿ ಇದ್ದರೆ ತಾವು ಅದನ್ನು ಅಲ್ಲಿ ಇರಿಸಿ. ಒಂದು ವೇಳೆ ಇದು ಯಾವುದೂ ಇಲ್ಲವೆಂದು ಹೇಳುವುದಾದರೆ, ದಯವಿಟ್ಟು ಆ ಮಹನೀಯರು ಏನು ಆ ಪದಗಳನ್ನು ಕಲ್ಲಿನಲ್ಲಿ ಕೆತ್ತಿಸಿದ್ದಾರೆ ಅವರ ಹೆಸರಿಗೆ ಕಳಂಕ ಬರಬಾರದೆಂಬ ಉದ್ದೇಶದಿಂದ ಕೂಡಲೇ ಗುತ್ತಿಗೆದಾರರನ್ನು ಕರೆಯಿಸಿ ಆ ಎಲ್ಲಾ ಅಕ್ಷರಗಳನ್ನೂ ಸಂಪೂರ್ಣವಾಗಿ ತೆಗೆಸುವುದು ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ:- ಗುತ್ತಿಗೆದಾರರು ಎಂದರೆ ಯಾರು?

ಶ್ರೀ ವಾಟಾಳ್ ನಾಗರಾಜ್:- ಗುತ್ತಿಗೆದಾರರು ಎಂದರೆ ಕಂಟ್ರಾಕ್ಟರ್‌ಗಳು ಎಂದು ಅರ್ಥ.

ಅಧ್ಯಕ್ಷರು:- ಅಥವಾ ನಮ್ಮ ನೀವು ಮಾಲೀಕಯ್ಯ ಗುತ್ತೇದಾರ್‌ರವರಿಗೇನಾದರೂ ವಹಿಸಿಕೊಟ್ಟಿದ್ದೀರೋ ಏನೋ ಎಂದು. ಈಗಾಗಲೇ ಒಂದು ಸಾರಿ ಅಳಿಸಿಹಾಕಿದ್ದುದನ್ನು ಮತ್ತೆ ಬರೆಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಅದು ಬೇರೆ. ಅದನ್ನು ಏತಕ್ಕೆ ಅಳಿಸಿಹಾಕಿದ್ದರು ಎಂಬುದನ್ನೂ ಹೇಳುತ್ತೇನೆ. ಅದು ನನಗೆ ಚೆನ್ನಾಗಿ ಜ್ಞಾಪಕ ಇದೆ. ಮಾನ್ಯ ಹನುಮಂತಯ್ಯನವವ ಸರ್ಕಾರ ಹೋದಮೇಲೆ ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರ ಬಂತು. ಶ್ರೀಮಾನ್ ವೀರಣ್ಣಗೌಡರು ಆಗ ಲೋಕೋಪಯೋಗಿ ಖಾತೆಯ ಸಚಿವರಾಗಿದ್ದರು. ಶ್ರೀಮಾನ್ ವೀರಣ್ಣಗೌಡರಿಗೂ ಮತ್ತು ಮಾನ್ಯ ಹನುಮಂತಯ್ಯನವರಿಗೂ ರಾಜಕೀಯವಾಗಿ ಬಹಳ ಜಿಜ್ಞಾಸೆ ಇತ್ತು. ಅವರು ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಯಿಸಿದ್ದಾರೆ. ಸರ್ಕಾರ ಎಂದರೆ ಹನುಮಂತಯ್ಯನವರೇ ಏನು? ಹನುಮಂತಯ್ಯ ಎಂದರೆ ದೇವರು ಅಂತಲೇ? ಈ ರೀತಿಯ ವ್ಯಾಖ್ಯಾನದ ಮೇಲೆ ಅವತ್ತು ಗುದ್ದಾಟ ಇತ್ತು. ಅವತ್ತಿನ ಗುದ್ದಾಟ ಗಂಧದ ಜೊತೆಯಲ್ಲಿ ಸರಸ ಇದ್ದಹಾಗೆ ಇತ್ತು. ಅವತ್ತಿನ ರಾಜಕಾರಣ ನಿಜವಾಗಿ ಅಷ್ಟು ವ್ಯತ್ಯಾಸ ಇದ್ದರೂ ನಾವು ಇವತ್ತು ಮಾನ್ಯ ಹನುಮಂತಯ್ಯನವರನ್ನು ನೆನೆಸಿಕೊಳ್ಳಬೇಕು. ಈ ಸದನದಲ್ಲಿ ನಾವು ಕುಳಿತು ನೆನೆಸಿಕೊಳ್ಳದಿದ್ದರೆ ಅವರಿಗೆ ನಾವು ನಿಜವಾಗಿಯೂ ಮಹಾ ದ್ರೋಹವನ್ನೂ ಪಾಪವನ್ನೂ ಮಾಡಿದಂತಾಗುತ್ತದೆ. ಇದರಲ್ಲಿ ಏನೂ ಅನುಮಾನವೇ ಇಲ್ಲ, ಮಾನ್ಯ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿ ಈ ಸದನದಲ್ಲಿ ಈ ಕುರ್ಚಿಯಲ್ಲಿ ಕುಳಿತುಕೊಳ್ಳಲಿಲ್ಲ. ಇದು ತಮಗೂ ಗೊತ್ತಿದೆ, ನನಗೂ ಗೊತ್ತಿದೆ.

ಅಧ್ಯಕ್ಷರು:- ಅಲ್ಲಿ ಕುಳಿತಿದ್ದರು.

ಶ್ರೀ ವಾಟಾಳ್ ನಾಗರಾಜ್:- ಅವರು ಮೊದಲನೇ ಸೀಟಿನಲ್ಲಿ ಕುಳಿತುಕೊಳ್ಳತಕ್ಕ ಅವಕಾಶ ಅವರಿಗೆ ಬರಲಿಲ್ಲ. ನಾನು ಇದನ್ನು ನೋಡಿದ್ದೇನೆ. ನನ್ನನ್ನು ಕಂಡರೆ ಮಾನ್ಯ ಹನುಮಂತಯ್ಯನವರಿಗೆ ಬಹಳವಾಗಿ ಪ್ರೀತಿ, ವಿಶ್ವಾಸ ಇತ್ತು. ಅವರನ್ನು ನಾನು ಬೀದಿ ಬೀದಿಗಳಲ್ಲಿ ಕರೆದುಕೊಂಡು ಹೋಗಿ ಸಭೆಗಳನ್ನು ಮಾಡಿದ್ದೇನೆ. ಅವರ ಸರಳವಾದ ಮಾತು, ಶಿಸ್ತಿನ ಜೀವನ ಬಹಳ ಚೆನ್ನಾಗಿತ್ತು. ಇವತ್ತು ಅವರೆಲ್ಲರೂ ನಮ್ಮ ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ. ಅವರು ಚರಿತ್ರೆಯ ಮಹಾ ಪುರುಷರ ಪಟ್ಟಿಗೆ ಸೇರಿರತಕ್ಕ ವ್ಯಕ್ತಿಗಳು.

ಅವರ ಬಗ್ಗೆ ಭ್ರಷ್ಟಾಚಾರದ ಆರೋಪಣೆ ಮಾಡಿದಾಗ ಎಂದರೆ ಈ ಸದನವನ್ನು ಕಟ್ಟುವಾಗ ಭ್ರಷ್ಟಾಚಾರವಾಗಿದೆ, ಲೂಟಿಯಾಗಿದೆ ಎಂದು ಹೇಳಿದಾಗ ಕರ್ನಾಟಕದವರನ್ನು ತನಿಖೆಗೆ ಹಾಕಿದರೆ ನಾನು ಅವರ ಮೇಲೆ ಒತ್ತಡ ತಂದನೇನೋ ಎನ್ನುವ ಭಾವನೆ ಬರುತ್ತದೆಂದು ಹೇಳಿ ಬೇರೆ ರಾಜ್ಯದವರನ್ನು ಅವರ ಮೇಲೆ ತನಿಖೆಗೆ ಹಾಕಿದರು. ತನಿಖೆಯಿಂದ ಹೊರಗಡೆ ಬಂದರು. ಇದು ಮಾನ್ಯ ಹನುಮಂತಯನವರ ದೃಷ್ಟಿಕೋನಗಳು, ಅವರ ವಿಚಾರಧಾರೆಗಳು. ನನಗನಿಸುತ್ತದೆ, ಪದೇ ಪದೇ ಮಾನ್ಯ ಹನುಮಂತಯ್ಯನವರ ಹೆಸರನ್ನು ಹೇಳುತ್ತಿರಲ್ಲವೆಂದರೆ, ಆ ಒಂದು ಪರಂಪರೆಯ ಹೆಸರನ್ನು ಪ್ರಾರ್ಥನೆಯ ರೂಪದಲ್ಲಿ ಹೇಳಬೇಕಾಗಿದೆ. ಬೆಳಿಗ್ಗೆ ಎದ್ದರೆ ದೇವರ ಪ್ರಾರ್ಥನೆಯನ್ನು ಯಾವರೀತಿ ಮಾಡುತ್ತೇವೆ, ಆ ರೀತಿಯಲ್ಲಿ ಇತ್ತೀಚಿನ ಪ್ರಜಾಪ್ರಭುತ್ವದಲ್ಲಿ ಅವರುಗಳನ್ನು ದೇವತೆಗಳೆಂದು, ದೇವರುಗಳೆಂದು ನಾವು ಪ್ರಾರ್ಥನೆ ಮಾಡಬೇಕಾಗಿದೆ. ಆದ್ದರಿಂದ ತಮಗೆ ನಾನು ಹೇಳುತ್ತೇನೆ ತಾವು ನಿಜವಾಗಿಯೂ ಒಳ್ಳೆಯ ಸುಸಂದರ್ಭದಲ್ಲಿ ಒಳ್ಳೆಯ ಮುಹೂರ್ತದಲ್ಲಿ ಸರ್ಕಾರದ ಕೆಲಸ ದೇವರ ಕೆಲಸ ಎನ್ನುವುದನ್ನು ತೆಗೆಸಿಹಾಕುವುದು ಬಹಳ ಒಳ್ಳೆಯದು. ಇಲ್ಲದಿದ್ದರೆ ಇದಕ್ಕೆ ಒಳ್ಳೆಯ ಗೌರವ ಬರುವುದಿಲ್ಲ. ಮತ್ತೆ ಅದನ್ನೇ ಅಂದುಕೊಂಡು ಅವರ ಹೆಸರನ್ನು ಇಟ್ಟುಕೊಂಡು ನಾವು ಬೀದಿಯಲ್ಲಿ ತಿರುಗಾಡುವುದಕ್ಕೆ ನಮಗೆ ಮಾನ ಮರ್ಯಾದೆ ಇರುವುದಿಲ್ಲ. ಆದ್ದರಿಂದ ಅದನ್ನು ತೆಗೆಸತಕ್ಕಂಥದ್ದು ತಮಗೆ ಸೇರಿದ್ದೆಂದು ತಮಗೆ ಸಲಹೆ ಕೊಟ್ಟಿರುತ್ತೇನೆ. ಮತ್ತೆ ಈ ಸದನಕ್ಕೆ ತಾವು ಬಹಳ ಮಹತ್ವವಾದ ಬೆಲೆಯನ್ನು ಕೊಟ್ಟು ಈಗಾಗಲೇ ಪೂಜ್ಯ ಮಹಾತ್ಮ ಗಾಂಧಿಜೀಯವರನ್ನು ಮೇಲಕ್ಕೆ ತೆಗೆದುಕೊಂಡು ಹೋಗಿದ್ದೀರಿ, ಹಾಗೆಯೇ ಪಕ್ಕದಲ್ಲಿ ಮಾನ್ಯ ಹನುಮಂತಯ್ಯನವರ ಚಿತ್ರಪಟವನ್ನು ಹಾಕಲು ಅದನ್ನು ಬರೆಯುವುದಕ್ಕೆ ಒಬ್ಬ ತಜ್ಞರು, ಒಳ್ಳೆಯ ಶ್ರೇಷ್ಠ ಚಿತ್ರಕಾರರಾದ ನಮ್ಮ ಮಧುಗಿರಿ ರಾಮು ಅವರಿಗೆ ಕೊಟ್ಟಿರುವುದನ್ನು ನಾನು ತಿಳಿದಿದ್ದೇನೆ. ಬಹಳ ಸಂತೋಷ. ಇದರ ಬಗ್ಗೆ ಕೂಡಲೇ ತೀರ್ಮಾನ ತೆಗೆದುಕೊಂಡು ಈ ಸದನದಲ್ಲಿ ಹಾಕಬೇಕು.

ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿನಗಳಲ್ಲಿ ಹೊಸ ಮೆಡಿಕಲ್ ಕಾಲೇಜುಗಳಿಗೆ ಮತ್ತು ತಾಂತ್ರಿಕ ಕಾಲೇಜುಗಳಿಗೆ ಈಗಾಗಲೇ ಬಹಳಷ್ಟು ಅನುಮತಿಯನ್ನು ಕೊಟ್ಟಿರುವುದರಿಂದ ಅವು ನಮ್ಮ ರಾಜ್ಯದಲ್ಲಿ ಗಲ್ಲಿಗೆ ಒಂದು, ಬೀದಿಗೆ ಒಂದು ಆಗಿಬಿಟ್ಟಿವೆ. ಇನ್ನೂ ನಿಮಗೆ ಬೇಕಾಗಿದೆಯೇ? ಏತಕ್ಕೆ ಬೇಕಾಗಿದೆ, ನಿಮ್ಮ ಉದ್ದೇಶವೇನು? ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರನ್ನು ಕೇಳುತ್ತೇನೆ. ನಿಮ್ಮ ಹೃದಯವನ್ನು ಬಿಚ್ಚಿ ಪ್ರಾಮಾಣಿಕವಾಗಿ ಇದು ಸರಿಯೇ, ವೈದ್ಯಕೀಯ ಕಾಲೇಜುಗಳು ಬೇಕೆ ಎಂದು ಹೇಳಿ. ನಿನ್ನೆ ನಾನು ಪತ್ರಿಕೆಗಳಲ್ಲಿ ಓದಿದೆ. ಮೈಸೂರು ವಿಶ್ವವಿದ್ಯಾನಿಲಯದವರು ಮೂರು ವೈದ್ಯಕೀಯ ಕಾಲೇಜುಗಳಿಗೂ ಮತ್ತು ಒಂದೆರಡು ಟೆಕ್ನಿಕಲ್ ಕಾಲೇಜುಗಳಿಗೆ ಪರವಾನಿಗೆ ಕೊಡಬೇಕೆಂದು ಶಿಫಾರಸು ಮಾಡಿದೆ ಎಂದು ಪತ್ರಿಕೆಗಳಲ್ಲಿ ಓದಿದೆ. ವಿಶ್ವವಿದ್ಯಾನಿಲಯಗಳೆಂದರೆ ಬಹಳ ಮಹತ್ತರವಾದ ಸ್ಥಾನ ಗೌರವವಿದೆ. ಅವು ಈ ರೀತಿ ಒತ್ತಡಕ್ಕೆ ಮಣಿದು ವ್ಯಾಪಾರಕ್ಕೆ ಮತ್ತೆ ವೈದ್ಯಕೀಯ ಕಾಲೇಜುಗಳನ್ನು ಕೊಡಲಿಕ್ಕೆ ಶಿಫಾರಸ್ಸು ಮಾಡಬಾರದು. ಇದರಿಂದ ವಿಶ್ವವಿದ್ಯಾನಿಲಯಗಳ ಘನತೆಗೆ ಧಕ್ಕೆ ಬರುತ್ತದೆ. ತಾವು ಸರ್ಕಾರದವರು ಈ ಬಗ್ಗೆ ಚಿಂತನೆ ಮಾಡಿ. ನಾನು ಯಾರ ಬಗ್ಗೆಯೂ ಆಕ್ಷೇಪ ಮಾಡುತ್ತಿಲ್ಲ. ಈ ವೈದ್ಯಕೀಯ ಕಾಲೇಜುಗಳು ಯಾವ ಮಟ್ಟದಲ್ಲಿ ನಡೆಯುತ್ತಿವೆ, ಅದರ ಭ್ರಷ್ಟಾಚಾರಗಳು ಯಾವ ಮಟ್ಟದಲ್ಲಿವೆ ಎಂದರೆ ಹಿಂದೆ ಪಾಳೆಗಾರರು ಇದ್ದ ಹಾಗೆ ಇದೆ. ಒಂದು ವೈದ್ಯಕೀಯ ಕಾಲೇಜು ಇದ್ದರೆ, ಒಬ್ಬ ಪಾಳೆಯಗಾರನಿದ್ದ ಹಾಗೆ. ಅವನೇ ಸಂಪೂರ್ಣ ಸರ್ವಸ್ವ, ರಾಜಕಾರಣಿಗಳನ್ನು ಹಿಡಿದಿಟ್ಟುಕೊಳ್ಳುತ್ತಾನೆ, ಎಲ್ಲವನ್ನು ಹಿಡಿದಿಟ್ಟುಕೊಳ್ಳುತ್ತಾನೆ. ಅಂಥ ಪರಿಸ್ಥಿತಿ ಒದಗಿದೆ. ಇಲ್ಲಿ ನಡೆಯತಕ್ಕಂಥ ವ್ಯಾಪಾರದ ಬಗ್ಗೆ ನಾನು ಹೇಳುತ್ತೇನೆ. ಈ ವೈದ್ಯಕೀಯ ಕಾಲೇಜುಗಳಲ್ಲಿ ತಯಾರಾಗತಕ್ಕಂಥ ವೈದ್ಯರುಗಳು ಯಾರು, ಅವಕಾಶ ಸಿಕ್ಕತಕ್ಕಂಥದ್ದು ಯಾರಿಗೆ ಸ್ವಾಮಿ. 100 ಕ್ಕೆ 80 ಭಾಗ ಹೊರಗಡೆಯವರಿಗೆ. ಕರ್ನಾಟಕದವರಿಗೆ 20 ಭಾಗ ಸಿಕ್ಕುವುದು ಕಷ್ಟ. 20 ಭಾಗಕ್ಕೂ ದುಡ್ಡು ಎಷ್ಟು, ಕ್ಯಾಪಿಟೇಷನ್ ಎಷ್ಟು? ಎಂದು ಸರ್ಕಾರದವರು ಹೇಳಿರುವುದು. ನಾವು ಒಂದು ಫೀಸ್‌ನ್ನು ನಿಗದಿ ಮಾಡಿದ್ದೇವೆಂದು ಹೇಳಿದರು. ಈ ಫೀಸ್ ನಿಗದಿ ಮಾಡದೆ ಇದ್ದರೆ ಬಹಳ ಚೆನ್ನಾಗಿರುತ್ತಿತ್ತು. ಹಿಂದೆ 3-3 ಲಕ್ಷ ರೂಪಾಯಿಗಳನ್ನು ಕೊಟ್ಟು ಹೊರಟು ಹೋಗುತ್ತಿದ್ದರು. ಈಗ ನಿಮಗೆ ಮೂರು ಲಕ್ಷ, ನಿಮಗೆ ಅಂದರೆ ಈ ಫೀಸಿಗೆ, ಅದಲ್ಲದೆ ಬೇರೆ ಎಂಟು

ಲಕ್ಷ, ಒಟ್ಟು 11 ಲಕ್ಷ ರೂಪಾಯಿಗಳು ಸ್ವಾಮಿ. ಈ ಒಂದು ವೈದ್ಯಕೀಯ ಪ್ರವೇಶಕ್ಕೆ ಒಬ್ಬರಿಗೆ ದೊರಕಬೇಕಾದರೆ 11 ಲಕ್ಷಕ್ಕೂ ಹೆಚ್ಚೇ ಹೊರತು ಕಡಿಮೆ ಇಲ್ಲ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಬಡ ರೈತನ ಮಗ 11 ಲಕ್ಷ ರೂಪಾಯಿ ಕೊಟ್ಟು ವೈದ್ಯಕೀಯ ಕಾಲೇಜಿಗೆ ಹೋಗಿ ಸೇರತಕ್ಕ ಶಕ್ತಿ, ತಾಕತ್ತು ಇದೆಯೆ? ತಾವು ಹೇಳಿದರೆ ನಾನು ಸಂತೋಷಪಡುತ್ತೇನೆ. ಆದರೆ ಎಂ. ಎಸ್. ರಾಮಯ್ಯ ಕಾಲೇಜನ್ನು ನೋಡಬೇಕು. ಅಲ್ಲಿ ದಿನಬೆಳಗಾದರೆ ಬಡಿದಾಟ. ಹೊರಗಡೆಯಿಂದ ಬಂದಿದ್ದಾರಲ್ಲ ಅವರಿಂದ ಸುತ್ತ ಅಶಾಂತ ವಾತಾವರಣ. ನಾನು ಯಾವ ಕಾಲೇಜನ್ನು ಕುರಿತು ಮಾತನಾಡಬೇಕೆಂದು ಅಲ್ಲ. ನಡೆದಿರತಕ್ಕ ಪರಿಸ್ಥಿತಿಯನ್ನು ನಾನು ಹೇಳುತ್ತಿದ್ದೇನೆ. ಯಶವಂತಪುರದ ಸುತ್ತ ದೊಡ್ಡ ಅಶಾಂತಿಯ ವಾತಾವರಣ, ಚಾಕು ಚೂರಿ, ಪಿಸ್ತೂಲುಗಳು, ಹುಡುಗಿಯರನ್ನು ಹೆದರಿಸತಕ್ಕದ್ದು ಎಲ್ಲ ನಡೆಯುತ್ತಿದೆ. ಅಲ್ಲಿ ಒಂದು ಬೇರೆ ರಾಷ್ಟ್ರವೇ ನಿರ್ಮಾಣವಾಗಿದೆ. ಇತ್ತೀಚಿನ ದಿನಗಳಲ್ಲಿ, ಮೆಡಿಕಲ್ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ 80 ಭಾಗ ಕರ್ನಾಟಕದಲ್ಲಿ ರಾಯಭಾರಿಗಳು ಇದ್ದಹಾಗೆ. ಹೊರಗಡೆಯಿಂದ ಬಂದಿದ್ದಾರಲ್ಲ ಅವರು ರಾಯಭಾರಿಗಳಾಗಿ ಬಂದು ಸೇರಿದಂತಾಗಿದೆ. ದಯವಿಟ್ಟು ಮತ್ತೆ ತಾವು ವೈದ್ಯಕೀಯ ಕಾಲೇಜುಗಳನ್ನು ಕೊಡತಕ್ಕ ಚಿಂತನೆಗೆ ಹೋಗಬಾರದೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈಗ ಕೊಟ್ಟಿರತಕ್ಕ ಕಾಲೇಜುಗಳ ಪರಿಸ್ಥಿತಿಯೇ ಸಾಕಾಗಿದೆ. ಮತ್ತೆ ಕೊಡುವುದಕ್ಕೆ ಹೋದರೆ ಇದು ವ್ಯಾಪಾರವಲ್ಲದೆ ಮತ್ತೆ ಏನೂ ಅಲ್ಲ. ಬರೀ ನಿಮ್ಮ ಸರ್ಕಾರವೇ ಎಲ್ಲವನ್ನು ಕೊಟ್ಟಿದೆ ಎಂದು ನಾನು ಹೇಳುವುದಿಲ್ಲ. ಹಿಂದಿನ ಸರ್ಕಾರದವರು ಕೂಡ ಕೊಟ್ಟಿದ್ದಾರೆ. ನಾನು ಇವರು ಕೊಟ್ಟಿಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ಹಿಂದೆ ಮಾನ್ಯ ಆರೋಗ್ಯ ಸಚಿವರಾಗಿದ್ದ ಶ್ರೀಮಾನ್ ಸಿಂಧ್ಯರವರಿಗೆ ಗೊತ್ತು ಮತ್ತು ಅದರಿಂದ ಅವರ ಮನಸ್ಸಿಗೆ ಕೂಡ ನೋವಾಗಿದೆ ಏಕೆ ಕೊಟ್ಟೆವೊ ಎಂದು. ಅವರನ್ನು ನಾನು ಈಗ ವಿವರಣೆ ಕೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ನಮ್ಮ ಸರ್ಕಾರ ಇದ್ದಾಗ, ನಾನು ಆರೋಗ್ಯ ಸಚಿವನಾಗಿದ್ದಾಗ ಮೆಡಿಕಲ್ ಕಾಲೇಜುಗಳನ್ನು ಕೊಟ್ಟಿರತಕ್ಕದ್ದು ನಿಜ. ಆದರೆ ಒಂದು ಮೆಡಿಕಲ್ ಸೀಟಿಗೆ 30 ಸಾವಿರ ಡಾಲರ್ ತೆಗೆದಕೊಳ್ಳುತ್ತಾರೆಂದು ಕನಸಿನಲ್ಲೂ ಎಣಿಸಿರಲಿಲ್ಲ. ನಾವು ಪಾಪದ ಕೆಲಸ ಮಾಡಿದ್ದೇವೆ ಎಂದು ನಮಗೆ ಅನ್ನಿಸುತ್ತದೆ. ದುಡ್ಡು ಎಲ್ಲಿ ತೆಗೆದುಕೊಳ್ಳುತ್ತಾರೆಂದರೆ ಪಿ. ಯು. ಸಿ. ಯಲ್ಲಿ ಇವರು ಹೇಳಿದ ಕಾಲೇಜಿಗೆ ಸೇರಿಸಬೇಕು. ದುಡ್ಡು ತೆಗೆದುಕೊಂಡು ಹೋಗಿ ವಿದೇಶಗಳಲ್ಲಿ ಡಿಪಾಸಿಟ್ ಮಾಡಬೇಕು. ಆ ಕಾಲೇಜಿನಲ್ಲಿ ಪಿಯುಸಿ ಓದಿದರೆ ಮೊದಲನೆ ಎಂಬಿಬಿಎಸ್‌ಗೆ ಸೀಟು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಇದನ್ನು ತಡೆಗಟ್ಟಲಿಲ್ಲವೆಂದರೆ ನಮ್ಮ ಕರ್ನಾಟಕದ ಕನ್ನಡದ ಮಕ್ಕಳಿಗೆ, ಹಳ್ಳಿಯ ರೈತರ ಮಕ್ಕಳಿಗೆ, ವೈದ್ಯಕೀಯ ಕಾಲೇಜಿನಲ್ಲಾಗಲಿ, ತಾಂತ್ರಿಕ ಕಾಲೇಜಿನಲ್ಲಾಗಲಿ ಪ್ರವೇಶ ದೊರಕುವುದಿಲ್ಲ. ನಾವು ವಿದೇಶದ ವಿದ್ಯಾರ್ಥಿಗಳನ್ನು ತಯಾರು ಮಾಡತಕ್ಕ ಕಾರ್ಖಾನೆಗಳಾಗಿದ್ದೇವೆ. ವೈದ್ಯಕೀಯ ಕಾಲೇಜುಗಳಲ್ಲಿ ಈ ರೀತಿ ಆಗಬಾರದು. ಅವರೇ ಒಪ್ಪಿಕೊಂಡ ಹಾಗೆ ನನ್ನ ಮನಸ್ಸಿಗೂ ನೋವಾಗುತ್ತದೆ. ಹಣವನ್ನು ಅವರು ಹೇಗೋ ತಂದುಕೊಟ್ಟು ಹೋಗುತ್ತಾರೆ. ಇದು ಸರಿಯಲ್ಲ. ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಬೇಕು. ಮಾನ್ಯ ನರಸಿಂಹ ಮೂರ್ತಿಯವರು ನಮ್ಮ ಸರ್ಕಾರ ಕೊಟ್ಟಿಲ್ಲ ಎಂದು ಹೇಳಿದರು. ಮುಂದೆ ಕೊಡುವುದಿಲ್ಲವೆ? ಏಕೆ ಬಾಯಿ ಮುಚ್ಚಿಕೊಂಡಿದ್ದೀರಿ ?

ಪ್ರೊ. ಎಂ. ಡಿ. ನಂಜುಂಡಸ್ವಾಮಿ:- ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಿರ್ಣಯ ಮಾಡಿ ಕಳುಹಿಸಿದ್ದೀರಿ. ನನಗೆ ಗೊತ್ತಿರುವ ಸುದ್ದಿ ಪ್ರಕಾರ, ಇನ್ನೂ 12 ಅರ್ಜಿಗಳು ಸರ್ಕಾರದ ಮುಂದಿವೆ. ಮಾನ್ಯ ಸಿಂಧ್ಯರವರಿಗೆ ನಾನು ಕೇಳುವುದು ಏನೆಂದರೆ, ಒಂದು ಸೀಟಿಗೆ 30 ಸಾವಿರ ಡಾಲರ್ ಆದರೆ ಒಂದು ಕಾಲೇಜಿಗೆ ಎಷ್ಟಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್:- ಅದಕ್ಕೆ ಉತ್ತರ ಕೊಡುವುದು ಬಹಳ ಕಷ್ಟ ಎಂದು ಹೇಳುತ್ತಿದ್ದಾರೆ. ತಾವು ಯಾವ ಧಾಟಿಯಲ್ಲಿ ಕೇಳಿದಿರಿ ಎಂದು ಗೊತ್ತಾಯಿತು. ನಾನು ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ರೀತಿ ಹೇಳಿ ನಾನು ರಾಜಕೀಯ ಮಾಡುವುದಕ್ಕೆ ಹೊರಟಿಲ್ಲ. ನಾನು ಪ್ರಾಮಾಣಿಕವಾಗಿ ನೋಡಿದ್ದೇನೆ. ಆ ಕಾಲೇಜುಗಳ ಪರಿಸ್ಥಿತಿ, ಅವುಗಳ ವ್ಯವಸ್ಥೆ ಮತ್ತು ನಮ್ಮ ಜನಗಳಿಗೆ ಆಗತಕ್ಕ ಅನ್ಯಾಯ, ಎಲ್ಲವನ್ನು ನಾನು ನೋಡಿದ್ದೇನೆ. ಇದಕ್ಕಾಗಿ ಒಂದು ತನಿಖಾ ಆಯೋಗವನ್ನು ರಚನೆ ಮಾಡಿ. ಆದರೆ ಸಚಿವ ಸಂಪುಟದ ಒಂದು ಉಪಸಮಿತಿಯನ್ನು ಮಾಡಬೇಡಿ. ಅದರಿಂದ ಏನೂ ಆಗುವುದಿಲ್ಲ. ಹಾರ, ತುರಾಯಿ, ಶಲ್ಯ ಹಾಕಿದರೆ ವರದಿ

ಬೇರೆ ರೀತಿ ಬರುತ್ತದೆ. ಅದು ಸರಿಯಾಗುವುದಿಲ್ಲ; ಪ್ರಾಮಾಣಿಕವಾಗಿ ತನಿಖೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ. ಈ ಒಂದು ಅವ್ಯವಸ್ಥೆಯನ್ನು ಸರಿಪಡಿಸಲು ಸೂಕ್ತ ವ್ಯವಸ್ಥೆ ಆಗಬೇಕೆಂದು ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ.

ಇನ್ನು ಗ್ರಾನೇಟ್ ಬಗ್ಗೆ ಈಗಾಗಲೇ ಸದನದ ಸಮಿತಿ ನೇಮಕವಾಗಿದೆ. ಆ ಸಮಿತಿಯ ಸಭೆಗಳು ನಡೆಯುತ್ತಿವೆ. ನಾನು ಮತ್ತು ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು, ಸಿಂಧ್ಯಾರವರು ಇನ್ನು ಅನೇಕ ಸದಸ್ಯರು ಆ ಸಭೆಗೆ ಹೋಗುತ್ತಿದ್ದೇವೆ. ಅಲ್ಲಿ ನಾವು ಅನೇಕ ಸಲಹೆಗಳನ್ನು ಮಾಡುತ್ತಿದ್ದೇವೆ. ಮತ್ತು ಸದನದಲ್ಲಿ ನನ್ನದೊಂದು ಖಾಸಗಿ ನಿರ್ಣಯವಿದೆ. ಗ್ರಾನೇಟ್ ಲೂಟಿಯನ್ನು ತಪ್ಪಿಸುವುದಕ್ಕೆ, ನೈಸರ್ಗಿಕ ಸಂಪತ್ತು ಉಳಿಯುವುದಕ್ಕೆ ಇದು ರಾಷ್ಟ್ರೀಕರಣವಾಗಬೇಕೆನ್ನುವುದು ನನ್ನ ಕಳಕಳಿ ಮತ್ತು ಒಂದು ಚಿಂತನೆ ಮಾಡಿದ್ದೇನೆ. ನಾನು ತಮಗೆ ತಿಳಿಸುವುದಾದರೆ, ಚಾಮರಾಜನಗರ, ಕೊಳ್ಳೇಗಾಲ ಮತ್ತು ಕನಕಪುರ ತಾಲ್ಲೂಕು- ಈ ಮೂರು ತಾಲ್ಲೂಕುಗಳಲ್ಲಿ ವರ್ಷಕ್ಕೆ ಸುಮಾರು 100 ಕೋಟಿ ರೂಪಾಯಿ ಗ್ರಾನೇಟ್ ಕಲ್ಲು ಲೂಟಿಯಾಗುತ್ತಿದೆ. ಈ ಮೂರು ತಾಲ್ಲೂಕುಗಳಿಂದ ನೂರು ಕೋಟಿ ರೂಪಾಯಿ. ಸರ್ಕಾರ ಸಂಪನ್ಮೂಲವನ್ನು ಜಾಸ್ತಿ ಮಾಡಬೇಕೆಂದೂ, ಸಂಪನ್ಮೂಲದ ಕಡೆಗೆ ದೃಷ್ಟಿಯನ್ನು ಹರಿಸಬೇಕೆಂದು ಹೇಳುವ ಸರ್ಕಾರ ಈ ಬಗ್ಗೆ ಕಣ್ಣನ್ನು ತೆರೆಯದೆ ಕುಳಿತುಕೊಂಡಿರತಕ್ಕ ಉದ್ದೇಶವೇನು? ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ತಮಗೆ ಹೇಳುವುದಾದರೆ, ಕನಕಪುರದಲ್ಲಿ ಗ್ರಾನೇಟ್ ಲೂಟಿಯಿಂದ ಬಹಳ ತೊಂದರೆಯಿದೆ. ಅರ್ಕಾವತಿಯ ಒಂದು ಯೋಜನೆ ಇದೆ. ಅದು ಮೊದಲು ಹಾರೋಬೆಲೆ, ಅದೊಂದು ದೊಡ್ಡ ಹಳ್ಳಿ, ಅಲ್ಲೊಂದು ಯೋಜನೆ. ಆ ಯೋಜನೆ 20 ಕೋಟಿ ರೂಪಾಯಿಯ ಯೋಜನೆ. ಈಗಾಗಲೇ ಈ ಯೋಜನೆಗೆ 5 ಕೋಟಿ ರೂಪಾಯಿ ಖರ್ಚಾಗಿದೆ. ಈ ಯೋಜನೆಯನ್ನು ತರುವುದಕ್ಕೆ ಬಹಳ ಜನ ಶ್ರಮವಹಿಸಿದ್ದಾರೆ. ಶ್ರೀಮಾನ್ ಎಸ್. ಕರಿಯಪ್ಪನವರನ್ನು ನಾವು ಇವತ್ತು ನೆನಪಿಸಿಕೊಳ್ಳಬೇಕು. ಅವರು ಅಲ್ಲಿನ ಸರ್ವೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಮತ್ತು ಮಾಜಿ ಶಾಸಕರು. ಪುಟ್ಟದಾಸ್‌ರವರೂ ಸಹ ಮಾಜಿ ಶಾಸಕರು. ಇತ್ತೀಚೆಗೆ ಅದರ ಪುನರುದ್ಧಾರ ಮಾಡುವುದಕ್ಕೆ ಮಾನ್ಯ ಸಿಂಧ್ಯಾರವರು ಮತ್ತು ಶಿವಕುಮಾರ್‌ರವರು, ಅದು ಬಹಳ ಗುಂಪು ಇದೆ ಇವೆಲ್ಲ ನಡೆದಿದೆ. ನಾನು ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಸುತ್ತ ಲೂಟಿ ನಡೆಯುತ್ತಿದೆ. ಅರ್ಕಾವತಿ ಯೋಜನೆ ಅದು 20 ಕೋಟಿ ರೂಪಾಯಿ ಯೋಜನೆ. ಅದರಿಂದ 20 ಸಾವಿರ ಎಕರೆ ಭೂಮಿ ನೀರಾವರಿಯಾಗುತ್ತದೆ. ಆ ಪ್ರದೇಶದ ಸುತ್ತಾ ಗ್ರಾನೈಟ್ ಲೂಟಿ ನಡೆಯುತ್ತಾ ಇದೆ. ಗ್ರಾನೇಟ್ ಲೂಟಿಯಾಗುವುದರಿಂದ, ಆ ಭೂಮಿ ಶಿಥಿಲವಾಗಿದೆ. ಭೂಮಿ ಶಿಥಿಲವಾಗಿರುವುದರಿಂದ ಇಡೀ ಜಲಾಶಯಕ್ಕೆ ಅಪಾಯ ಒದಗಿದೆ. ಅದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ, ಇದನ್ನು ಕೂಡಲೇ ತಪ್ಪಿಸಬೇಕಾಗಿದೆ. ಲೂಟಿ ಮಾಡುವವರು ಯಾರು ಸ್ವಾಮಿ? ಮುದ್ದೀರೇಶ್ವರ, ವೀರಮಣಿ, ರಿಚರ್ಡ್, ಷಾ ಕಂಪನಿ ಇವರಿಂದ ಲೂಟಿ ನಡೆಯುತ್ತಿದೆ. ಹಗಲು ದರೋಡೆ ನಡೆಯುತ್ತಿದೆ. ತಾವು 15 ವರ್ಷಗಳ ಹಿಂದೆ ಕನಕಪುರ ತಾಲ್ಲೂಕು ನೋಡಿದಾಗ ಎಷ್ಟು ರಮಣೀಯವಾಗಿತ್ತು, ನೈಸರ್ಗಿಕ ಸಂಪತ್ತನ್ನು ಹೊಂದಿತ್ತು ನಿಸರ್ಗ ದೇವತೆ ಇದ್ದಂತಹ ಜಾಗದಲ್ಲಿ ಇವತ್ತು ಏನಾಗಿದೆ? ಇವತ್ತು ಅರ್ಕಾವತಿ ಯೋಜನೆ ತೀವ್ರವಾಗಿ ತೊಂದರೆಗೆ ಸಿಗತಕ್ಕ ಪರಿಸ್ಥಿತಿಗೆ ಬಂದಿದೆ.

ಶ್ರೀ ಎಸ್. ಬಂಗಾರಪ್ಪ:- ನಿಸರ್ಗ ಸೌಂದರ್ಯದ ಬಗ್ಗೆ ವರ್ಣನೆಯನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ಅವರ ಭಾಷೆಯ ಶೈಲಿ ಬಹಳ ಚೆನ್ನಾಗಿದೆ. ಆ ಶೈಲಿಯಲ್ಲಿ ಬಹಳ ಚೆನ್ನಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಕಾವ್ಯ ರೂಪದಲ್ಲಿ ಆ ಶೈಲಿಯಲ್ಲಿ ನಾನು ಹೇಳಬಲ್ಲೆ. ರಾಷ್ಟ್ರಕವಿ ಕುವೆಂಪುರವರು ನಿಸರ್ಗದ ಬಗ್ಗೆ ಹೇಳಿರತಕ್ಕ ಶೈಲಿ ಎಷ್ಟು ರಮ್ಯವಾಗಿದೆ, ಎಷ್ಟು ಚೆನ್ನಾಗಿ ಅವರು ಹೇಳಿದ್ದಾರೆ. ಹಳೇಬೀಡು ಬೇಲೂರುಗಳ ಬಗ್ಗೆ ಎಷ್ಟು ಚೆನ್ನಾಗಿ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:- ಹಳೇಬೀಡು ಮತ್ತು ಬೇಲೂರು ಇವುಗಳೆಲ್ಲ ನಿಸರ್ಗದ ಸೌಂದರ್ಯಗಳಲ್ಲ, ಅದು ಶಿಲ್ಪಕಲೆಯ ಸೌಂದರ್ಯ. ತಾವು ನಿಸರ್ಗ ಸೌಂದರ್ಯದ ಬಣ್ಣನೆಯನ್ನು ವರ್ಣನೆ ಮಾಡುತ್ತಿರುವುದು ಅದು ರಂಜಿತವಾಗಿ ಒಡಮೂಡಿ ಬಂದರೆ ಅದನ್ನು ನಾವು ಕೇಳಿ ಧನ್ಯರಾಗುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ನಾನು ಹೇಳುತ್ತೇನೆ, ನಿಮ್ಮ ಮಾತು ನನಗೆ ಅರ್ಥವಾಯಿತು. ತಾವು ಬರೀ ಸಂಗೀತ ಅಭಿಮಾನಿಗಳಲ್ಲ ನಿಸರ್ಗದ ಅಭಿಮಾನಿಗಳು ಎನ್ನುವುದೂ ನನಗೆ ಅರ್ಥವಾಯಿತು. ದಯಮಾಡಿ ತಮ್ಮಲ್ಲಿ ಈ ಸಭೆಯ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ನಿಸರ್ಗದ ಸೌಂದರ್ಯವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ನಾಳೆಯಿಂದಲೇ ಈ ಗ್ರಾನೇಟ್ ಲೂಟಿಯಾಗುವುದನ್ನು ತಪ್ಪಿಸುವುದಕ್ಕೆ ಸಮರ್ಥನೀಯವಾದ ಕಾರ್ಯಕ್ರಮವನ್ನು

ತೆಗೆದುಕೊಳ್ಳಬೇಕೆಂದು ಈ ಮೂಲಕ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ತಮ್ಮ ಅಭಿಮಾನ ಅರ್ಥವಾಯಿತು. ನನಗೇನೂ ಇಲ್ಲ ನೀವು ನೋಡಿ ಕೇಳಿ ಯಾರಿಗೋ ಕೊಟ್ಟಿದ್ದೀರಿ ಅನ್ನುವ ಪ್ರಶ್ನೆಯಲ್ಲ.

ನೀವೂ ನನ್ನ ಜೊತೆಯಲ್ಲಿ ಬನ್ನಿ. ನಾವೂ, ನೀವೂ ಹಾಗೂ ಅಧ್ಯಕ್ಷರನ್ನೂ ಕರೆದುಕೊಳ್ಳೋಣ. ವಿರೋಧ ಪಕ್ಷದ ನಾಯಕರೂ ಬರಲಿ. ಕನಕಪುರ, ಕೊಳ್ಳೇಗಾಲ ಮತ್ತು ಚಾಮರಾಜನಗರ ಈ ಮೂರು ತಾಲ್ಲೂಕುಗಳಿಗೆ ಹೋಗೋಣ. ಈ ಪ್ರದೇಶವನ್ನು ನೋಡಿದರೆ ನನಗನ್ನಿಸುತ್ತದೆ, ಮೊದಲು ಇದ್ದಂತಹ ರಮಣೀಯವಾದಂತಹ, ಮತ್ತು ಸುಂದರವಾದಂತಹ, ಆ ಬೆಟ್ಟಗಳು, ಮಲೆಗಳು ಆ ಒಂದು ದೊಡ್ಡ ಸಸ್ಯ ಸಂಪತ್ತು ಹಾಗೂ ಆ ಮರಗಳ ಸಂಪತ್ತು ಮೊದಲು ಇದ್ದದ್ದು ಎಲ್ಲಿ ಹೋಯಿತು ಎಂದು. ತಾವು ಮೊದಲು ನೋಡಿದಾಗ ಇದ್ದದ್ದಕ್ಕೂ ಈಗ ಇರುವುದನ್ನು ತಾವು ನೋಡಿದರೆ ಪ್ರಾಮಾಣಿಕವಾಗಿ ತಾವು ಕಣ್ಣೀರು ಇಡುತ್ತೀರಿ. ಈಗ ಅಲ್ಲಿ ಪರಿಸ್ಥಿತಿ ಹಾಗಿದೆ. ಆದ್ದರಿಂದ ದಯಮಾಡಿ ಈ ಲೂಟಿಯನ್ನು ತಪ್ಪಿಸುವುದಕ್ಕೆ ತಾವು ಪ್ರಯತ್ನಪಡಿ ಮತ್ತು ಇದನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿ. ಸರ್ಕಾರಕ್ಕೆ ಉತ್ಪನ್ನ ಬೇಕು ತಾನೇ? ನನ್ನ ಅಂಕಿ ಅಂಶದ ಪ್ರಕಾರ, ಸರ್ಕಾರವೇ ವ್ಯವಸ್ಥಿತವಾಗಿ ಕಲ್ಲನ್ನು ತೆಗೆದರೆ ನಿಸರ್ಗ ಸಂಪತ್ತನ್ನೂ ಉಳಿಸಬಹುದು, ಪರಿಸರಕ್ಕೆ ಅಪಾಯವಾಗದಂತೆಯೂ ನೋಡಿಕೊಳ್ಳಬಹುದು. ಈ ರೀತಿ ಕಲ್ಲು ತೆಗೆಯುವುದಾದರೆ ಕನಿಷ್ಟ ಪಕ್ಷ ವರ್ಷಕ್ಕೆ 800 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ. ಆದ್ದರಿಂದ ತಾವು ರಾಷ್ಟ್ರೀಕರಣ ಮಾಡಿ. ನಾನು ನಿಮಗೆ ಪ್ರಾಮಾಣಿಕವಾಗಿ ಹೇಳುತ್ತೇನೆ. ಇದನ್ನು ಸವಾಲು ಎಂದು ಪರಿಗಣಿಸದೇ ಸಲಹೆ ಎಂದು ತೆಗೆದುಕೊಳ್ಳಿ. ಇದರಿಂದ ನಿಸರ್ಗದ ನಷ್ಟ ಅಷ್ಟೇ ಅಲ್ಲದೆ, ಸರ್ಕಾರದ ಖಜಾನೆಗೆ ಬರುವ ಹಣವೂ ನಷ್ಟವಾಗುತ್ತಿದೆ. ಇದಲ್ಲದೇ ಕರ್ನಾಟಕದ ಉದ್ದಗಲಕ್ಕೂ ಇರುವ ಲೋಕೋಪಯೋಗಿ ರಸ್ತೆಗಳು ಸಂಪೂರ್ಣವಾಗಿ ಶಿಥಿಲವಾಗುತ್ತಿವೆ. ಗ್ರಾನೈಟ್ ಬಗ್ಗೆ ರಚಿಸಿರುವ ಸದನ ಸಮಿತಿಗೆ ಲೋಕೋಪಯೋಗಿ ಕಾರ್ಯದರ್ಶಿಗಳು ಒಂದು ಟಿಪ್ಪಣಿಯನ್ನು ಕೊಟ್ಟಿದ್ದಾರೆ. ಇವತ್ತು ಒಂದು ಲಾರಿಯಲ್ಲಿ ಹೆಚ್ಚೆಂದರೆ 10 ಟನ್ ಕಲ್ಲು ಹಾಕುವ ಕಡೆ 15 ಟನ್ ಗ್ರಾನೈಟ್ ಕಲ್ಲನ್ನು ತುಂಬಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಯಲ್ಲಿ ಪ್ರಯಾಣ ಮಾಡುವ ಸಂದರ್ಭದಲ್ಲಿ ರಸ್ತೆಗಳು ಹಾಳಾಗುವುದಲ್ಲದೇ ಸೇತುವೆಗಳು ಶಿಥಿಲಗೊಳ್ಳುತ್ತಿವೆ ಎಂದು ತಿಳಿಸಲಾಗಿದೆ. ಇದನ್ನು ಯಾರೂ ನೋಡುವುದಿಲ್ಲ. ಯಾರೋ ಕೆಲಸಕ್ಕೆ ಬಾರದವರು, ಅನಾಮಧೇಯರು, ಅಯೋಗ್ಯರು, ಅವಿವೇಕಿಗಳು ಕೋಟ್ಯಾಂತರ ರೂಪಾಯಿ ಲೂಟಿ ಮಾಡುವ ಜನರಿಗೆ ನಾವು ಇದನ್ನು ಕೊಡುವುದಾದರೆ ಏನು ಪ್ರಯೋಜನ? ಅದರಿಂದ ಸರ್ಕಾರದ ಖಜಾನೆಗೆ ಹಣ ಬಂದಿದ್ದರೆ ನಾನು ಸಂತೋಷಪಡುತ್ತಿದ್ದೆ. ಅದರಿಂದ ರಾಜ್ಯದ ಅಭ್ಯುದಯಕ್ಕೆ ಅಭಿವೃದ್ಧಿ ಕಾರ್ಯಗಳಿಗೆ ಬಹಳ ಅನುಕೂಲವಾಗುತ್ತದೆ. ಚಾಮರಾಜ ನಗರದಲ್ಲಿ "ಬೆಲ್ಲದ ಜಲಾಶಯ" ಎಂದು ಇದೆ. ಅದರ ಸುತ್ತ ಕರಡಿಗುಡ್ಡ ಎಂದು ಇದ್ದು ಅಲ್ಲೂ ಕಲ್ಲು ಲೂಟಿಯಾಗುತ್ತಿದ್ದು ಇದರಿಂದ ಆ ಜಲಾಶಯಕ್ಕೆ ಅಪಾಯ ಇದೆ. ಕೊಳ್ಳೇಗಾಲ ಪ್ರದೇಶದಲ್ಲಿ ಯಾವ ವೀರಪ್ಪನ್ನನ್ನು ಈ ಸರ್ಕಾರ ಹಿಡಿಯುವುದಕ್ಕೆ ಆಗುತ್ತಾ ಇಲ್ಲ. ಅದಕ್ಕೆ ಕಾರಣ ಏನೆಂದರೆ ಈ ಗ್ರಾನೈಟ್ ಲೂಟಿ. ಕಾಡಿನಲ್ಲಿ ಇದು ಹೆಜ್ಜೆ ಹೆಜ್ಜೆಗೂ ನಡೆಯುತ್ತಿದೆ. ಈ ಲೂಟಿಯಿಂದ ಗ್ರಾನೈಟ್ ಲೂಟಿ ಮಾಡುವವರು ಯಾರು, ಗಂಧ ಲೂಟಿ ಮಾಡುವವರು ಯಾರು, ಆನೆ ದಂತ ಲೂಟಿ ಮಾಡುವವರು ಯಾರು, ಎಂದು ಗೊತ್ತಾಗುವುದಿಲ್ಲ. ಇದರರಿಂದ ಶಾಂತಿಭಂಗ ಆಗಿದೆ. ವೀರಪ್ಪನ್‌ನ ಹಿಡಿಯತಕ್ಕ ಶಕ್ತಿ ನಮ್ಮ ಸರ್ಕಾರಕ್ಕೆ ಇನ್ನೂ ಬರಲಿಲ್ಲವಲ್ಲ ಎನ್ನುವ ಒಂದು ಚಿಂತನೆ ಇದೆ. ನಾನು ಶ್ರೀಮಾನ್ ವೀರೇಂದ್ರ ಪಾಟೀಲರ ಕಾಲದಿಂದಲೂ ನೋಡುತ್ತಿದ್ದೇನೆ. ಅವರು ಒಂದು ದಿವಸ ಹೇಳಿದರು. ಇನ್ನು 3 ತಿಂಗಳ ಒಳಗೆ ಆತನನ್ನು ಹಿಡಿದು ತೆಗೆದುಕೊಂಡು ಬಂದುಬಿಡುತ್ತೇವೆಂದು ಹೇಳಿದರು. ಅದು ಆಗಲಿಲ್ಲ. ಆದಾದಮೇಲೆ ಮತ್ತೆ ಇದೇ ಸದನದಲ್ಲಿ, ಬಹಳ ಬೇಗ ಹಿಡಿದು ತರುತ್ತೇವೆ ಎಂದು ಹೇಳಿದರು. ಅದೂ ಆಗಲಿಲ್ಲ. ಈಗ ಶ್ರೀ ಶಂಭುನಾಥ್ ಹಾಗೂ ಶ್ರೀ ಧರ್ಮಸಿಂಗ್ ಅವರು ಮನಸ್ಸು ಮಾಡಿದ್ದಾರೆ. ಹಿಡಿದುಕೊಂಡು ಬರುತ್ತೇವೆಂದು ಹೇಳಿದರು. ಯಾವಾಗ ಹಿಡಿದುಕೊಂಡು ಬರುತ್ತಾರೋ ಗೊತ್ತಿಲ್ಲ. ಇನ್ನು ಎಷ್ಟು ಜನ ಸಾಯಬೇಕೋ ಎಷ್ಟು ಜನರ ತಲೆಗಳು ಉರುಳಬೇಕೋ, ನಮಗೆ ನಾಚಿಕೆಯಾಗುತ್ತದೆ. ಒಬ್ಬ ಅರಣ್ಯ ಅಧಿಕಾರಿ ಶ್ರೀನಿವಾಸ್ ಅವರ ತಲೆ ಕತ್ತರಿಸಿದ್ದು ಅವರ ರುಂಡ ಇದುವರೆಗೂ ಸಿಕ್ಕಿಲ್ಲ. ನಮ್ಮಲ್ಲಿ ಏನೂ ವ್ಯವಸ್ಥೆ ಇಲ್ಲವೋ? ಎಲ್ಲಿ ಹೋಗಿದೆ ಆ ರುಂಡ? ನೀವು ನಿಲ್ಲಿಸುವುದು ಬೇಡ. ರುಂಡವನ್ನು ತರತಕ್ಕ ಸಾಮರ್ಥ್ಯ ನಮ್ಮಲ್ಲಿ ಇಲ್ಲ. ಆ ಇಡೀ ಪ್ರದೇಶವನ್ನೇ ಸಂಪೂರ್ಣವಾಗಿ ನಿಷಿದ್ಧ ಪ್ರದೇಶ ಎಂದು ಮಾಡಿ. ಪೋಲೀಸ್ ವ್ಯವಸ್ಥೆ ಬಗ್ಗೆ ನಾನು ಮಾತನಾಡುವುದಿಲ್ಲ. ನಮಗೆ ಇವತ್ತು ಕೆಲಸ ಆಗಬೇಕು. ದಯಮಾಡಿ ಆ ಪ್ರದೇಶವನ್ನು, ಆ ಕಾಡನ್ನು ಸೈನ್ಯಕ್ಕೆ ಒಪ್ಪಿಸೋಣ. ನಮ್ಮಲ್ಲಿ ಒಳ್ಳೊಳ್ಳೆಯ ದೊಡ್ಡ ದೊಡ್ಡ ಹೆಸರಾಂತ ಅಧಿಕಾರಿಗಳು ಇದ್ದಾರೆ. ಏಕೆ ಇವರ ಕೈಯ್ಯಲ್ಲಿ ಆಗುತ್ತಾ ಇಲ್ಲ ಎನ್ನುವ ನೋವು ದುಗುಡ ನಮ್ಮ ಮನಸ್ಸಿನಲ್ಲಿ ಇದೆ. ಸರ್ಕಾರ ಇದನ್ನು ಒಂದು ಸವಾಲು ಎಂದು ತೆಗೆದುಕೊಂಡು ಆ ಪ್ರದೇಶವನ್ನು

ಸೈನ್ಯಕ್ಕೆ ವಹಿಸಬೇಕು. ದೇಶದಲ್ಲಿ ಇದಕ್ಕಿಂತಲೂ ದೊಡ್ಡ ಭಯಂಕರ, ಭಯಾನಕ ಕಾಡುಗಳು ಇಲ್ಲವೇನು? ಬೇಕಾದಷ್ಟು ಇವೆ.

ನಮ್ಮ ಕಾಡು ಏನು? ಆ ಕಾಡಿನಲ್ಲಿ ನುಗ್ಗಿ ವೀರಪ್ಪನನ್ನು ಹಿಡಿಯುವುದಕ್ಕೆ ಆಗಲಿಲ್ಲವೆಂದರೆ, ಪರಿಸ್ಥಿತಿ ಏನು? ವಾಟಾಳ್ ನಾಗರಾಜ್ ಶಾಸನಸಭೆಯಲ್ಲಿ ಮಾತನಾಡಿದರೆ ನಿಮಗೂ ಅಪಾಯ ತಪ್ಪಿದ್ದಲ್ಲವೆಂದು ಹೇಳಿದ್ದಾರೆ. ನನಗೆ ಅಪಾಯ ಬರಲಿ. ಒಟ್ಟಿನಲ್ಲಿ ಎಲ್ಲಿಯವರೆಗೆ ದೇವರ ಕೃಪೆಯಲ್ಲಿರಬೇಕೋ ಅಲ್ಲಿಯವರೆಗೆ ಇರುತ್ತೇವೆ. ಅದಕ್ಕೋಸ್ಕರ ನಾನು ನನ್ನ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳತಕ್ಕ ಪರಿಸ್ಥಿತಿ ಬೇಡ. ಈ ವಿಚಾರ ತಮಗೂ ಗೊತ್ತಿದೆ. ನನಗೆ ಬಂದಿರುವ ಪತ್ರಗಳನ್ನು ತಮಗೆ ಕೊಟ್ಟಿದ್ದೇನೆ. ಇದು ಸರ್ಕಾರಕ್ಕೂ ಗೊತ್ತಿದೆ. ಒಂದು ಛಲ ತೆಗೆದುಕೊಳ್ಳಿ, ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಒಂದು ಸವಾಲು ತೆಗೆದುಕೊಳ್ಳಿ. ಇದಕ್ಕೆ ಏನಾದರೂ ಮಾಡಿ ಹೊರಗಡೆ ತಂದು ಎಳೆಯಬೇಕು. ಹಾಗೆ ಮಾಡಿದರೆ ನಿಮಗೆ ಒಂದು ಒಳ್ಳೆಯ ಹೆಸರು ಬರುತ್ತದೆ. ಆವೊಂದು ದಿಸೆಯಲ್ಲಿ ತಾವು ಈ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ತಾವು ಐದು ಯೋಜನೆಗಳನ್ನು ಹಾಕಿದ್ದೀರಿ. ಆಶ್ರಯ, ಆರಾಧನ, ಶುಶ್ರೂಷ ಅಕ್ಷಯ ಹೆಸರುಗಳು ಬಹಳ ರಮ್ಯವಾಗಿವೆ; ಬಹಳ ಅತ್ಯಂತ ಸುಂದರವಾಗಿವೆ. ಇದಕ್ಕೆ ಒಬ್ಬೊಬ್ಬರು ಮಂತ್ರಿಗಳು. ಆಶ್ರಯಕ್ಕೆ ಶ್ರೀಮಾನ್ ಜಾರ್ಜ್‌ರವರು. ಶುಶ್ರೂಷೆಗೆ ಶ್ರೀಮಾನ್ ಪುಟ್ಟಸ್ವಾಮಿಗೌಡರು. ಹಳ್ಳಿಗಳಿಗೆ ಹೋಗಿ ತಪಾಸಣೆ ಮಾಡುವುದು ನಿಮ್ಮ ಕೆಲಸ. ನಾಲ್ಕು ಕೋಟಿ ಜನರಲ್ಲಿ ತಾವು ಎಷ್ಟು ಜನರನ್ನು ನೋಡಿದ್ದೀರಿ? ಎಷ್ಟು ಜನರ ಕೈ ಮುಟ್ಟಿದ್ದೀರಿ, ಕಾಲು ಮುಟ್ಟಿದ್ದೀರಿ ಎಂಬುದನ್ನು ಹೇಳಿ ನೋಡೋಣ, ನಮಗೆ ಗೊತ್ತಾಗುತ್ತದೆ. ಅದನ್ನು ತಾವು ಆಮೇಲೆ ಹೇಳಿ; ನಮಗೆ ಸಂತೋಷ. ಬೀದಿ ಬೀದಿಯಲ್ಲಿ ವೈದರುಗಳನ್ನು ಕಳುಹಿಸಿ ನಾಲ್ಕು ಕೋಟಿ ಜನರಲ್ಲಿ ಎಷ್ಟು ಜನರನ್ನು ತಪಾಸಣೆ ಮಾಡಿಸಿದ್ದೀರಿ? ನಿಮ್ಮ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳೇ ಇಲ್ಲ, ಅಂತಹದ್ದರಲ್ಲಿ ನೀವು ಹಳ್ಳಿಗಳಿಗೆ ವೈದರುಗಳನ್ನು ಕಳುಹಿಸಿ ಮಲಗಿದ್ದವರನ್ನು ಎಬ್ಬಿಸಿ, ಕುಳಿತವರನ್ನು ಏಳಿಸಿ, ಚಾವಡಿಯಲ್ಲಿರುವವನನ್ನು ಬೇವಿನಮರದ ಕೆಳಗೆ ಇರುವವನನ್ನು ಏಳಿಸಿ ನಿನಗೆ ಯಾವ ರೋಗ ಬಂದಿದೆ, ಕಣ್ಣು ಚೆನ್ನಾಗಿದೆಯೆ, ಹೊಟ್ಟೆ ನೋವೇ ಎಂದು ಕೇಳಿದ್ದನ್ನು ನಾನಂತೂ ಕಣ್ಣಾರೆ ಕಂಡಿಲ್ಲ, ಮುಂದೆ ನೋಡೋಣ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಕರ್ನಾಟಕ ರಾಜ್ಯದ ನಾಲ್ಕುವರೆ ಕೋಟಿ ಜನರನ್ನು ಏಕ ಕಾಲದಲ್ಲಿ ತಪಾಸಣೆ ಮಾಡುತ್ತೇವೆಂದು ನಾವು ಹೇಳಲಿಲ್ಲ. ಯಾರಿಗೆ ಅಗತ್ಯವಿದೆಯೋ ಈವೊಂದು ಶುಶ್ರೂಷೆಯ ಅಗತ್ಯವಿರುವವರಿಗೆ ಅಂತಹವರಿಗೆ ಮಾತ್ರ ಇದು. ಅದನ್ನು ತಿಳಿದುಕೊಂಡು ಮಾತನಾಡಿದರೆ ನಮಗೆ ಸಹಾಯವಾಗುತ್ತದೆ. ನರರೋಗಕ್ಕೆ ಸಂಬಂಧಪಟ್ಟಹಾಗೆ ನಿಮ್ಹಾನ್ಸ್‌ಗೆ ಮತ್ತು ಕ್ಯಾನ್ಸರ್ ರೋಗವಿದ್ದರೆ ಕಿದ್ವಾಯಿ ಆಸ್ಪತ್ರೆಗೆ ಬರುವುದಕ್ಕಾಗುವುದಿಲ್ಲ. ಇರತಕ್ಕ ರೋಗವನ್ನು ಸ್ಥಳದಲ್ಲಿಯೇ ಚಿಕಿತ್ಸೆ ಮಾಡಿ, ಅದರ ಬಗ್ಗೆ ತಪಾಸಣೆಯನ್ನು ಮಾಡಿ ಇಂತಹ ಆಸ್ಪತ್ರೆಗಳಿಗೆ ಹೋಗಿಯೆಂದು ವರದಿ ಕೊಟ್ಟಾಗ ಅವರು ಸಂಬಂಧಪಟ್ಟ ಆಸ್ಪತ್ರೆಗಳಿಗೆ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ನನಗೆ ಇಂತಹ ಕಾಯಿಲೆ ಇದೆಯೆಂದು ನಿಮಗೆ ಅರ್ಜಿಯನ್ನು ಹಾಕಿಕೊಳ್ಳಬೇಕು. ಜಿಲ್ಲೆ, ತಾಲ್ಲೂಕು, ಹೋಬಳಿವಾರು ಇದಕ್ಕೆ ಅರ್ಜಿಯನ್ನು ಹಾಕಿಕೊಳ್ಳಬೇಕು. ಅರ್ಜಿ ಬರೆಯುವುದಕ್ಕೆ ಒಬ್ಬರು ಶ್ಯಾನುಭೋಗರು. ಅದಕ್ಕೆ ದುಡ್ಡು, ಇಂಕು, ಪೇಪರ್. ನಮ್ಮನ್ನು ನೋಡಿ ತಪಾಸಣೆ ಮಾಡಿಸಿಕೊಳ್ಳಲಿಕ್ಕೆ ದುಡ್ಡು ಖರ್ಚು, ಇದೊಂದು ಶಿಕ್ಷೆ. ಅರ್ಜಿ ಬರೆಸುವುದಕ್ಕೆ ದುಡ್ಡು, ಅರ್ಜಿ ಸಲ್ಲಿಸುವುದಕ್ಕೆ ದುಡ್ಡು. ಇದರಿಂದ ಅವರ ಆರೋಗ್ಯ ತೀರಾ ಕೆಟ್ಟು ಹೋಗುತ್ತದೆ. ಇರುವ ಆರೋಗ್ಯವೂ ಹಾಳಾಗಿ ಹೋಗುತ್ತದೆ. ಇವತ್ತು ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸರಿಪಡಿಸಿದರೆ ಸಾಕು. ಜನಗಳನ್ನು ಏತಕ್ಕೆ ನೋಡುವುದಕ್ಕೆ ಹೋಗುತ್ತೀರಿ? ಜನಗಳನ್ನು ಭೇಟಿ ಮಾಡುವುದನ್ನು ಬಿಟ್ಟು ದಯಮಾಡಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಳ್ಳೆಯ ಔಷಧಿ ಕೊಡಿ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಏನಿದೆ ಎಂದು ತಾವು ಹೋಗಿ ನೋಡಿದ್ದೀರಾ? ಅಧ್ಯಕ್ಷರು ಮದ್ದೂರಿನಲ್ಲಿ ನೋಡಿರಬೇಕು. ಅಲ್ಲಿ ಒಂದು ಟೇಬಲ್ ಇಟ್ಟಿರುತ್ತಾರೆ. ಅದರ ಮೇಲೆ ಏಳೆಂಟು ಸೀಸೆಗಳನ್ನು ಇಟ್ಟಿರುತ್ತಾರೆ. ಅವುಗಳಲ್ಲಿ ಕೆಂಪು, ಹಳದಿ ಮತ್ತು ಬಿಳಿ ಬಣ್ಣದ ನೀರನ್ನು ಇಟ್ಟಿರುತ್ತಾರೆ. ಯಾರಾದರೂ ಆಸ್ಪತ್ರೆಗೆ ಹೋದರೆ ಏನಯ್ಯ ತಲೆನೋವಾ ಎಂದು ಕೇಳಿ ಸೀಸೆಯನ್ನು ಅಲ್ಲಾಡಿಸಿ ಗ್ಲಾಸಿಗೆ ಸುರಿದು ತಗೋ ಕುಡುಕೋ ಎಂದು ಕೊಡುತ್ತಾರೆ. ಅದನ್ನು ಕುಡಿದ ಮೇಲೆ ಅವನಿಗೆ ತಲೆನೋವು ಹೋಗಿ ವಾಂತಿ ಭೇದಿ ಶುರುವಾಗುತ್ತದೆ. ಇದು ನಮ್ಮ ಆರೋಗ್ಯ ಕೇಂದ್ರಗಳ ಪರಿಸ್ಥಿತಿ.

ಶ್ರೀ ಬಿ.ಎಂ. ಇದಿನಬ್ಬ:- ಇದು ಯಾವ ಆರೋಗ್ಯದ ಕೇಂದ್ರ ಪರಿಸ್ಥಿತಿ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಆರೋಗ್ಯಕೇಂದ್ರಗಳಲ್ಲಿ ಸರಿಯಾದ ರೀತಿಯಲ್ಲಿ ಔಷಧಿಯನ್ನು ಕೊಡುತ್ತಿದ್ದಾರೆ. ಮಾನ್ಯ ಸದಸ್ಯರು ಎಲ್ಲಿಯ ಕತೆಯನ್ನು ಹೇಳುತ್ತಿದ್ದಾರೋ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇದು ನಮ್ಮ ಆಸ್ಪತ್ರೆಯ ಪರಿಸ್ಥಿತಿ. ಇದು ಟಿ. ನರಸೀಪುರದ ಪರಿಸ್ಥಿತಿ. ನಮ್ಮ ತಾಲ್ಲೂಕಿನಲ್ಲೂ ಇದೇ ಮಟ್ಟಕ್ಕೆ ಆರೋಗ್ಯಕೇಂದ್ರಗಳು ಇಳಿದಿವೆ. ತಮ್ಮ ಕಾಲದಲ್ಲಿ ಹೇಗಿತ್ತೊ ಗೊತ್ತಿಲ್ಲ, ಮಾನ್ಯ ಸಿಂಧ್ಯಾರವರು ಆರೋಗ್ಯ ಸಚಿವರಾಗಿದ್ದಾಗ ಇದೇ ರೀತಿ ಕೆಂಪುನೀರು ಹಳದಿ ನೀರು ಕೊಡುತ್ತಿದ್ದರೊ ಏನೋ ಗೊತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ನಾನು ಸ್ವಲ್ಪ ದಿವಸ ಆರೋಗ್ಯ ಸಚಿವನಾಗಿದ್ದೆ. ಆಗ ಈ ತರಹ ಶುಶ್ರೂಷೆ ಮಾಡುತ್ತೇವೆಂದು ಹೇಳಿ ಡಂಗೂರ ತಮಟೆ ಹೊಡೆಯುವುದಕ್ಕೆ ಹೋಗಿರಲಿಲ್ಲ. ಯಾರಾದರೂ ರೋಗಿಗಳು ಬಂದರೆ ಆಸ್ಪತ್ರೆಗೆ ಹೋಗಿ ಎಂದು ಹೇಳುತ್ತಿದ್ದೆವು.

ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಬಂದಿರಬೇಕು. ಶ್ರೀ ಪುಟ್ಟಸ್ವಾಮಿಗೌಡರ ಸರ್ಕಾರದ ಆಸ್ಪತ್ರೆಗಳು ಯಾವ ಸ್ಥಿತಿಗೆ ಬಂದಿವೆ ಎಂದರೆ, ಮಂಡ್ಯ ಸರ್ಕಾರಿ ಆಸ್ಪತ್ರೆಯಲ್ಲಿ ಹೋದ ತಿಂಗಳು ಒಬ್ಬ ಪೇಶಂಟ್ ಅಡ್ಮಿಟ್ ಆಗಿದ್ದನಂತೆ. ಅವನ ಕಾಲಿಗೆ ಆಪರೇಶನ್ ಆಯಿತು. ಅವನು ಅಲ್ಲಿಂದ ಹೋಗುವಾಗ ಅವನ ಒಂದು ಕಾಲು ಉದ್ದ, ಇನ್ನೊಂದು ಕಾಲು ಚಿಕ್ಕದು ಆಯಿತು. ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಅವನು ಶಾಪ ಹಾಕುತ್ತಾ ಡಾಕ್ಟರನ್ನು ಕೇಳುವುದಕ್ಕೆ ಹೋದರೆ ಆಸ್ಪತ್ರೆಯಿಂದ ಹೊಡೆದು ಓಡಿಸಿದ್ದಾರಂತೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಇಂತಹ ಪರಿಸ್ಥಿತಿ ಬರಬೇಕಾದರೆ ಇದು ಒಂದು ದಿವಸದ್ದು ಅಲ್ಲ. ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರುವ ಪರಿಸ್ಥಿತಿಯ ಫಲ ಇವತ್ತು ಹೀಗೆ ನಡೆದಿದೆ.

ಶ್ರೀ ವಾಟಾಳ್ ನಾಗರಾಜ್:- ನಾನು ರಾಜಕೀಯವಾಗಿ ಹೇಳುತ್ತಿಲ್ಲ, ಇದು ನಡೆದಿರುವುದು. ಇನ್ನು ಕೆಲವು ಕಡೆ ತಾವು ನೋಡಿರಬಹುದು. ಹೊಟ್ಟೆ ಕುಯ್ಯುವುದಕ್ಕೆ ಹೋಗಿ, ಅದರೊಳಗೆ ಕತ್ತರಿ ಇಟ್ಟು ಹೊಲೆದಿರುವುದನ್ನು ನೋಡಿದ್ದೇವೆ. ಡಾಕ್ಟರ್‌ಗಳು ಹೊಟ್ಟೆ ಕೊಯ್ಯುವುದು, ಕತ್ತರಿ ಒಳಗಿಟ್ಟು ಹೊಲಿಗೆ ಹಾಕಿದರೆ, ಕತ್ತರಿ ಒಳಗೆ ಇರುತ್ತದೆ. ಅದನ್ನು ತೆಗೆಯುಲಿಕ್ಕೆ ಮತ್ತೊಂದು ಆಪರೇಶನ್. ಕೊನೆಗೆ ಹೊಟ್ಟೆ ಕೊಯಿಸಿಕೊಂಡು, ಕೊಯಿಸಿಕೊಂಡು ಸಾಯುವುದು ಅವನಿಗೆ ಉಳಿದಿರುವ ಮುಕ್ತಿ. ಈ ರೀತಿ ಅನೇಕ ಕಡೆ ನಡೆದಿದೆ. ಇದನ್ನು ದಯವಿಟ್ಟು ತಾವು ನೋಡಬೇಕು. ಕೆಲವು ಆಸ್ಪತ್ರೆಗಳು ನರಕವಾಗಿವೆ. ಕೆ. ಆರ್. ಆಸ್ಪತ್ರೆಯಲ್ಲಿ ರೋಗಿಗಳು ಮಲಗತಕ್ಕಂಥ ಕಡೆ ನರಕವಾಗಿದೆ. ಮಾನ್ಯ ಶ್ರೀ ಸಿಂಧ್ಯರವರೆ ನೀವು ಎಂದಲ್ಲ, ನೀವು ನಿಮಿತ್ತ ಮಾತ್ರ. ಅವರು ನಿಮಿತ್ತ ಮಾತ್ರ. ಆಡಳಿತ ವ್ಯವಸ್ಥೆಯಿಂದ ಪರಿಸ್ಥಿತಿ ಹೀಗಿದೆ. ಸ್ವಾಮಿ, 'ಸುಶ್ರುತಾ' ಗೆ ತಾವು ಇದ್ದೀರಿ. ಆಮೇಲೆ 'ಆರಾಧನಾ'ಕ್ಕೆ ಶ್ರೀ ರಾಜಾ ಅಮರೇಶ ನಾಯಕ್. 'ವಿಶ್ವ'ಕ್ಕೆ ನಮ್ಮ ನಜೀರ್ ಸಾಹೇಬರು. 'ಅಕ್ಷಯ'ಕ್ಕೆ ಮೊಯಿಲಿಯವರು. ಈ ಐದು ಜನ ಪಂಚಭೂತಗಳು. ಮಾನ್ಯ ಮುಖ್ಯಮಂತ್ರಿಗಳು ಕೇಳುತ್ತಿಲ್ಲ. ನನಗೆ ಮಾತನಾಡಿ ಎಂದು ಹೇಳಿ ತಾವು ಹೀಗೆ ಬೇರೆಯವರೊಡನೆ ಮಾತನಾಡುತ್ತಿರುವುದು ಸರಿಯಲ್ಲ.

ಅಧ್ಯಕ್ಷರು: ಭೂತ ಎಂದರೆ ಏನು?

ಶ್ರೀ ವಾಟಾಳ್ ನಾಗರಾಜ್:- ಭೂತಗಳು ಎಂದರೆ ಕಣ್ಣಿಗೆ ಕಾಣದೇ ಇರತಕ್ಕಂಥವು, ಎಲ್ಲರಿಗೂ ತೊಂದರೆ ಕೊಡತಕ್ಕಂಥವು, ಯಾವ ಘಳಿಗೆಯಲ್ಲಿ ಯಾರನ್ನು ಬೇಕಾದರೂ ನುಂಗಬಲ್ಲವು, ಕತ್ತು, ಕೈಗಳನ್ನು ಹಿಡಿದುಕೊಳ್ಳಬಲ್ಲವು. ಇದು ಮಂಗಳೂರಿನಲ್ಲಿ ಭೂತಾರಾಧನೆ ಎಂದು ಮಾಡುತ್ತಾರೆ. ದೇವರನ್ನು ಬಿಟ್ಟು ಭೂತಗಳಿಗೆ ಹೆದರಿ ಭೂತಾರಾಧನೆ ಮಾಡುತ್ತಾರೆ. ಏಕೆಂದರೆ, ಭೂತಕ್ಕೆ ಹೆದರಿ, ಅದು ಏನೂ ಮಾಡದೇ ಇರಲಿ, ನಮ್ಮನ್ನು ಕೊಲ್ಲದೇ ಇರಲಿ, ಶರೀರಕ್ಕೆ ಇಳಿಯದೇ ಇರಲಿ ಎಂದು ಭೂತಾರಾಧನೆ ಮಾಡುತ್ತಾರೆ. ಇಂತಹ ಪಂಚಭೂತಗಳನ್ನು ನಮ್ಮ ಸರ್ಕಾರ ಸೃಷ್ಟಿ ಮಾಡಿದೆ. ಈ ಭೂತಗಳು ಯಾವ್ಯಾವ ದೃಷ್ಟಿಯಿಂದ ಯಾರ್ಯಾರನ್ನು ತಿನ್ನುತ್ತವೋ ಗೊತ್ತಿಲ್ಲ. ಇದು ನಮಗೆ ಹಾಸ್ಯವಾಗಿ ಇರಬಹುದು, ಮಾರ್ಮಿಕವಾಗಿರಬಹುದು. ಇದರ ಹಿಂದೆ ಸತ್ಯ ಇದೆ, ಪ್ರಾಮಾಣಿಕತೆ ಇದೆ; ಒಂದು ವಿಚಾರ ಇದೆಯೆಂಬುದನ್ನು ತಮ್ಮ ಮುಂದೆ ನಾನು ಪ್ರತಿಪಾದಿಸುತ್ತಿದ್ದೇನೆ. ಆಶ್ರಯ ಯೋಜನೆ ಬಗ್ಗೆ ನಾನು ಸಂತೋಷಪಡುತ್ತೇನೆ. ಇದನ್ನು ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇದು ಒಂದು ಒಳ್ಳೆಯ ಯೋಜನೆ. ಈ .ಯೋಜನೆ ಪ್ರಾಮಾಣಿಕವಾಗಿ ನಡೆಯಬೇಕು. ಈಗ ಅನೇಕ ಕಡೆ ಹಳ್ಳಿಗಳಲ್ಲಿ 3-4 ಲಕ್ಷ

ನಿವೇಶನಗಳನ್ನು ಹಂಚಿದ್ದೇವೆ ಎಂದು ಹೇಳುತ್ತಾರೆ. ಇದರಲ್ಲಿ ಖರೀದಿ ಮಾಡಿರುವುದು ಎಷ್ಟು? ಸರ್ಕಾರಿ ಭೂಮಿ ಎಷ್ಟು? ಇದು ಪ್ರಶ್ನೆ ಇರುವಂಥಾದ್ದು. ಹಾಳುಪಾಳು ಗೋಮಾಳ ಎಲ್ಲ ಹಂಚಿಬಿಟ್ಟಿರಿ. ಇದು ನೀವೇ ಬಾರುಡೆ ಹೊಡೆದುಕೊಂಡುಬಿಡುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಇದನ್ನು ಮಾಡಿದವರು ನೀವು...

ಶ್ರೀ ವಾಟಾಳ್ ನಾಗರಾಜ್:- ಇದೇನು ಸ್ವಾಮಿ. ನಾನು ಯಾವತ್ತಾದರೂ ಸರ್ಕಾರದಲ್ಲಿ ಇದ್ದೆನಾ ಸ್ವಾಮಿ? 'ನೀವು, ನೀವು' ಎನ್ನುತ್ತಾರೆ. ಇವರನ್ನು ಬಯ್ಯುವುದಕ್ಕೆ ಹೋಗಿ ನಮ್ಮನ್ನು ಬಯ್ಯುತ್ತಿದ್ದಾರೆ.

ಅಧ್ಯಕ್ಷರು:- ಅದಕ್ಕೆ ನೀವು ಒಂದು ಸಂಕಲ್ಪ ಮಾಡಿಕೊಳ್ಳಬೇಕು. 'ನಾನು ಯಾವಾಗಲೂ ಸರ್ಕಾರಕ್ಕೆ ಸೇರುವುದೇ ಇಲ್ಲ' ಎಂದು.

ಶ್ರೀ ವಾಟಾಳ್ ನಾಗರಾಜ್:- ತಮ್ಮ ಆಶೀರ್ವಾದದಿಂದ ನಾನು ಹೀಗೆ ವಿರೋಧ ಪಕ್ಷದಲ್ಲಿಯೇ ಇರುತ್ತೇನೆ ಸ್ವಾಮಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿನ್ನೆ ದಿವಸ ನನಗೂ ಮತ್ತು ವಾಟಾಳ್ ನಾಗರಾಜ್ ಅವರಿಗೂ ಒಂದು ಒಪ್ಪಂದವಾಗಿದೆ. ನಾವು ಏನಾದರೂ ಮಾಡಿ ಮುಂದಿನ ಸಾರಿ ಆ ಕಡೆಗೆ ಬರಬೇಕು ಎಂದು ಹೇಳಿ. ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:- ಮುಂದಿನಸಾರಿ ಎಂದರೆ, ಟೈಮ್ ಮತ್ತೊಂದು ಏನು ಯೋಚನೆ ಮಾಡಿದ್ದೀರಿ, ಅಷ್ಟೇಕೆ ಲೇಟ್ ಮಾಡುತ್ತೀರಿ ಎಂದು ಕೇಳಿದೆ.

ಶ್ರೀ ವಾಟಾಳ್ ನಾಗರಾಜ್:- ಇದು ನಾವಿಬ್ಬರೂ ಗುಪ್ತವಾಗಿ ಮಾತನಾಡಿಕೊಂಡಿರುವುದು.

ಅಧ್ಯಕ್ಷರು:- ಅವರು ಸುಲಭವಾಗಿ ಹೊರಟುಹೋಗಬಹುದು ಆದರೆ ನೀವು ಸ್ವಲ್ಪ ಎಕ್ಸರ್‌ಸೈಜ್ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇದು ನಮ್ಮಿಬ್ಬರಲ್ಲಿ ನಡೆದಂಥ ಗುಪ್ತವಾದ ವಿಚಾರ. ಇದನ್ನು ಇವರು ಬಹಿರಂಗವಾಗಿ ಮಾಡಬಾರದು.

ಶ್ರೀ ಬಿ.ಹೆಚ್. ಬನ್ನಿಕೋಡ್:- ಅವರಿಬ್ಬರಲ್ಲಿ ನಡೆದಂಥ ಗುಪ್ತ ವಿಚಾರವೋ ಅಥವಾ ಮುಖ್ಯಮಂತ್ರಿಗಳು ಹೇಳುತ್ತಿರುವಂತೆ, ಇದರಲ್ಲಿ ಏನಾದರೂ ಇದೆಯೋ?...

ಶ್ರೀ ವಾಟಾಳ್ ನಾಗರಾಜ್:- ನನಗೆ ಅಂತಹ ಯಾವ ರೋಗಗಳೂ ಇಲ್ಲ. ಕಾಫಿ ಕುಡಿಯುವುದಿಲ್ಲ, ಟೀ ಕುಡಿಯುವುದಿಲ್ಲ, ಬೀಡಿ ಸೇದುವುದಿಲ್ಲ, ಸಿಗರೇಟ್ ಸೇದುವುದಿಲ್ಲ, ಮದ್ಯಪಾನ ಮಾಡುವುದಿಲ್ಲ, ಬೇರೆ ಯಾವ ವ್ಯವಸ್ಥೆಯೂ ಇಲ್ಲ, ನನಗೆ ಯಾವ ರೋಗಗಳೂ ಇಲ್ಲ. ನನಗೂ ಇಲ್ಲ, ನಮ್ಮ ಮುಖ್ಯಮಂತ್ರಿಗಳಿಗೂ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ. ನೀವು ಕಾಫಿ, ಟೀ ಕುಡಿಯುತ್ತೀರಿ ಮತ್ತು ಅಡಿಕೆ ತಿನ್ನುತ್ತೀರಿ.

ಶ್ರೀ ಎಸ್. ಬಂಗಾರಪ್ಪ:- ನಿಮ್ಮಲ್ಲಿ ಯಾವು ಯಾವುಗಳಿವೆ, ಅವುಗಳನ್ನು ಮಾತ್ರ ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್:- ಅದರ ಬಗ್ಗೆ ನಾವು, ನೀವು ಗುಪ್ತವಾಗಿ ಕುಳಿತುಕೊಂಡು ಮಾತನಾಡೋಣ. ಈ ಆಶ್ರಯ ಯೋಜನೆ ವಿಚಾರವಾಗಿ, ನನ್ನ ತಾಲ್ಲೂಕಿನ ವಿಷಯವನ್ನು ತಮಗೆ ಹೇಳುತ್ತಿದ್ದೇನೆ. ಮೊನ್ನೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೆ. ನಮ್ಮಲ್ಲಿ ಒಂದು ಸಮಿತಿ ಮಾಡಿದ್ದಾರೆ. ಆ ಸಮಿತಿಯವರ ತೀರ್ಮಾನದ ಪ್ರಕಾರ ಅಲ್ಲಿ ಒಂದು ಜಮೀನು ಎಷ್ಟು ಬೆಲೆಗೆ ಹೋಗುತ್ತದೋ ಆ ಬೆಲೆಗಿಂತ ಶೇಕಡ 30 ಭಾಗ ಸಮಿತಿಯವರು ಕೊಡಬಹುದು. ಅದಕ್ಕಿಂತ ಜಾಸ್ತಿಯಾದರೆ, ಜಿಲ್ಲಾಧಿಕಾರಿಯವರಿಗೆ ಬರೆಯಬೇಕು, ಅವರೂ ಇಲ್ಲ ಎಂದರೆ, ಸಮಿತಿಯವರೇ ತೀರ್ಮಾನ ಮಾಡಬಹುದು ಎನ್ನುವುದು ಒಂದು. ನಾನು ಹೇಳುತ್ತಿದ್ದೇನೆ, ಕೆಲವು ಕಡೆ, ಜಮೀನು ಸಿಕ್ಕುವುದಿಲ್ಲ, ತಮಗೆ ಹೇಳುವುದಾದರೆ, ನೀರಾವರಿ ಪ್ರದೇಶಗಳಲ್ಲಿ, ಒಂದು ಎಕರೆಗೆ 1 ಲಕ್ಷ, 2 ಲಕ್ಷ ಕೊಟ್ಟರೂ ಸಿಕ್ಕುವುದಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಗೋಮಾಳ ಪ್ರದೇಶಗಳನ್ನು ಹಂಚುವುದಕ್ಕೆ ಒಂದು ವ್ಯವಸ್ಥೆ ಇದೆ ಸರ್ಕಾರಿ ಭೂಮಿಯನ್ನು ಹಂಚುವುದಕ್ಕೆ ವ್ಯವಸ್ಥೆ ಇದೆ. ಅದು,

ಈ ರೀತಿ ಹೆಚ್ಚು ಬೆಲೆ ಕೊಟ್ಟು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ನನಗೆ ಸಂತೋಷವಾಗಿದೆ, ಈ ಆಶ್ರಯ ಯೋಜನೆ ಸಫಲವಾಗಬೇಕು. ತಾವು ನನಗೆ ಸ್ವಲ್ಪ ಅವಕಾಶ ಕೊಟ್ಟರೆ, ಕನಿಷ್ಟ ಮೂರುವರೆ-ನಾಲ್ಕು ಸಾವಿರ ಸೈಟುಗಳನ್ನು ಮುಂದಿನ ತಿಂಗಳು ಹಂಚುತ್ತೇನೆ, ನೀವು ಅವಕಾಶ ಕೊಡಲಿಲ್ಲ ಎಂದರೆ ಈ ನಿವೇಶನಗಳನ್ನು ಹಂಚುವುದಕ್ಕಾಗುವುದಿಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈ ವಿಚಾರದಲ್ಲಿ ಹಿಂದೆ ಮುಂದೆ ನೋಡುವುದು ಬೇಡ. ನಿಮಗೆ ಪತ್ರ ಬರೆಯುತ್ತೇನೆ, ದಯಮಾಡಿ ತಾವು ಅವಕಾಶ ಕೊಡಿ. ಜಮೀನಿನ ಬೆಲೆ ನಮ್ಮಲ್ಲಿ ಲಕ್ಷಾಂತರ ರೂಪಾಯಿಗಳಿಲ್ಲ. ಸುಮಾರು 22-25 ಸಾವಿರ ರೂಪಾಯಿಗಳಿರುತ್ತದೆ. ತಾವು ಅವಕಾಶ ಕೊಟ್ಟರೆ ಕೂಡಲೇ ಜಮೀನುಗಳನ್ನು ಹಂಚುತ್ತೇವೆ. ನಮ್ಮಲ್ಲಿ ಎಷ್ಟು ಸರ್ಕಾರಿ ಜಮೀನು ಇದೆ, ಅದನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಮತ್ತೆ ಚಾಮರಾಜನಗರ ಟೌನ್‌ಗೆ ಹಣ ಇನ್ನೂ ಬಿಡುಗಡೆ ಮಾಡಿಲ್ಲ, ನಿನ್ನೆ ಕನಕಪುರಕ್ಕೆ ಬಿಡುಗಡೆ ಮಾಡಿರುವುದು ಕೇಳಿ ಸಂತೋಷವಾಯಿತು. ಆದುದರಿಂದ ತಾವು ಎಲ್ಲೆಲ್ಲಿ ಪಟ್ಟಣ ಪ್ರದೇಶಗಳಿವೆ, ಅಲ್ಲಿಗೂ ವಿಶೇಷವಾದ ಒಂದು ಆದೇಶವನ್ನು ಹೊರಡಿಸಿ, ಅವರಿಗೂ ಹಣ ಕೊಡಬೇಕು. ತಮ್ಮಲ್ಲಿ ಹಣ ಕೊಡುವುದಕ್ಕೆ ರೀತಿನೀತಿಗಳಲ್ಲಿ ಅವಕಾಶ ಇದೆ, ಅದನ್ನು ಕೊಡುವುದಕ್ಕೆ ಹೇಳಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಆರಾಧನಾ ಕಾರ್ಯಕ್ರಮ. ಇದರಲ್ಲಿ ಯಾವ ದೇವರುಗಳನ್ನು ಪೂಜೆ ಮಾಡುತ್ತಾರೆ, ಇದರ ಬಗ್ಗೆ ನನಗೆ ಸಂತೋಷವಾಗಿದೆ. ಆದರೆ, ದೊಡ್ಡ ದೇವರುಗಳಿಗೂ ಮತ್ತು ಸಣ್ಣ ದೇವರುಗಳಿಗೂ ಜಗಳ ತಂದಿಟ್ಟಿದ್ದೀರಿ. ಈ ಆರಾಧನಾ ಎಂದರೆ ಏನು, ಇದರ ಉದ್ದೇಶ, ಕಲ್ಪನೆ ಚೆನ್ನಾಗಿದೆ. ಹಳ್ಳಿಗಳಲ್ಲಿರತಕ್ಕ ಮಾರಮ್ಮನ ಗುಡಿ, ಶಕ್ತಿಯ ಗುಡಿ, ಗುಂಗಮ್ಮನ ಗುಡಿ ಈ ರೀತಿಯಲ್ಲಿ ಬೇರೆ ಬೇರೆ ಗುಡಿಗಳು ಇವೆ. ಈ ದೇವಸ್ಥಾನಗಳು ಬೆಳೆಯಲಿ ಎನ್ನುವ ಭಾವನೆ ಇದೆ, ನಾನು ಸಂತೋಷಪಡುತ್ತೇನೆ. ರಾಜಕಾರಣದಲ್ಲಿ ನಾವು ಬೇರೆ, ನೀವು ಬೇರೆ ಕಿತ್ತಾಡೋಣ. ನಾವು ಬೇರೆ ಪಕ್ಷ, ನೀವು ಬೇರೆ ಪಕ್ಷ. ನಾವು ಬೇರೆ ಜಾತಿ, ನೀವು ಬೇರೆ ಜಾತಿ, ಈ ದೇಶದಲ್ಲಿ ಇವೆಲ್ಲವೂ ನಡೆಯುತ್ತಿವೆ. ರಾಜಕಾರಣ, ಅಧಿಕಾರ ಎಲ್ಲಾ ಜಾತಿಯ ಮೇಲೆ ನಡೆಯುತ್ತಿದೆ. ಭಕ್ತ ಕನಕದಾಸರು ಹೇಳಿದರು, ಕುಲ ಕುಲವೆಂದು ಏಕೆ ಹೊಡೆದಾಡುವಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂದು ಹೇಳಿದರು. ಅಂತಹ ದೊಡ್ಡ ಮನುಷ್ಯರನ್ನು ಇಲ್ಲಿ ಪೂಜೆ ಮಾಡತಕ್ಕಂಥ ವ್ಯವಸ್ಥೆ ಇಲ್ಲ. ಅಂತಹವರ ಬಗ್ಗೆ ಮಾತನಾಡುವುದಕ್ಕೂ ಆಗುವುದಿಲ್ಲ. ನಮ್ಮ ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರು ಇಲ್ಲಿ ಇದ್ದಾಗ ಹೇಳುತ್ತಿದ್ದರು. ಪರ ಧನ, ಪರ ಸತಿ, ಪರದೇಶದ ಮದ್ಯ ಈ ಮೂರನ್ನು ವರ್ಜಿತ ಮಾಡಬೇಕೆಂದು ಬಹಳ ಸುದೀರ್ಘವಾದ ಭಾಷಣವನ್ನು ಮಾಡುತ್ತಿದ್ದರು. ಇವತ್ತು ಆ ವಿಚಾರ ಹೇಳುವುದಕ್ಕೆ ಹೋದರೆ ನಮ್ಮನ್ನು ಹುಚ್ಚರು ಎಂದು ಹೇಳುತ್ತಾರೆ. ನಿಮಗೆ ಏನಾದರೂ ಬುದ್ಧಿ ಗಿದ್ಧಿ ಕೆಟ್ಟಿದೆಯೇ, ಇವೆಲ್ಲಾ ಇಲ್ಲದ ಮೇಲೆ ಯಾವ ರಾಜಕಾರಣ ಎಂದು ಹೇಳುತ್ತಾರೆ. ಅದನ್ನು ಮಾತನಾಡಿದರೆ ಬೆಲೆ ಬರುತ್ತದೆಯೋ ಇಲ್ಲವೋ ಎಂದು ಸುಮ್ಮನೇ ಇದ್ದೇನೆ. ಬಸವೇಶ್ವರರು ಹೇಳಿದ್ದು ಇವೆಲ್ಲವನ್ನೂ ಕ್ವೋಟ್ ಮಾಡಿಕೊಂಡು ಹೇಳುವುದಲ್ಲ. ಅವೆಲ್ಲವೂ ಈ ಕಾಲಕ್ಕೆ ಅಲ್ಲ. ಅವರ ಹೆಸರನ್ನು ತರುವುದೂ ಸರಿಯಲ್ಲ. ಈ ಒಂದು ಪರಿಸ್ಥಿತಿ, ಮತ್ತು ವ್ಯವಸ್ಥೆಯೇ ಬೇರೆಯಾಗಿದೆ. ನಾನು ಈ ಸರ್ಕಾರ, ಆ ಸರ್ಕಾರ ಎಂದು ಹೇಳುತ್ತಾ ಇಲ್ಲ. ಸಮಾಜದ ವ್ಯವಸ್ಥೆಯೇ ಈ ರೀತಿಯಾಗಿದೆ. ನಾವು ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಮಹಾತ್ಮ ಗಾಂಧಿಯವರು ಹೇಳಿದರು ಕೆಟ್ಟದ್ದನ್ನು ನೋಡಬಾರದು, ಕೆಟ್ಟದ್ದನ್ನು ಕೇಳಬಾರದು, ಕೆಟ್ಟದ್ದನ್ನು ಮಾತನಾಡಬಾರದು ಎಂದು, ಬಾಯಿ ಮುಚ್ಚಿಕೊಂಡರು, ಕಿವಿ ಮುಚ್ಚಿಕೊಂಡರು, ಕಣ್ಣು ಮುಚ್ಚಿಕೊಂಡರು. ಇವತ್ತು ಇವನ್ನು ಮುಚ್ಚಿಕೊಂಡರೆ ಹುಚ್ಚ ಎನ್ನುತ್ತಾರೆ.

ಇವತ್ತು ಸಮಾಜ ಹಾಗೆ ಆಗಿದೆ. ಈಗ ಸಮಾಜ ಆ ದಿಕ್ಕಿನಲ್ಲಿ ಹೊರಟಿದೆ. ಇಂತಹ ಅನೇಕ ಶರಣರು ದೊಡ್ಡದೊಡ್ಡವರು ಈ ರೀತಿ ಹೇಳಿದ್ದಾರೆ. ಈಗ ಎಲ್ಲಿದ್ದಾರೆ? ಇವತ್ತೂ ಎಲ್ಲರನ್ನೂ ನಾವು ಗೋಡೌನ್‌ನಲ್ಲಿ ಹಾಕಿ ಬೀಗ ಹಾಕಿದ್ದೇವೆ. ಅವರ ಪುಸ್ತಕಗಳು, ಅವರ ವ್ಯವಸ್ಥೆಗಳನ್ನು ಕಾರ್ಯಾಚರಣೆಗೆ ತರುವ ವ್ಯವಸ್ಥೆ ಇಲ್ಲ. ಹಿಂದೆ ಒಂದು ಸಾರಿ ಹಿರಿಯ ಸದಸ್ಯರಾದ ರಂಗನಾಥ್‌ರವರೂ ನಾವೂ ಒಂದು ಕಡೆ ಮಾತನಾಡುವಾಗ, ನಾವು ಚುನಾವಣೆಗೆ ನಿಲ್ಲತಕ್ಕಂಥವರು ಕೆಲವು ವಿಚಾರಗಳನ್ನು, ಈ ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸುವ ವ್ಯವಸ್ಥೆಯ ಬಗ್ಗೆ ಮಾತನಾಡುವುದಕ್ಕೆ ಹೋದರೆ ನಾವು ಲೋಕದಲ್ಲಿ ವಿರೋಧಿಗಳಾಗುತ್ತೇವೆ. ಆದುದರಿಂದ ಇದನ್ನು ಮಾತನಾಡುವುದು ಕಷ್ಟವಾಗಿದೆ ಎಂಬ ಮಾತನ್ನು ಹೇಳಿದೆವು. ನಿಜ ಈ ಪರಿಸ್ಥಿತಿ ಇರುವಾಗ ನಾನು ತಮಗೆ ಹೇಳುತ್ತಿದ್ದೇನೆ; ಈ ಆರಾಧನಾ ಕಾರ್ಯಕ್ರಮ ವ್ಯವಸ್ಥಿತವಾಗಿ ಆಗಿದೆಯೇ? ಒಂದು ವ್ಯವಸ್ಥೆ ಇದೆಯೇ? ಇದನ್ನು ತಾವು ಸಮಗ್ರವಾಗಿ ಚಿಂತನೆ ಮಾಡಬೇಕು. ಚಿಂತನೆ ಮಾಡಿ ತಾವು ಪ್ರಾಮಾಣಿಕವಾಗಿ ಇಷ್ಟು ಗುಡಿಗಳಿಗೆ ವ್ಯವಸ್ಥೆ ಮಾಡಿದ್ದೇವೆ, ಅದು ಇಷ್ಟು ಜನಕ್ಕೆ ತಲುಪಿದೆ ಎಂದು ಹೇಳಬೇಕು. ಈ ಆರಾಧನಾ ವ್ಯವಸ್ಥೆ ಬಗ್ಗೆ ನಾನು ಸಂತೋಷಪಡುತ್ತೇನೆ. ಈ ಆರಾಧನಾ ಕಾರ್ಯಕ್ರಮ ದೇವರುಗಳನ್ನು ಆರಾಧಿಸತಕ್ಕಂಥಾದ್ದು. ಆದರೆ ಆರಾಧಿಸತಕ್ಕಂ

ಥವರು ಏನಿದ್ದಾರೆ ಅವರಿಗೆ ಹೊಟ್ಟೆಗೆ ಅನ್ನ ಇಲ್ಲ, ಮೈಗೆ ಬಟ್ಟೆ ಇಲ್ಲ, ಸ್ನಾನ ಮಾಡುವುದಕ್ಕೆ ನೀರು ಇಲ್ಲ, ಈ ವ್ಯವಸ್ಥೆಯನ್ನು ಒದಗಿಸಲು ಆರಾಧನಾ ಕಾರ್ಯಕ್ರಮದ ಜೊತೆಗೇ, ಆ ಜನಾಂಗಕ್ಕೆ ತಾವು ಮಾಡಬೇಕಾದಂಥ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆಯಿತು, ಇನ್ನು 8-10 ವಿಚಾರಗಳು ಇವೆ, ಅವನ್ನು ಹೇಳಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

ಅಧ್ಯಕ್ಷರು:- ಇನ್ನೂ ಇಬ್ಬರು ಸದಸ್ಯರು ಮಾತನಾಡಬೇಕಾಗಿದೆ. ನೀವು ಮಾತನಾಡಿದ ಮೇಲೆ ಅವರು ಮಾತನಾಡಿ, ಅನಂತರ ಉತ್ತರ ಪ್ರಾರಂಭವಾಗಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಮುಗಿಸಿಬಿಡುತ್ತೇನೆ. ಕಾವೇರಿ ವಿವಾದದ ಸಂದರ್ಭದಲ್ಲಿ ಅಂದಿಗೆ ಕರ್ನಾಟಕ ಬಂದ್ ಆಯಿತು. ಕರ್ನಾಟಕ ಬಂದ್‌ಗೆ ನಾವು ಯಾರೂ ತಪ್ಪಿಸಿಕೊಂಡು ಹೋಗುವುದಕ್ಕೆ ತಯಾರಾಗಿಲ್ಲ. ಕರ್ನಾಟಕ ಬಂದ್‌ಗೆ ನಾವೂ ಕಾರಣ. ಎಲ್ಲಾ ವಿರೋಧ ಪಕ್ಷಗಳೂ ಸೇರಿ ಕರ್ನಾಟಕ ಬಂದ್‌ನ್ನು ಮಾಡಬೇಕು ಎಂದು ಮಾಡಿದೆವು. ಏತಕ್ಕೋಸ್ಕರ ನಾವು ಕರ್ನಾಟಕ ಬಂದ್ ಮಾಡಿದೆವು ಎಂದರೆ ಕೇಂದ್ರ ಗೆಜೆಟ್‌ನಲ್ಲಿ ನ್ಯಾಯಾಲಯದ ಮಧ್ಯಂತರ ಆದೇಶ ಪ್ರಕಟವಾಯಿತು. ಇದು ಸರಿಯಲ್ಲ ಎಂದು ನಾವು ಕರ್ನಾಟಕ ಬಂದ್ ಮಾಡಿದೆವು. ತಮಿಳುನಾಡಿನವರೂ ಬಂದ್ ಮಾಡಿದರು. ಅವರು ಬಂದ್ ಮಾಡಿದ್ದು ಏತಕ್ಕೆ ಎಂದರೆ, ಕನ್ನಡಿಗರ ವಿರುದ್ಧ ಕರ್ನಾಟಕದ ವಿರುದ್ಧ. ಈ ಎರಡಕ್ಕೂ ಬಹಳ ವ್ಯತ್ಯಾಸ ಇದೆ. ಈ ಸಂದರ್ಭದಲ್ಲಿ ತಮಿಳು ಪತ್ರಿಕೆಗಳು, ತಮಿಳು ರಾಜಕಾರಣಿಗಳು, ತಮಿಳುನಾಡಿನ ನಾಗರೀಕರು, ಕರ್ನಾಟಕದ ಮೇಲೆ ಸಮಗ್ರವಾದಂಥ ಧಾಳಿ ಮಾಡಿ ಅಪಪ್ರಚಾರ ನಡೆಸಿದರು. ತಮಗೆ ಹೇಳುತ್ತೇನೆ, ತಮಿಳುನಾಡಿನ ಮುಖ್ಯಮಂತ್ರಿಗಳು ಹಿಂದೂಪತ್ರಿಕೆಯ ಮುಖ ಪುಟದಲ್ಲಿ ಸರಕಾರದಿಂದ ಒಂದು ಜಾಹೀರಾತನ್ನು ಪ್ರಕಟಣೆ ಮಾಡಿದರು. ಕನ್ನಡದ ದುರಭಿಮಾನಿಗಳು ತಮಿಳರ ಮೇಲೆ ಹಲ್ಲೆ ಮಾಡಿರುತ್ತಾರೆ, 300 ಕೋಟಿ ರೂಪಾಯಿ ನಷ್ಟವಾಗಿದೆ. ಒಂದು ಲಕ್ಷದ ತೊಂಭತ್ತು ಸಾವಿರ ಜನ ತಮಿಳರು ತಮಿಳುನಾಡಿಗೆ ಬಂದಿದ್ದಾರೆ ಎಂದು ಪ್ರಕಟವಾಯಿತು. ನಮ್ಮ ಸರಕಾರ ಈ ಬಗ್ಗೆ ಉತ್ತರ ಕೊಡಲಿಲ್ಲ, ಒಂದು ಉತ್ತರವನ್ನೂ ಕೊಡಲಿಲ್ಲ, ಏತಕ್ಕೆ ಸ್ವಾಮಿ ಉತ್ತರ ಏತಕ್ಕೆ ಕೊಡಲಿಲ್ಲ, ನೀವು ಪ್ರಾಮಾಣಿಕತೆಯಿಂದ ಇದಕ್ಕೆ ಉತ್ತರ ಕೊಡಬೇಕಾಗಿತ್ತು. ಏತಕ್ಕೆ ಉತ್ತರ ಕೊಡಲಿಲ್ಲ? ಈ ವಿಚಾರದಲ್ಲಿ ಸರಕಾರ ಕರ್ತವ್ಯ ಲೋಪವನ್ನು ಮಾಡಿರುತ್ತದೆ. ಎಂದು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಒಂದು ಕಡೆ ನಾವು ಪ್ರಚಾರಕ್ಕೆ ದಾರಿಮಾಡಿಕೊಟ್ಟಹಾಗೆ ಆಯಿತು. ನಮ್ಮಲ್ಲಿ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿರುತ್ತೀರಿ. ಪರಿಹಾರ ಕೊಟ್ಟಿದ್ದೀರಿ. ಅವರಿಗೆ ಕೈಮುಗಿದು ಬನ್ನಿ ಬನ್ನಿ ಎಂದು ಕರೆಯುತ್ತಿದ್ದೀರಿ. ಕರ್ನಾಟಕ ಸರಕಾರ ಇದನ್ನು ಮಾಡುತ್ತಿದೆ. ಆದರೆ ತಮಿಳುನಾಡಿನಲ್ಲಿ ಉದಕಮಂಡಲದಲ್ಲಿ, ಊಟಿಯಲ್ಲಿ, ತಾಳವಾಡಿಯಲ್ಲಿ, ಹೊಸೂರಿನಲ್ಲಿ, ಕೃಷ್ಣಗಿರಿಯಲ್ಲಿ, ಕನ್ನಡಿಗರ ಮೇಲೆ ದೊಡ್ಡ ದಾಂಧಲೆ ನಡೆದಿದೆ, ಊಟಿಯಲ್ಲಿ ಲೂಟಿಯಾಗಿದೆ. ಆಸ್ತಿ ಪಾಸ್ತಿಯೂ ಲೂಟಿಯಾಗಿದೆ. ಊಟಿಯಲ್ಲಿರತಕ್ಕಂಥವರು ಯಾರು? ಐದು ಲಕ್ಷ ಜನ ಕನ್ನಡಿಗರು ಊಟಿಯಲ್ಲಿದ್ದಾರೆ. ಅವರು ನಾಗಮಂಗಲದವರು, ಹಾಸನ ಜಿಲ್ಲೆಯವರು ನೂರಾರು ವರ್ಷಗಳಿಂದ ಅಲ್ಲಿ ಇದ್ದಾರೆ. ಮದ್ರಾಸ್‌ನಲ್ಲಿ ಐಯ್ಯಂಗಾರ್ ಬೇಕರಿಗಳನ್ನು ಒಡೆದುಹಾಕಿದ್ದಾರೆ. ಇದರ ಒಂದು ಸುದ್ದಿ ಪತ್ರಿಕೆಯಲ್ಲಿ ಬರಲಿಲ್ಲ, ಅಲ್ಲಿನ ಕನ್ನಡಿಗರಿಗೆ ಪರಿಹಾರ ಕೊಟ್ಟಿಲ್ಲ, ಅಲ್ಲಿ ನ್ಯಾಯಾಂಗ ತನಿಖೆ ಈ ಕ್ಷಣದವರೆಗೂ ಆಗಿಲ್ಲ, ಆದರೆ ಕರ್ನಾಟಕದ ಮೇಲೆ ಗೂಬೆ ಕೂರಿಸತಕ್ಕಂಥ ವ್ಯವಸ್ಥಿತವಾದಂಥ ಪ್ರಚೋದನೆಯ ರಾಜಕಾರಣ ನಡೆದಿದೆ. ಅಲ್ಲಿಗೆ ಕೇಂದ್ರದಿಂದ ಅಧಿಕಾರಿಗಳನ್ನು ಕರೆಯಿಸಿದ್ದಾರೆ, ಕೇಂದ್ರದಿಂದ ತನಿಖೆ ಮಾಡುವುದಕ್ಕೆ ಕಳುಹಿಸಿದ್ದಾರೆ. ರಾಜ್ಯಪಾಲರು, ರಾಜ್ಯ ಸರಕಾರ ಇರುವಾಗ, ತನಿಖೆಗೆ ಹೋಗುತ್ತಾರೆ. ಏನಿದೆ ಪರಿಸ್ಥಿತಿ. ಕರ್ನಾಟಕ ಮಾಡಬಾರದುದನ್ನು ಮಾಡಿದೆಯೇ? ನಾನು ಇವತ್ತು ಕರ್ನಾಟಕ ಸರಕಾರದ ಮೇಲೆ ಆಪಾದನೆಯನ್ನು ಮಾಡುತ್ತಿದ್ದೇನೆ. ನಿಮ್ಮ ಗುಂಡಿನ ಬಾಯಿಗೆ ಸತ್ತವರು ಯಾರು?

15ಜನ, 16ಜನ ನಿರ್ಭಾಗ್ಯ ಕನ್ನಡಿಗರನ್ನು ನಿಮ್ಮ ಗುಂಡಿನ ಬಾಯಲ್ಲಿ ಹಾಕಿದ್ದೀರಿ. ಒಬ್ಬರೂ ಹೊರಗಡೆಯವರು ಇಲ್ಲ, ನಾನೇನು ಅವರ ಪ್ರಾಣ ಎಂದರೂ ಒಂದೆ. ಅದರಲ್ಲಿ ಏನು ಪ್ರಾಣಕ್ಕೆ ಭಾಷೆ ಬರುವುದಿಲ್ಲ, ನಾನು ಅವರನ್ನು ಕೊಲ್ಲಬೇಕು, ಇವರನ್ನು ಕೊಲ್ಲಬೇಕು, ಎಂದು ಅಲ್ಲ, 15 ಜನ ನಿರ್ಭಾಗ್ಯರನ್ನು ನೀವು ಕೊಂದು ಹಾಕಿದ್ದೀರಿ. ನಿಮಗೆ ಕರುಣೆ ಇಲ್ಲವೇ? ಇವತ್ತು ಪರಿಸ್ಥಿತಿ ಏನಾಗಿದೆ? ಇವತ್ತು ಇಡೀ ದೇಶದಲ್ಲಿ ಕರ್ನಾಟಕ ಏನೋ ಭಾರಿ ಅನ್ಯಾಯ ಮಾಡಿದೆ ಎನ್ನತಕ್ಕಂಥ ಒಂದು ಅಪಪ್ರಚಾರಕ್ಕೆ ಹೊರಟಿದೆ. ಡೆಲ್ಲಿಯಲ್ಲೂ ಇದೇ ಪರಿಸ್ಥಿತಿ ನಡೆಯಿತು. ಇದರ ಬಗ್ಗೆ ನನಗನಿಸುತ್ತದೆ, ಇದು ಸರಿಯಾದುದ್ದು ಅಲ್ಲ, ಈ ಬಗ್ಗೆ ಪ್ರಾಮಾಣಿಕವಾಗಿ ಸರ್ಕಾರ ಈಗ ಕೇಂದ್ರ ಸರ್ಕಾರಕ್ಕೆ ಹೇಳಬೇಕಾದ್ದು ನಿಮ್ಮ ಕರ್ತವ್ಯ. ಅದರಲ್ಲಿ ಬೇರೆ ಮಾತೇ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಸ್ಪಷ್ಟಪಡಿಸುತ್ತೇನೆ. ಕೇಂದ್ರದ ತಮಿಳುನಾಡಿನ ರಾಜಕಾರಣಿಗಳು ತಮಿಳುನಾಡಿನ ಮುಖ್ಯಮಂತ್ರಿಗಳು ನಮ್ಮ ಮೇಲೆ ಏನು ಅಪಪ್ರಚಾರ ಮಾಡಿದ್ದಾರೆ, ಅವೆಲ್ಲವನ್ನೂ ಈ ಸಭೆಯ ಮೂಲಕ ನಾನು ಸಾರಾಸಗಟಾಗಿ ತಳ್ಳಿ ಹಾಕುತ್ತೇನೆ,

ಅದು ಸತ್ಯಕ್ಕೆ ದೂರವಾದುದು ಅದು ಒಂದು ಅಪಪ್ರಚಾರ ನಮ್ಮ ಮೇಲೆ ದೊಡ್ಡ ಆರೋಪಣೆ ಮಾಡತಕ್ಕಂಥ ವಿಚಾರ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸ್ವಾಮಿ, ಕಾವೇರಿ ಕೃಷ್ಣ ಯೋಜನೆಗಳ ಬಗ್ಗೆ ಸರ್ಕಾರ ಈಗ ನಿಗಾ ಇಡಬೇಕಾಗಿದೆ, ಚಿಂತನೆ ಮಾಡಬೇಕಾಗಿದೆ. ಇದನ್ನು ಯಾರೂ ಲಘುವಾಗಿ ತಿಳಿದುಕೊಳ್ಳುವುದು ಅಲ್ಲ. ಸಭೆ ಮತ್ತು ಸಮಾರಂಭಗಳನ್ನು ನಡೆಸುವುದರಿಂದ ಏನೂ ಆಗುವುದಿಲ್ಲ. ನಾವು ಎಷ್ಟು ಹಣ ಇಟ್ಟಿದ್ದೇವೆ ಎನ್ನುವುದು ಮುಖ್ಯ. ಅದಕ್ಕೆ ನೀವು ತಯಾರಾಗಿರಬೇಕು. ತಾವು ತೆರೆ ಮರೆಯಲ್ಲಿ ಹೇಳಿದ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಏತ ನೀರಾವರಿ ಯೋಜನೆಗಳು ಮತ್ತು ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥಾ ಏತ ನೀವಾವರಿ ಯೋಜನೆಗಳಿಗೆ ಕೂಡಲೇ ತಾವು ಅವಕಾಶ ಮಾಡಿಕೊಡಿ. ಕಬಿನಿ ಎರಡನೆ ಹಂತದ ಯೋಜನೆಯನ್ನು ಕೂಡಲೇ ತೆಗೆದುಕೊಂಡು ಬನ್ನಿ. ತಾವು ಅನೇಕ ವಿಚಾರಗಳನ್ನು ಬೇಗ ಬೇಗನೆ ಮಾಡಬೇಕಾದುದು ತಮ್ಮ ಕರ್ತವ್ಯ. ಇಲ್ಲದಿದ್ದರೆ ಕರ್ತವ್ಯ ಲೋಪವಾಗುತ್ತದೆ ಎನ್ನುವ ಮಾತನ್ನು ನಾನು ತಮಗೆ ಹೇಳುತ್ತೇನೆ. ಸ್ವಾಮಿ, ತಮಗೆ ಗೊತ್ತಿದೆ ಶ್ರೀಮಾನ್ ವೀರೇಂದ್ರ ಪಾಟೀಲರು ಇದೇ ಸಭೆಯಲ್ಲಿ ನ್ಯಾಯ ಮಂಡಲಿ ನಮಗೆ ಬೇಡ ಎಂದು ಹೇಳುತ್ತಿದ್ದರು. ಕೊನೆಯಲ್ಲಿ ನ್ಯಾಯ ಮಂಡಲಿಯನ್ನು ಕೇಂದ್ರ ಸರ್ಕಾರ ನಮ್ಮ ಮೇಲೆ ಹೇರಿತು. ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ವಿ.ಪಿ. ಸಿಂಗ್‌ರವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ಯಾವ ಒತ್ತಡಕ್ಕೆ ಮಣಿದರೋ ಏನೋ ನನಗೆ ಗೊತ್ತಿಲ್ಲ, ನಮ್ಮನ್ನು ಅವರು ದೊಡ್ಡ ಹಳ್ಳಕ್ಕೆ ತಳ್ಳಿದರು. ನಮ್ಮನ್ನು ಕಡೆಗಾಣಿಸಿದರು. ನಮ್ಮನ್ನು ಕಡೆಗಾಣಿಸಿ ತಮಿಳುನಾಡಿಗೆ ಬೆಂಬಲ ಕೊಡುವ ದೃಷ್ಟಿಯಲ್ಲಿ ಒಂದು ನ್ಯಾಯ ಮಂಡಲಿ ರಚನೆಯಾಯಿತು. ರಚನೆಯಾದ ನಂತರ ಶ್ರೀಮಾನ್ ವೀರೇಂದ್ರಪಾಟೀಲರು ಸಹ ಅದನ್ನು ಒಪ್ಪಿದರು. ಆಗ ನಾನು ಇದೇ ಸಭೆಯಲ್ಲಿ ಹಿಂದೆ ಕುಳಿತುಕೊಂಡಿದ್ದೆ. ಆಗ ನಾನು ಶ್ರೀ ವೀರೇಂದ್ರ ಪಾಟೀಲರಿಗೆ ಹೇಳಿದೆ. ಸ್ವಾಮಿ, ತಾವು ನ್ಯಾಯ ಮಂಡಲಿಯನ್ನು ಬೇಡ ಎಂದು ಮೊದಲಿನಿಂದ ಹೇಳುತ್ತಿದ್ದು ಈಗ ಒಪ್ಪುತ್ತಿದ್ದೀರಿ, ನಾನಂತೂ ಒಪ್ಪುವುದಿಲ್ಲ, ಅದಕ್ಕೆ ನನ್ನ ಸಮ್ಮತಿ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ. ತಮಗೆ ಜ್ಞಾಪಕ ಇರಬಹುದು, ಆಗ ಅವರು ಹೇಳಿದರು, ಈ ಸಭೆಯಲ್ಲಿ ಯಾರನ್ನಾದರೂ ಒಪ್ಪಿಸಬಹುದು, ಆದರೆ ವಾಟಾಳ್ ನಾಗರಾಜ್‌ರವರನ್ನು ಒಪ್ಪಿಸುವುದಕ್ಕಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ನನಗೆ ಇವತ್ತು ನೋವಾಗುತ್ತಿದೆ. ನ್ಯಾಯ ಮಂಡಲಿಗೆ ನನ್ನ ಒಪ್ಪಿಗೆ ಇಲ್ಲ. ನ್ಯಾಯ ಮಂಡಲಿ ಕರ್ನಾಟಕಕ್ಕೆ ಬಂದಾಗ ನ್ಯಾಯ ಮಂಡಲಿ ಎದುರಿಗೆ ನಾನು ಯಾವ ಮನವಿಯನ್ನು ಕೊಟ್ಟಿಲ್ಲ. ನ್ಯಾಯ ಮಂಡಲಿ ಸದಸ್ಯರು ನನ್ನ ತಾಲ್ಲೂಕಿಗೆ ಬಂದಾಗ, ನಿಮ್ಮ ಬಗ್ಗೆ ಗೌರವ ಇದೆ. ಆದರೆ ನಾನು ನಿಮಗೆ ಮನವಿ ಕೊಡುವುದಿಲ್ಲ, ನಮಗೆ ನೀರು ಹಂಚಿಕೆ ಮಾಡುವುದಕ್ಕೆ ನೀವ್ಯಾರು ಎಂದು ನಾನು ಬಹಳ ಕಠೋರವಾಗಿ ಹೇಳಿದೆ. ನಾವು ಇವತ್ತು ಎಲ್ಲಿ ತಲುಪಿದ್ದೇವೆ, ಎಲ್ಲಿ ಹೋಗುತ್ತಿದ್ದೇವೆ? ಆದ್ದರಿಂದ ನನಗನಿಸುತ್ತದೆ, ಎಚ್ಚರ ವಹಿಸಿ ನಮ್ಮ ನೀರನ್ನು ನಾವು ಉಳಿಸಿಕೊಳ್ಳುವುದಕ್ಕೆ ತೀರ್ಮಾನ ಮಾಡಬೇಕು. ನಮಗೆ ಇವತ್ತು ರೈತ ಸಂಘದವರು ಹೇಳುತ್ತಿದ್ದಾರೆ, ನಾವು ಹೇಳುತ್ತಿದ್ದೇವೆ. ನಮ್ಮದು ಜನತಾ ನ್ಯಾಯಾಲಯ, ಕರ್ನಾಟಕ, ನಾವು ಮೇಲಿದ್ದೇವೆ, ಕನ್ನಂಬಾಡಿ ಅವರಿಗಿಂತ ಮೇಲಿದೆ. ಇರಬಹುದು, ನೀವೇನು ತಮಿಳುನಾಡಿಗೆ ನೀರು ಬಿಡುವುದಿಲ್ಲವೋ? ನೀವೇನು ಪಾಳೆಯಗಾರರೋ ಎಂದು ಹೇಳಬಹುದು. ಆ ಪ್ರಶ್ನೆ ಅಲ್ಲ, ನಮ್ಮ ಹೊಟ್ಟೆಗೆ ಊಟ ಇದ್ದರೆ ಇನ್ನೊಬ್ಬರಿಗೆ ಊಟ ಕೊಡಬಹುದು. ನಾವು ಹಸಿದ ಹೊಟ್ಟೆಯಲ್ಲಿದ್ದಾಗ ಇನ್ನೊಬ್ಬರಿಗೆ ಊಟ ಕೊಡತಕ್ಕಂಥ ಪ್ರಶ್ನೆ ಇಲ್ಲ, ಅಂತಿಮವಾಗಿ ಬಂದರೆ ನಾವೆಲ್ಲ ಕನ್ನಂಬಾಡಿಯ ಪಕ್ಕದಲ್ಲಿ ಮಲಗಿ ನೀರನ್ನು ಬಿಡತಕ್ಕಂಥ ಪ್ರಶ್ನೆಗೆ ಹೋಗುವುದಿಲ್ಲ ಎಂದು ನಾನು ಕೇಂದ್ರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ಬೇರೆ ಮಾತೇ ಇಲ್ಲ. ಕೇಂದ್ರ ಸರ್ಕಾರ ಮಾತುಕತೆಗೆ ಮಣಿದಿದ್ದು ಏತಕ್ಕೆಂದರೆ, ಒಂದು ಕರ್ನಾಟಕ ಬಂದ್. ಮತ್ತೊಂದು ಮಂಡ್ಯ ನಿರ್ಣಯ. ಮಂಡ್ಯ ನಿರ್ಣಯ ಬಹಳ ಮಹತ್ತರವಾದುದು ಮತ್ತು ಪವಿತ್ರವಾದಂತಹ ನಿರ್ಣಯ. ಆ ನಿರ್ಣಯದಂತೆ ನಿಂತಿದ್ದರೆ ರಾಜ್ಯದ ಪರಿಸ್ಥಿತಿಯೇ ಬೇರೆ ರೂಪವನ್ನು ತಾಳುತ್ತಿತ್ತು. ಭಯಂಕರ ಪರಿಸ್ಥಿತಿ ಬರುತ್ತಿತ್ತು. ಆ ನಿರ್ಣಯ ಆಗಿದಿದ್ದರೆ ಈ ಸದನದಲ್ಲಿ ಮಾತನಾಡತಕ್ಕಂಥ ಅಧಿಕಾರ ನಮಗೆ ಉಳಿಯುತ್ತಿರಲಿಲ್ಲ, ನಾನು ತಮಗೆ ಹೇಳುವುದು ಏನೆಂದರೆ ನಾವು 19 ನೇ ತಾರೀಖು ರಾಜೀನಾಮೆ ಕೊಡುತ್ತೇವೆಂದು ಹೇಳಿದ್ದೆವು. ನಾನು ನನ್ನ ತಾಲ್ಲೂಕಿನಲ್ಲಿ ಹೋಗಿದ್ದೆ. ಅಲ್ಲಿ ಬಹಳ ಪ್ರಮುಖವಾದ ಕೆಲಸಗಳು ಆಗಬೇಕಾಗಿತ್ತು. ಆ ಎಲ್ಲಾ ಕೆಲಸಗಳನ್ನು ತರಾತುರಿಯಿಂದ ಮಾಡಬೇಕು ಎಂದು ಹೇಳಿ 13-14 ಮತ್ತು 15 ನೇ ತಾರೀಖು 3 ದಿವಸ ಅಲ್ಲಿಯೇ ನಿಂತುಕೊಂಡು, ಆ ಜನಗಳ ಕೆಲಸ ಎಲ್ಲಾ ಮಾಡಿ ಮುಗಿಸಿ ಕೊನೆಗೆ ರಾಜೀನಾಮೆ ಬರೆಯಬೇಕು ಎಂದು ಬಂದೆ. ನಮ್ಮ ಸುದೈವವೋ, ನಿಮ್ಮೆಲ್ಲರ ಆಶೀರ್ವಾದವೋ ಏನೋ ಮತ್ತೊಂದು ಸಾರಿ ನಾವು ಇಲ್ಲಿ ಇರಬೇಕು ಎನ್ನತಕ್ಕಂಥ ಅವಕಾಶ ಇತ್ತೋ ಏನೋ, ನಾವಿಲ್ಲಿ ಇದ್ದೇವೆ. ಯಾವುದೋ ಒಂದು ಸುದೈವ; ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಪಟ್ಟಿದ್ದಾರೆ. ಬೇರೆಯವರೂ ಪ್ರಯತ್ನಪಟ್ಟಿದ್ದಾರೆ.

10.55 ಎ.ಎಂ

ಪ್ರಧಾನ ಮಂತ್ರಿಯವರು ಮಾತುಕತೆಗೆ ಕರೆದರು. ಮಾತುಕತೆಯ ಫಲಶೃತಿ ಬಗ್ಗೆ ನಾನು ಸಂತೋಷಪಡುವುದಿಲ್ಲ. ಆದರೆ ಮಾತುಕತೆಗೆ ಸಂತೋಷಪಡುತ್ತೇನೆ. ಫಲಶೃತಿ ಬಗ್ಗೆ ಏನಾಗುತ್ತದೆಂದು ನೋಡೋಣ. ಫಲಶೃತಿ ಬಗ್ಗೆ ಜಂಟಿ ಹೇಳಿಕೆ ಬಗ್ಗೆ ನಮ್ಮದು ಇನ್ನೂ ವಾದ ವಿವಾದ ಇದೆ. ಆದರೆ ಪ್ರಧಾನ ಮಂತ್ರಿಯವರು ಮಾತುಕತೆಗೆ ಕರೆದರಲ್ಲಾ ಎನ್ನುವುದು ಒಂದು ಒಳ್ಳೆಯ ವಾತಾವರಣ. ಆ ವಾತಾವರಣವನ್ನು ನಿಜವಾಗಲೂ ನಾವು ಸ್ವಾಗತ ಮಾಡಿದ್ದೇವೆ. ನಮ್ಮ ನಿಲುವು ಮಾತುಕತೆಯೇ ಹೊರತು ನ್ಯಾಯ ಮಂಡಳಿಯಲ್ಲ. ಈ ತೀರ್ಮಾನವನ್ನು ಮುಖ್ಯ ಮಂತ್ರಿಗಳು ತೆಗೆದುಕೊಳ್ಳಬೇಕು. ಇಲ್ಲವೆಂದರೆ ನಾಳೆ ನಿಮ್ಮ ತಲೆ ಮೇಲೆ ಗೂಬೆ ಕೂರಿಸುತ್ತಾರೆ. ಈಗ ಎಚ್ಚರಿಕೆ ವಹಿಸಬೇಕು. ಕೊನೆಗೆ ಈ ರಾಜ್ಯ ಮುಖ್ಯವೇ ಹೊರತು ಪಕ್ಷ ಮುಖ್ಯ ಅಲ್ಲ. ಅದರ ಬಗ್ಗೆ ನೀವು ತೀರ್ಮಾನಕ್ಕೆ ಬರಬೇಕೆಂದು ಹೇಳಿ ತಮ್ಮನ್ನು ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ. ಸ್ವಾಮಿ, ಕೃಷ್ಣಾ ಯೋಜನೆ 2 ಸಾವಿರ ವರ್ಷಕ್ಕೆ ಮುಗಿಯುತ್ತದೆ. ತಾವು, ಇನ್ನೂ ಆಂಧ್ರ ಮುಖ್ಯ ಮಂತ್ರಿಗಳ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತುಕತೆ ಆಡಿಲ್ಲ. ಒಂದು ಸಾರಿ ಮಾತುಕತೆ ಮೈಸೂರಿನಲ್ಲಿ ಆದ ನಂತರ ಮತ್ತೆ ತಮ್ಮ ಮಾತುಕತೆ ನಡೆದಿಲ್ಲವೆಂದು ಅಂದುಕೊಂಡಿದ್ದೇನೆ. ತಿರುಪತಿಯಲ್ಲೊ ಮತ್ತು ಇನ್ನೆಲೋ ನಡೆಯುತ್ತದೆ ಎಂದು ತಾವು ಹೇಳಿದಿರಿ. ಈ ಮಾತುಕತೆಗೆ ತಾವು ಕಾಲ ನಿಗದಿ ಮಾಡಬೇಕು. ಮಾತುಕತೆಗೆ ಯಾವತ್ತು ನಿಗದಿ ಮಾಡುತ್ತೀರಿ? ಯಾವತ್ತು ತಾವು ಮಾತುಕತೆಯನ್ನು ಮುಗಿಸುತ್ತೀರಿ ಎಂದು ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ದಯಮಾಡಿ ಅದನ್ನು ಬಹಳ ಬೇಗ ಮುಗಿಸಿ. ಇಲ್ಲದಿದ್ದರೆ ಬಹಳ ಬೇಗ ಬೆಳಕು-ಕತ್ತಲೆಯಷ್ಟು ವೇಗವಾಗಿ ಬರುತ್ತದೆ 2 ಸಾವಿರ ವರ್ಷ. ಆದ್ದರಿಂದ, ನೀವು ಮಾತುಕತೆ ಮೂಲಕ ಮುಗಿಯುವುದಕ್ಕೆ ತಾವು ಮೂರು ಜನ ಮುಖ್ಯ ಮಂತ್ರಿಗಳು ಸೇರತಕ್ಕ ಒಂದು ತೀರ್ಮಾನಕ್ಕೆ ಬಹಳ ಬೇಗ ಬರಬೇಕು. ಆಮೇಲೆ, ಸ್ವಾಮಿ, ಪ್ರಧಾನ ಮಂತ್ರಿಗಳ ಮಿತವ್ಯಯ ಕಾರ್ಯಕ್ರಮದಲ್ಲಿ ನಮ್ಮ ಸರ್ಕಾರ ಆಚರಣೆಗೆ ಏನು ಕ್ರಮ ಕೈಗೊಂಡಿದ್ದೀರಿ. ಈಗ ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುತ್ತೀರಾ? ನೇಮಕ ಮಾಡದೆ ಆ ಖರ್ಚನ್ನು ಉಳಿಸತಕ್ಕಂಥ ವ್ಯವಸ್ಥೆ ಮಾಡಿದ್ದೀರಾ? ಅಥವಾ ಮಂತ್ರಿ ಮಂಡಲದಲ್ಲಿ ಕೆಲವರನ್ನು ತೆಗೆಯತಕ್ಕಂಥ ವ್ಯವಸ್ಥೆ ಮಾಡಿದ್ದೀರಾ? ತೆಗೆಯುವುದಾದರೆ ಯಾವಾಗ ಯಾರು ಯಾರನ್ನು ತೆಗೆಯುತ್ತೀರಿ? ಇವೆಲ್ಲಾ ಮಿತವ್ಯಯದಲ್ಲಿ ಬರುತ್ತವೆ. ಆದ್ದರಿಂದ ನಾನು ಯಾರ ಬಗ್ಗೆಯೂ ಆಕ್ಷೇಪಣೆ ಮಾಡುತ್ತಿಲ್ಲ. ನಿಮಗೆ ಮಿತವ್ಯಯದ ವ್ಯವಸ್ಥೆ ಇದ್ದರೆ, ತಾವು ಮಂತ್ರಿಗಳನ್ನು ತೆಗೆಯುವುದಾದರೆ ತೆಗೆಯಬಹುದು. ಅದು ನಿಮಗೆ ಸೇರಿದ್ದು, ಮಂಡಳಿಗಳನ್ನು, ನಿಗಮಗಳನ್ನು ಮಾಡುವುದಿಲ್ಲ ಎನ್ನುವುದಾದರೆ......

ಶ್ರೀ ಎಸ್. ಬಂಗಾರಪ್ಪ:- ಯಾರು ಯಾರನ್ನು ತೆಗೆಯಬೇಕೆಂದು ಹೇಳಿಬಿಟ್ಟರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್:- ಅದು ನಿಮಗೆ ಸೇರಿದ್ದು. ಆ ಅಧಿಕಾರ ತಮಗೆ ಇದೆ. ನಾನು ಆ ಅಧಿಕಾರವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ತಮಗೆ ಸೇರಿದ್ದು, ತಾವು ಮಾಡಿ ಸ್ವಾಮಿ, ತಮಗೆ ಹೇಳುತ್ತೇನೆ, ಈ ವಿಭಾಗಧಿಕಾರಿಗಳ ಹುದ್ದೆಗಳು ಇವೆಯಲ್ಲಾ, ಇವೇಕೆ ಸ್ವಾಮಿ? ಮೂರು ಮೂರು ಜಿಲ್ಲೆಗೆ, ನಾಲ್ಕು ನಾಲ್ಕು ಜಿಲ್ಲೆಗೆ ಒಬ್ಬ ಡಿವಿಷನಲ್ ಕಮಿಷನಲ್ ಹುದ್ದೆ ಮಾಡಿದ್ದೀರಲ್ಲಾ? ಆ ಹುದ್ದೆಗಳು ಬೇಕೆ? ಬೇಕಾಗಿಲ್ಲ. ಆ ಹುದ್ದೆಗಳು ಸಂಪೂರ್ಣವಾಗಿ ಹೋಗಬೇಕು. ಆ ಹುದ್ದೆಗಳಿಂದ ನಮಗೆ ಏನೂ ಉಪಯೋಗ ಇಲ್ಲ. ಆ ವ್ಯವಸ್ಥೆ ಇರುವುದು ಸರಿಯಲ್ಲ. ಅದರ ಖರ್ಚು ವ್ಯವಸ್ಥೆ ಎಲ್ಲಾ ಉಳಿಸತಕ್ಕಂಥಾದ್ದು ಒಳ್ಳೆಯದು. ನೀವು ಅಲ್ಲಿಗೆ ಹೋದಾಗ ಜಿಲ್ಲಾಧಿಕಾರಿಗಳೂ ಬರುತ್ತಾರೆ, ವಿಭಾಗ ಅಧಿಕಾರಿ ಬರುತ್ತಾರೆ ಮತ್ತು ಜಿಲ್ಲಾ ಪರಿಷತ್ತಿನ ಮುಖ್ಯಕಾರ್ಯದರ್ಶಿಗಳೂ ಬರುತ್ತಾರೆ. ಈ ಮೂರು ಜನಬರುತ್ತಾರೆ. ಆದ್ದರಿಂದ ಈ ವಿಭಾಗಾಅಧಿಕಾರಿಗಳ ಹುದ್ದೆಯನ್ನು ಸಂಪೂರ್ಣವಾಗಿ ತೆಗೆಯುವುದು ಒಳ್ಳೆಯದು. ಅದು ದೊಡ್ಡ ಬಿಳಿ ಆನೆ. ಅದೂ ರಾಜಭವನವೇ. ತಹಶೀಲ್ದಾರ್‌ರ ಹುದ್ದೆಗಳೇ ಸಾಕು. ಅದರ ಬಗ್ಗೆ ತಾವು ಸ್ವಲ್ಪ ಕುಳಿತು ಯೋಚನೆ ಮಾಡಿ. ಈ ಒಂದು ವ್ಯವಸ್ಥೆಯನ್ನು ತೆಗೆದರೆ ಒಳ್ಳೆಯದು. ಈಗ ಏನಾಗುತ್ತಿದೆ ಎಂದರೆ? ನಮ್ಮ ಅಧಿಕಾರವನ್ನು ಎಷ್ಟು ಸೃಷ್ಟಿಮಾಡುತ್ತಿದ್ದೇವೆ. ನಾನು ಅಧಿಕಾರಿಗಳ ಮೇಲೆ ಆರೋಪಣೆ ಮಾಡುತ್ತೇನೆಂದಲ್ಲ. 10 ವರ್ಷಗಳ ಹಿಂದೆ ಮುಖ್ಯ ಇಂಜಿನಿಯರ್‌ಗಳು ಎಷ್ಟು ಜನ ಇದ್ದರು, ನಮ್ಮಲ್ಲಿ ಐ.ಜಿ.ಗಳು ಎಷ್ಟು ಜನ ಇದ್ದರು? ಡಿ.ಜಿ. ಗಳು, ಡಿ.ಐ.ಜಿ. ಗಳು ಎಷ್ಟು ಜನ ಇದ್ದರು? ಇವೆಲ್ಲಾ ನೋಡಿದರೆ ಅಧಿಕಾರವನ್ನು ಸೃಷ್ಟಿ ಮಾಡುತ್ತಿದ್ದೇವೆ. ಆ ಅಧಿಕಾರಿಗಳನ್ನು ತೆಗೆಯಿರಿ ಎಂದಲ್ಲ, ಆ ವ್ಯವಸ್ಥೆಯನ್ನು ಸರಿಪಡಿಸಬೇಕಾದುದು ನಿಮ್ಮ ಕರ್ತವ್ಯವೆಂದು ಹೇಳುತ್ತೇನೆ. ಆಮೇಲೆ, ಆ ಅಧಿಕಾರಿಗಳ ಆ ಕಾರುಗಳು, ಆ ವ್ಯವಸ್ಥೆ, ಅವರ ಮನೆಗಳು, ಅವರ ವ್ಯವಸ್ಥೆಗಳನ್ನು ನೀವು ನೋಡಬೇಕು. ನೀವೂ ನೋಡಿದ್ದೀರಿ ಎಂದು ಕಾಣುತ್ತದೆ. ಬಹಳ ಅಪರಾಧ. ನಾವು 5 ವರ್ಷಕ್ಕೆ ಒಂದು ಸಾರಿ ಬರುತ್ತೇವೆ, ಜನ ವೋಟು ಕೊಟ್ಟರೆ. ಕೊಡಲಿಲ್ಲವೆಂದರೆ ನಾವು ಫುಟ್‌ಪಾತ್. ನಿಮಗೆ ಗೊತ್ತಿರಬೇಕು; ನಮ್ಮ ಹಣೆಬರಹವನ್ನು ರಾಜಕಾರಣಿಗಳಾಗಿ ನೀವು ನೋಡಿದ್ದೀರಿ. ಅವರದು ಹಾಗಿಲ್ಲ. ಅವರ

ವ್ಯವಸ್ಥೆಗಳೇ ಬೇರೆ. ಆ ವ್ಯವಸ್ಥೆಗಳು ಬದಲಾವಣೆಯಾಗಬೇಕಾಗುತ್ತದೆ. ಈ ರಾಜ್ಯದಲ್ಲಿ, ಪ್ರಜಾಪ್ರಭುತ್ವದಲ್ಲಿ ಅವರೇ ದೊರೆಗಳು. ಅನೇಕ ಕಡೆ ಅಧಿಕಾರಿಗಳನ್ನು ತಾವು ನೋಡಬೇಕು ಸ್ವಾಮಿ. ಬಹಳ ಕಷ್ಟ. ಶಾಸಕರು ನಾವು ಏನೋ ದಭಾವಣೆ ಮಾಡಿಕೊಂಡಿರುವುದರಿಂದ ಉಳಿದುಕೊಂಡಿದ್ದೇವೆ. ಪಾಪ, ನಮ್ಮ ಅನೇಕ ಸ್ನೇಹಿತರು ಹೋದರೆ ಕೆಲವು ಐ.ಪಿ.ಎಸ್., ಐ.ಎ.ಎಸ್. ಅಧಿಕಾರಿಗಳು ಮುಖ ಎತ್ತಿ ನೋಡುವುದಿಲ್ಲ. ಅದರಲ್ಲಿ ಅನುಮಾನವೇ ಇಲ್ಲ. ಕೆಲವು ಐ.ಪಿ.ಎಸ್. ಆಫೀಸರ್‌ಗಳು ಹಿಡಿದುಕೊಂಡು ಒದ್ರೂ ಒದ್ರು ಅಮೇಲೆ, ನಾನು ಎಂ.ಎಲ್.ಎ. ಅಂದ ಮೇಲೆ, ಹೌದಾ? ಎಂದು ತಮಗೆ ಕಾಗದ ಬರೆಯುತ್ತಾರೆ. ಎಂ.ಎಲ್.ಎ. ಯನ್ನು ನಾವು ದಸ್ತಗಿರಿ ಮಾಡಿದ್ದೇವೆ ಎಂದು ಕಾಗದ ಬರೆಯುತ್ತಾರೆ. ಇದು ನಡೆದಿದೆ. ಇದನ್ನು ನಾವು ತಳ್ಳಿಹಾಕುವಹಾಗಿಲ್ಲ. ನನಗೆ ಪರಿಚಯ ಇರುವುದರಿಂದ ಉಳಿದುಕೊಂಡಿದ್ದೇನೆ, ಶಾಸನಸಭೆಯಲ್ಲಿ ಇರುವುದರಿಂದ ಉಳಿದುಕೊಂಡಿದ್ದೇನೆ. ತಮಗೆ ನಾನು ಒಂದು ಕಥೆಯನ್ನು ಹೇಳುತ್ತೇನೆ. ನಾನು ನಗರಸಭೆಗೆ ಬರುವವರೆಗೂ ಲಾಕಪ್‌ನಲ್ಲಿ ಹಾಕುತ್ತಿದ್ದರು. ನಗರಸಭೆಗೆ ಬಂದಮೇಲೆ ಹೊರಗಡೆ ಕೂರಿಸುತ್ತಿದ್ದರು. ಈಗ ಶಾಸನಸಭೆಗೆ ಬಂದ ಮೇಲೆ ಗೌರವವಾಗಿ ಜೀಪ್‌ನಲ್ಲಿ ಕರೆದುಕೊಂಡು ಹೋಗಿ ಕಾಫಿ ಗೀಫಿ ಕೊಡುತ್ತಾರೆ. ಈ ವ್ಯತ್ಯಾಸವನ್ನು ತಾವು ಗಮನಿಸಬೇಕು, ಮತ್ತೆ ನಾನು ಅಧಿಕಾರ ಕಳೆದುಕೊಂಡ ಮೇಲೆ ನನ್ನ ಹಣೆಬರಹ ಅಷ್ಟೇ....

ಅಧ್ಯಕ್ಷರು: ಏನು ಲಾಕಪ್ಪ!

ಶ್ರೀ ವಾಟಾಳ್ ನಾಗರಾಜ್:- ಹೌದು. ಅವರ ಮಾತಿನ ಬದಲಾವಣೆಯನ್ನು ಹೇಳುತ್ತೇನೆ. ನಾನು ಅನೇಕ ಸಲ ಫೋನ್ ತೆಗೆದುಕೊಂಡಾಗ ಪೋಲೀಸ್ ಅಧಿಕಾರಿಗಳು ಕಠೋರವಾಗಿ ಯಾರು ಎಂದು ಕೇಳುತ್ತಾರೆ. ನಂತರ ವಾಟಾಳ್ ನಾಗರಾಜ್ ಎಂದಮೇಲೆ ನಮಸ್ಕಾರ ಸ್ವಾಮಿ ಎಂದು ಹೇಳುತ್ತಾರೆ. ಅವರ ಈ ರೀತಿಯ ಭಾವನೆಗಳು ಹಾಗೂ ಶಬ್ದಗಳು ಹೋಗಬೇಕು ಎಂದು ಹೇಳುತ್ತಿದ್ದೇನೆ. ನಮ್ಮ ಪ್ರಜಾಪ್ರಭುತ್ವದಲ್ಲಿ ಅನೇಕ ಜನ ಶಾಸಕರ ಹಣೇಬರಹವನ್ನು ನೋಡಿದ್ದೇನೆ. ಅರ್ಜಿಗಳನ್ನು ತೆಗೆದುಕೊಂಡು ಅವರ ಮುಂದೆ ನಿಂತುಕೊಳ್ಳಬೇಕು. ನಮ್ಮ ಸರ್ಕಾರದಲ್ಲಿ ಒಂದು ನಿಯಮ ಇದೆ, ಶಾಸಕರು ಬಂದ ತಕ್ಷಣ ಐ.ಎ.ಎಸ್. ಅಧಿಕಾರಿಗಳಾಗಲಿ ಅಥವಾ ಬೇರೆ ಯಾವ ಅಧಿಕಾರಿಗಳೇ ಆಗಲಿ ಎದ್ದು ನಿಂತು ಶಾಸಕರನ್ನು ಕರೆದು ಮಾತನಾಡಿಸಬೇಕು ಎಂದು ಇದೆ. ಕೆಲಸ ಮಾಡುವುದು ಬಿಡುವುದು ಬೇರೆ ವಿಷಯ. ಆದರೆ ಪರಿಸ್ಥಿತಿ ಬೇರೆ ರೀತಿ ಆಗಿದೆ. ಶಾಸಕರ ಪರಿಸ್ಥಿತಿ ಇರಲಿ ಸ್ವಾಮಿ, ಕೆಲವು ಮಂತ್ರಿಗಳ ಹಣೇಬರಹವೂ ಕೂಡ ಇಷ್ಟೆ. ಮಂತ್ರಿಗಳ ಮಾತನ್ನು ಎಷ್ಟೋ ಜನ ಐ. ಎ. ಎಸ್. ಅಧಿಕಾರಿಗಳು ಕೇಳುವುದಿಲ್ಲ. ಸಿಗರೇಟ್ ಸೇದುವುದು, ಮಂತ್ರಿಗಳ ಮುಖಕ್ಕೆ ಹೊಗೆಯನ್ನು ಬಿಡುವುದು ಉಂಟು. ಹಿಂದೆ ಶ್ರೀ ಹೆಚ್. ಎಂ. ಚನ್ನಬಸಪ್ಪನವರು, ಸಿದ್ದವೀರಪ್ಪನವರು, ಎಂ. ವಿ. ರಾಮರಾವ್‌ರವರು ಇದ್ದರು. ಅವರ ಮುಂದೆ ಇವರ ಆಟ ನಡೆಯುತ್ತಿರಲಿಲ್ಲ, ಅವರು ಇವರನ್ನು ಬಲಿ ಹಾಕುತ್ತಿದ್ದರು. ಮಾನ್ಯ ನರಸಿಂಹಮೂರ್ತಿರವರೇ ನಿಮಗೆ ಅನುಭವ ಆಗಿರಬಹುದು, ಶಿವಣ್ಣನವರೆ ನಿಮಗೂ ಅನುಭವ ಆಗಿರಬಹುದು.

Sri T.N. NARASIHMA MURTHY:- I know how to control my department.

ಶ್ರೀ ವಾಟಾಳ್ ನಾಗರಾಜ್:- ನೀವು ಎಲ್ಲರನ್ನೂ ಕಂಟ್ರೋಲ್ ಮಾಡುತ್ತೀರಿ. ನಿಮ್ಮ ಭಾಷಣ, ನಿಮ್ಮ ಉತ್ತರ, ನಿಮ್ಮ ಭರವಸೆ ಎಲ್ಲವನ್ನು ನೋಡಿದ್ದೇವೆ. ನಿಮಗೆ ನಾಜೂಕಾದ ಕಲೆ ಇದೆ. ಆದ್ದರಿಂದಲೇ ನೀವು ಯಾವುದೇ ಸರ್ಕಾರ ಬರಲಿ, ಮಂತ್ರಿಯಾಗಿ ಬರತಕ್ಕ ವ್ಯವಸ್ಥೆ ಇದೆ, ಅದನ್ನು ನಾನು ಒಪ್ಪುತ್ತೇನೆ. ತಮಗೆ ಏನು ಹೇಳುತ್ತಿದ್ದೇನೆ ಎಂದರೆ, ಈ ಅಧಿಕಾರಿ ಶಾಹಿ ಬದಲಾವಣೆ ಆಗಲೇಬೇಕು. ಏಕೆಂದರೆ ಇದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿರತಕ್ಕದ್ದು. ಈ ಅಧಿಕಾರಿಗಳು ತಮ್ಮದ್ದೇ ಆದ ದರ್ಬಾರು ಮಾಡುತ್ತಿದ್ದಾರೆ. ಈ ರೀತಿ ದರ್ಬಾರು ಮಾಡತಕ್ಕ ವ್ಯವಸ್ಥೆ ಇರಬಾರದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ಕಳಕಳಿಯಿಂದ ಕೇಳುತ್ತಿದ್ದೇನೆ. ದಯಮಾಡಿ ಒಂದು ಅಧಿಕಾರಿಗಳ ಸಭೆಯನ್ನು ಕರೆದು, ಶಾಸಕರು ಬಂದರೆ ಮತ್ತು ಜನತೆಯ ಪರವಾಗಿ ಯಾರೇ ಜನತೆಯ ಪ್ರತಿನಿಧಿಗಳು ಬಂದರೆ ಅವರು ಮಂಡಲ್ ಪಂಚಾಯಿತಿ ಸದಸ್ಯರಾಗಿರಲಿ ಅಥವಾ ಬೇರೆಯವರಾಗಿರಲಿ, ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ತಾವು ಒಂದು ಸುತ್ತೋಲೆಯನ್ನು ಕಳುಹಿಸಲೇಬೇಕು. ಆ ಸುತ್ತೋಲೆಗೆ ವಿರುದ್ಧವಾಗಿ ನಡೆದುಕೊಳ್ಳುವಂಥಹ ಅಧಿಕಾರಿಗಳ ಮೇಲೆ ತೀವ್ರ ಕ್ರಮವನ್ನು ಕೈಗೊಳ್ಳಬೇಕು. ಯಾವುದೇ ಪಕ್ಷ ಅಥವಾ ಪಂಗಡಗಳ ಬಗ್ಗೆ ನಾನು ಮಾತನಾಡುತ್ತಿಲ್ಲ. ಇದು ಸ್ಪಷ್ಟವಾಗಿ ಆಗಬೇಕಾದ ಕಾರ್ಯ.

ಇನ್ನು ಲೋಕಾಯುಕ್ತ ಬಗ್ಗೆ ಹೇಳುವುದಾದರೆ ಅನೇಕ ಜನರ ಮೇಲೆ 'ಬಿ' ವರದಿಯನ್ನು ಲೋಕಾಯುಕ್ತದವರು ಕೊಟ್ಟಿದ್ದಾರೆ. ಸರ್ಕಾರ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಲು ಕೇಂದ್ರ ಸರ್ಕಾರಕ್ಕೆ ಬರೆಯುವುದು ಒಳ್ಳೆಯದು.

ಅವರೆಲ್ಲರೂ ಸತ್ಯವಂತರಾಗಿ ಹೊರಗಡೆ ಬಂದಿದ್ದಾರೆ. ಅವರಿಗೆ ಪದಶ್ರೀ, ಪದ್ಮವಿಭೂಷಣ ಪ್ರಶಸ್ತಿಗಳನ್ನು ಕೊಟ್ಟು ಮರ್ಯಾದೆ ಮಾಡುವುದು ಒಳ್ಳೆಯದು. ಆ ಕಾಲದಲ್ಲಿ ಸೀತೆ ಅಗ್ನಿಪ್ರವೇಶ ಮಾಡಿ ಹೊರಗಡೆ ಬಂದರೆ ಈ ಕಾಲದಲ್ಲಿ ನಮ್ಮ ಅಧಿಕಾರಿಗಳು ಲೋಕಾಯುಕ್ತದಿಂದ ಮುಕ್ತವಾಗಿ ಹೊರಗಡೆ ಬಂದಿದ್ದಾರೆ. ನಾವು ಅವರಿಗೆ ಪದಶ್ರೀ, ರಾಜ್ಯೋತ್ಸವ ಪ್ರಶಸ್ತಿಗಳನ್ನು ಕೊಡುವುದು ಒಳ್ಳೆಯದು. ಪದಶ್ರೀ ಕಥೆ ಏನು ಎಂಬುದನ್ನು ನೋಡಿದ್ದೇವೆ.

ಅಧ್ಯಕ್ಷರು:- ನೀವು ನವೆಂಬರ್ ಒಂದರಂದು ಉತ್ಸವ ಮಾಡುತ್ತೀರಲ್ಲ ಆಗ ಅಹ್ವಾನ.....

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ನಾನು ಕರೆಯುವುದಿಲ್ಲ. ನಾನು ಕರೆದರೆ ಸರಿಹೋಗುವುದಿಲ್ಲ. ನಾನು ಕರೆದರೆ ಮುದ್ರೆ ಬೀಳುವುದಿಲ್ಲ ಸರ್ಕಾರ ಮುದ್ರೆ ಒತ್ತಿದರೆ, ಅದನ್ನು ಮುದ್ರೆ ಎನ್ನುತ್ತೇವೆ. ಶಂಖದಿಂದಲೇ ತೀರ್ಥ ಬೀಳಬೇಕು. ಅದಕ್ಕೋಸ್ಕರ ಸರ್ಕಾರವೇ ಅವರನ್ನೆಲ್ಲ ಕರೆದು ಮರ್ಯಾದೆ ಮಾಡಿ, ಶಾಲು ಹೊದಿಸಿ ಅವರಿಗೆ ಬಡತನ ಬಂದಿದೆ ಎಂದು 5-10 ಸಾವಿರ ರೂಪಾಯಿ, ರಾಜ್ಯೋತ್ಸವ ಪ್ರಶಸ್ತಿ ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಇವರಿಗೂ 10 ಸಾವಿರ ರೂಪಾಯಿ ಕೊಡಲಿ. ಇದು ಒಂದು ಸಿನಿಮಾ ನೋಡಿದಂತೆ ಮರೆಮಾಚಿಕೊಂಡ ರೀತಿಯಲ್ಲಿ ವ್ಯವಸ್ಥೆ ನಡೆಯುತ್ತಾ ಇದೆ. ಇದು ಆಗಬಾರದು ಎಂದು ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕನ್ನಡ ಆಡಳಿತ ಭಾಷೆ ಬಗ್ಗೆ ಏನಾಗಿದೆ ಎಂಬುದನ್ನು ಹೇಳುತ್ತೇನೆ. ನಾವು ನೀವು ಪ್ರತಿನಿತ್ಯ ನೋಡುತ್ತಿದ್ದೇವೆ. ಈ ಸಭೆಗೂ ಕೂಡ ಬರತಕ್ಕ ಬಹುತೇಕ ಕಡತಗಳು, ಕಾಗದ ಪತ್ರಗಳು ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ ಇವೆ. ನಾವು ಕನ್ನಡವನ್ನು ಆಡಳಿತ ಭಾಷೆ ಎಂದು ಏತಕ್ಕೆ ಇಟ್ಟುಕೊಂಡಿದ್ದೇವೆ? ಇದು ಸುಮ್ಮನೆ ಯಾರಿಗಾದರೂ ಕಣ್ಣೆಸರು ಆದರೆ ಮುಖದ ಮೇಲೆ ಒಂದು ಕಪ್ಪು ಹಾಕಿಕೊಳ್ಳುತ್ತಾರೆ. ಹಾಗೆ ಸುಂದರವಾಗಿ ಕಾಣುತ್ತದೆ ಎನ್ನುವ ರೀತಿಯಲ್ಲಿ ಇದನ್ನು ಇಟ್ಟುಕೊಂಡಿದ್ದೇವೆ. ನಮ್ಮ ಕರ್ನಾಟಕ ರಾಜ್ಯ ಪತ್ರ ಗೆಜೆಟ್, ಏನು ಬರುತ್ತಿದೆ ಅದರಲ್ಲಿ 'ಕರ್ನಾಟಕ ರಾಜ್ಯ ಪತ್ರ' ಎಂದು ಕನ್ನಡದಲ್ಲಿ ಇದೆ. ಆದರೆ, ಮುದ್ರಣ ಆಗಿರುವುದೆಲ್ಲ ಬರೀ ಇಂಗ್ಲೀಷ್‌ನಲ್ಲಿ ಇವೆ.

ಕರ್ನಾಟಕದಲ್ಲಿ ಏನು ವ್ಯವಸ್ಥೆ ಇದು? ಇಲ್ಲಿ ಆಡಳಿತ ಭಾಷೆಯಾಗಿ ಕನ್ನಡ ಇದೆ. ಕನ್ನಡದ ಬಗ್ಗೆ, ಕನ್ನಡ ಆಡಳಿತ ಭಾಷೆ ಬಗ್ಗೆ ಅಪಾರವಾದಂಥ ಅಭಿಮಾನ ಉಳ್ಳವರು ತಾವುಗಳು ಇರುವಾಗ ಈ ಪರಿಸ್ಥಿತಿ ಏಕೆ? ಇದು ಸರಿಯಲ್ಲ, ಆದ್ದರಿಂದ ಸಮಗ್ರವಾಗಿ ಕನ್ನಡವನ್ನು ಆಡಳಿತ ಭಾಷೆಯಾಗಿ ಪರಿಣಾಮಕಾರಿಯಾಗಿ ಜಾರಿಗೆ ತರಲು ಸರಕಾರಕ್ಕೆ ತಾವು ಒಂದು ಕಟ್ಟುನಿಟ್ಟಿನ ಆದೇಶವನ್ನು ಕೊಡಬೇಕು. ಇಲ್ಲವಾದರೆ ಯಾವ ಒಂದು ಸಮಸ್ಯೆಯೂ ಸಂಪೂರ್ಣವಾಗಿ ಬಗೆಹರಿಯುವುದಿಲ್ಲ, ನಮ್ಮಲ್ಲಿ ಅನೇಕ ಸದನ ಸಮಿತಿಗಳು ಇವೆ. ನಾನು ಕೂಡ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಸದಸ್ಯನಾಗಿದ್ದೇನೆ. ನಮ್ಮ ಸಮಿತಿಗೆ ಅಧ್ಯಕ್ಷರಾಗಿ ಮಾನ್ಯ ಏಕಾಂತಯ್ಯನವರು ಇದ್ದಾರೆ. ಅವೊತ್ತು ತಾವುಗಳು ಜಂಟಿ ಸಭೆಯನ್ನು ಕರೆದಾಗ ನಾನು ತಮ್ಮ ಮುಂದೆ ಒಂದು ಮನವಿ ಮಾಡಿಕೊಂಡಿದ್ದೆ. ಇಂಥ ಯಾವ ಸಮಿತಿಯ ಸಭೆಗಳಲ್ಲಿಯೂ ಕನ್ನಡದಲ್ಲಿ ಮಾಹಿತಿ ಬರುವುದಿಲ್ಲ. ಎಲ್ಲವೂ ಇಂಗ್ಲೀಷ್‌ನಲ್ಲಿಯೇ ಟಿಪ್ಪಣಿಗಳು ವ್ಯವಹಾರಗಳು ನಡೆಯುತ್ತವೆ. ಹೀಗೆ ಕನ್ನಡದ ವ್ಯವಸ್ಥೆಯಾದರೆ ಹೇಗೆ? ಹೀಗೆ ಮಾಡುವುದೇ ನಿಮ್ಮ ಇಚ್ಛೆಯಾದರೆ, ಕನ್ನಡ ಇಲ್ಲ, ಇವೊತ್ತಿನಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ತೆಗೆದುಹಾಕಿದ್ದೇವೆ, ನಾವು ಇಷ್ಟ ಬಂದ ಹಾಗೆ ಯಾವ ಭಾಷೆಯಲ್ಲಿ ಬೇಕಾದರೂ ಮಾಡಿಕೊಂಡು ಹೋಗುತ್ತೇವೆ ಎಂದಾದರೂ ಹೇಳಿ, ಅದನ್ನು ಬಿಟ್ಟು ಒಂದು ಕಡೆ ಕನ್ನಡ ಆಡಳಿತ ಭಾಷೆ ಎಂದು ಹೇಳಿ, ಮತ್ತೊಂದು ಕಡೆ ಕನ್ನಡಕ್ಕೆ ಅಗೌರವ ಆಗುವ ರೀತಿಯಲ್ಲಿ ನಡೆದುಕೊಳ್ಳುವುದಾದರೆ ಅದು ಸರಿಯಾಗಲಾರದು ಎಂದು ಹೇಳ ಬಯಸುತ್ತೇನೆ.

ಇನ್ನು ಕೇಂದ್ರದಲ್ಲಿ ನಮ್ಮ ಕರ್ನಾಟಕ ರಾಜ್ಯದ ಪರವಾಗಿ ಒಂದು ಲಾಬಿ ಮಾಡಬೇಕು. ಅದು ಒಳ್ಳೆಯ ಶಕ್ತಿಯುತವಾಗಿ ಇರಬೇಕು, ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಾ ಏರ್ಪಾಡುಗಳನ್ನು, ವ್ಯವಹಾರಗಳನ್ನು ನೋಡಿಕೊಳ್ಳುವಂತಿರಬೇಕು. ನಮ್ಮ ರಾಜ್ಯದ ಎಲ್ಲಾ ಸಮಸ್ಯೆಗಳನ್ನು ಕೇಂದ್ರದಲ್ಲಿನ ನಾಯಕರುಗಳಿಗೆ, ಸಚಿವರುಗಳಿಗೆ, ವಿರೋಧ ಪಕ್ಷದ ಎಲ್ಲಾ ನಾಯಕರುಗಳಿಗೆ ಅವರು ತಿಳಿಸಿ ಹೇಳತಕ್ಕಂಥಾದ್ದಾಗಿರಬೇಕು. ಇಂಥ ಒಂದು ವ್ಯವಸ್ಥೆ ಅಲ್ಲಿರಬೇಕು. ಉದಾಹರಣೆಗೆ ಹೇಳುವುದಾದರೆ, ಕಾವೇರಿ ವಿಚಾರವಾಗಿ ಕೇಂದ್ರದ ಅನೇಕ ಮುಖಂಡರುಗಳಿಗೆ ನಮ್ಮ ಸಮಸ್ಯೆಗಳು ತಿಳಿದೇ ಇಲ್ಲ. ತಮಿಳುನಾಡಿನವರು ಹಿಂದೆ ಒಬ್ಬ ಕ್ಯಾಬಿನೆಟ್ ದರ್ಜೆಯ ಮಂತ್ರಿಯನ್ನು ಅಲ್ಲಿ ವ್ಯವಸ್ಥೆ ಮಾಡಿದ್ದರು. ನಮ್ಮ ರಾಜ್ಯದವರು ಕೂಡ ಅಂಥ ಒಂದು ವ್ಯವಸ್ಥೆಯನ್ನು ಅಲ್ಲಿ ಮಾಡಬೇಕು. ಕೇಂದ್ರದಲ್ಲಿ ಏನೇನು ಪ್ರಕಟಣೆಗಳು ಆಗುತ್ತವೆ, ಅದಕ್ಕೆ ನಾವು ಏನು ಮಾಡಬೇಕಾಗಿದೆ, ಇತ್ಯಾದಿ ವಿಚಾರಗಳಲ್ಲಿ ನೋಡಿಕೊಳ್ಳಲು ಒಂದು ಸುಂದರವಾದ ಕಾರ್ಯಾಲಯವನ್ನು ಅಲ್ಲಿ ಸ್ಥಾಪಿಸಿ, ಅದಕ್ಕೆ ಸಮರ್ಥರಾದಂಥವರೊಬ್ಬರನ್ನು ನೇಮಿಸಬೇಕು ಎಂದು ಹೇಳ ಬಯಸುತ್ತೇನೆ.

ಇನ್ನು ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳ ಬಗ್ಗೆ ಹೇಳಬೇಕೆಂದರೆ, ಅವುಗಳ ವ್ಯವಸ್ಥೆಯನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ. ತಾವು ಆ ಒಂದು ವ್ಯವಸ್ಥೆಗೆ ತಿದ್ದುಪಡಿ ತರಬೇಕೆಂದು ಹೇಳಿ, ಏಕಾಏಕಿಯಾಗಿ ರದ್ದುಮಾಡಿದ್ದೀರಿ. ಅಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಇದೊಂದು ರೀತಿಯಲ್ಲಿ ಪ್ರಜಾಪ್ರಭುತ್ವಕ್ಕೆ ಮಾಡಿದ ಅನ್ಯಾಯ ಎಂದು ಹೇಳಬೇಕಾಗುತ್ತದೆ. ಇದೊಂದು ರೀತಿಯಲ್ಲಿ ಪ್ರಜಾಪ್ರಭುತ್ವಕ್ಕೆ ಮಾಡಿದ ದ್ರೋಹವೂ ಹೌದು. ಈ ಮಾತನ್ನು ಬಹಳ ನೋವಿನಿಂದ ಹೇಳಬೇಕಾಗಿ ಬಂದಿದೆ. ಬಹುಶಃ ಇನ್ನು ತಾವು ಬೇಗನೆ ಚುನಾವಣೆ ಮಾಡತಕ್ಕಂಥ ವ್ಯವಸ್ಥೆ ಇಲ್ಲ, ನೀವು ಚುನಾವಣೆ ಮಾಡುತ್ತೀರಿ ಎಂದು ನಾನು ಅಂದುಕೊಂಡಿಲ್ಲ. ಒಂದು ವೇಳೆ ನೀವು ಶೀಘ್ರದಲ್ಲಿಯೇ ಚುನಾವಣೆ ಮಾಡುತ್ತೇವೆ ಅಂದರೆ ಅದು ನನಗೆ ತುಂಬಾ ಸಂತೋಷವನ್ನು ಕೊಡುತ್ತದೆ. ಈ ಜಿಲ್ಲಾಪರಿಷತ್ತಿನ ಮೂಲಕ ಗ್ರಾಮ ಸ್ವರಾಜ್ಯ ಜನತೆಗೆ ತತ್‌ಕ್ಷಣ ಸಿಗುವುದು ಮಂಡಳ ಪಂಚಾಯತ್‌ನ ಸದಸ್ಯತ್ವ ಮತ್ತು ಪ್ರಧಾನರಿಂದ. ಅನಂತರ ಜಿಲ್ಲಾಪರಿಷತ್‌ನ ಸದಸ್ಯತ್ವದಿಂದ. ಅದನ್ನು ಈಗ ಮೊಟಕುಗೊಳಿಸಿದ್ದೀರಿ. ಒಂದು ರೀತಿಯಲ್ಲಿ ತಾವು ಸಮಾಜವಾದಿ ಹಿನ್ನೆಲೆಯಿಂದ ಬಂದಿರತಕ್ಕಂಥವರು. ಆದರೆ ಈ ರೀತಿಯಲ್ಲಿ ಸರ್ವಾಧಿಕಾರಕ್ಕೆ ತಿರುಗುತ್ತಿರುವ ನೀತಿಯನ್ನು ನೋಡಿದರೆ ಇದು ಸರಿಯೇ ಎಂಬ ಬಗ್ಗೆ ನೀವೇ ನಿಮ್ಮ ಆತ್ಮ ಶೋಧನೆ ಮಾಡಿಕೊಳ್ಳಿ. ಏನಿದ್ದರೂ ಇದನ್ನು ಮಾಡಿದ್ದೂ ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಗಡಿಪ್ರದೇಶದ ಬಗ್ಗೆ ತಮಗೆ ಸಾಕಷ್ಟು ಕಳಕಳಿ ಇದೆ. ಈಗ ಆ ಬಗ್ಗೆ ತಾವು ಕೊಟ್ಟಿರತಕ್ಕಂಥ ಹಣ ಕೇವಲ 10ಕೋಟಿ ರೂಪಾಯಿಗಳು. ಇದು ಸಾಕಾಗುವುದಿಲ್ಲ, ಆದ್ದರಿಂದ ಕನಿಷ್ಟ 25ಕೋಟಿ ರೂಪಾಯಿಗಳನ್ನಾದರೂ ಗಡಿ ಪ್ರದೇಶಗಳಿಗೆ ಕೊಡಬೇಕು. ನಮ್ಮ ಚಾಮರಾಜನಗರ ತಾಲ್ಲೂಕು ಬಹಳ ಹಿಂದುಳಿದಿರತಕ್ಕ ತಾಲ್ಲೂಕು. ಆ ತಾಲ್ಲೂಕಿನಲ್ಲಿ ಎರಡು ಕೋಮುಗಳು ಇವೆ. ಉಪ್ಪಲಿಗರು, ಉಪ್ಪಾರರು ಎಂದು ಅವರನ್ನು ಕರೆಯುತ್ತಾರೆ. ಆ ಜನಾಂಗದಲ್ಲಿ ರಾಜಕಾರಣಿಗಳು ಇಲ್ಲ, ಕಲಾವಿದರು ಇಲ್ಲ, ವಿದ್ಯಾವಂತರು ಇಲ್ಲ, ಅತ್ಯಂತ ಹಿಂದುಳಿದಿರತಕ್ಕ ಕಡುಬಡವರು ಇವರಲ್ಲಿದ್ದಾರೆ. ಆ ಜನಾಂಗದವರ ಉನ್ನತಿಗಾಗಿ ಸರಕಾರದವರು ಒಂದು ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಈ ಜನಾಂಗದವರು ಮೈಸೂರು ಜಿಲ್ಲೆ, ಮತ್ತಿತರ ಕಡೆಗಳ್ಲಿ ಸ್ವಲ್ಪ ಇದ್ದಾರೆ. ಆದ್ದರಿಂದ ಈ ಉಪ್ಪಾರ ಜನಾಂಗದವರ ಅಭಿವೃದ್ಧಿಗಾಗಿ ಸರಕಾರದವರು ಒಂದು ಸಮಿತಿಯನ್ನು ಮಾಡಿ ಅವರ ಜೀವನಕ್ಕೆ ಸಹಾಯಕವಾಗುವ ಒಂದು ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ನಾಯಕ ಜನಾಂಗ ಇದೆ. ಅವರನ್ನು ಪರಿಶಿಷ್ಟ ವರ್ಗದ ಪಟ್ಟಿಗೆ ಸೇರಿಸಬೇಕು. ಹಾಗೆಯೇ ರಾಜಪರಿವಾರ ಮತ್ತು ತಳವಾರ–ಇವೆರಡೂ ಬಿಟ್ಟು ಹೋಗಿವೆ. ಇವರನ್ನೂ ತಾವು ಸೇರಿಸಬೇಕಾದ್ದು ಅತ್ಯಂತ ಪ್ರಮುಖವಾದ ಕಾರ್ಯ. ಅಲ್ಲದೆ ಕಾಡು ಕುರುಬ ಮತ್ತು ಜೇನು ಕುರುಬರು– ಇವರು ಯಾವುದೇ ಲಿಸ್ಟ್‌ನಲ್ಲೂ ಇಲ್ಲ, ಆದ್ದರಿಂದ ತಹಶೀಲ್ದಾರರು ಇವರಿಗೆ ಒಂದು ಸರ್ಟಿಫಿಕೇಟ್ ಕೊಡುವುದರಲ್ಲಿ ತೊಂದರೆ ಇದೆ. ಸರ್ಕಾರ ಇದನ್ನು ಗಂಭೀರವಾಗಿ ಯೋಚನೆ ಮಾಡಬೇಕು ಎಂದ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ನಮ್ಮ ಕಾರ್ಖಾನೆಗಳು ಮುಚ್ಚಿ 15 ಸಾವಿರ ಜನ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಸುಮಾರು 10 ಸಾವಿರ ಮೊಕದ್ದಮೆಗಳು ಇನ್ನೂ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿವೆ. ಅನೇಕ ಮೊಕದ್ದಮೆಗಳು ಕಾರ್ಮಿಕ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಉಳಿದಿವೆ. ಅನೇಕ ಕಾರ್ಮಿಕ ನ್ಯಾಯಾಲಯದಲ್ಲಿ ನ್ಯಾಯಧೀಶರು ಇಲ್ಲ, ಜಾವಾ ಕಾರ್ಖಾನೆ ಮುಚ್ಚಿದೆ, ಕೆ. ಆರ್. ಮಿಲ್ ಮುಚ್ಚಿದೆ, ಹೀಗೆ ಅನೇಕ ಕಾರ್ಖಾನೆಗಳು ಮುಚ್ಚಿವೆ. ಕೆ. ಆರ್. ಮಿಲ್ಲಿನ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಜಾವ ಕಾರ್ಖಾನೆಯ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಇವರ ಬಗ್ಗೆ ಈವತ್ತು ನಮ್ಮ ಕೈಗಾರಿಕಾ ನೀತಿ ಸರಿಯಾಗಿಲ್ಲ. ಆದ್ದರಿಂದ ಹೊಸದಾದಂಥ ಕೈಗಾರಿಕಾ ನೀತಿಯನ್ನು ಹಾಕಿಕೊಂಡು ಈ ರೀತಿ ಹೊರಗೆ ಉಳಿದಿರುವಂತಹ ಕಾರ್ಮಿಕರನ್ನು ಉಳಿಸತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಇನ್ನು ಮಲೆನಾಡು ಪ್ರದೇಶಕ್ಕೆ ಚಾಮರಾಜ ತಾಲ್ಲೂಕನ್ನು ಸೇರಿಸುವ ಬಗ್ಗೆ ತಮ್ಮ ಅಧಿಕಾರಿಗಳ ತಂಡ ಒಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ, ಹಾಗೂ ಶಿಫಾರಸ್ಸು ಮಾಡಿದ್ದಾರೆ. ಅದನ್ನು ಕೂಡಲೇ ತಾವು ಸೇರಿಸಬೇಕು. ಒಂದು ಮಾತು ತಾವು ಏನು ಕೊಡದೇ ಇದ್ದರೂ ಸ್ಮಶಾನಕ್ಕೆ ಜಾಗ ಕೊಡುವುದಕ್ಕೆ ವ್ಯವಸ್ಥೆಯಾಗಿದೆ. ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಚಿಂತನೆ ಬಂದಿದೆ. ಅದಕ್ಕೆ ನಾನು ಸಂತೋಷ ಪಡುತ್ತೇನೆ. ನಮಗೆ ಏನೂ ಇಲ್ಲದೆ ಇದ್ದರೂ ನಮ್ಮ ಅಂತ್ಯ ಕ್ರಿಯೆ ಆಗುವುದಕ್ಕೆ ಈ ವ್ಯವಸ್ಥೆಯನ್ನಾದರೂ ಮಾಡಲು ಹೊರಟಿದ್ದೀರಿ. ಜನಗಳಿಗೆ ಏನೂ ಕೊಡದೇ ಇದ್ದರೂ ಕೊನೆಗೆ 3-6 ಅಡಿ ಜಾಗವನ್ನಾದರೂ ಕೊಡಲಿ.

ಶ್ರೀ ಎಸ್. ಬಂಗಾರಪ್ಪ:- ಇಲ್ಲದಿದ್ದರೆ ಎಲ್ಲಿಗೆ ಹೋಗಬೇಕು?

ಶ್ರೀ ವಾಟಾಳ್ ನಾಗರಾಜ್:- ನಿಜ, ನಾನು ಒಪ್ಪುತ್ತೇನೆ. ಬಹುತೇಕ ಹಳ್ಳಿಗಳಲ್ಲಿ ಈ ಕೊರತೆ ಇದೆ. ಈ ದ್ವಂದ್ವ ಇದೆ. ಈ ಸಭೆಗಳಲ್ಲಿ ನಾನು ಅನೇಕ ಸಾರಿ ಹೇಳಿದ್ದೇನೆ. ಆದರೆ ಇದನ್ನಾದರೂ ಬಹು ಬೇಗ ಮಾಡಲಿ, ಇದು ಹಾಸ್ಯ ಅಲ್ಲ ಅಥವಾ ಮಾರ್ಮಿಕವೂ ಅಲ್ಲ. ಇದನ್ನು ವ್ಯವಸ್ಥಿತವಾಗಿ ಬೇಗ ಮಾಡಬೇಕು ಎಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಮಾತನಾಡಲು ಇಷ್ಟು ಹೊತ್ತು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಳ):- ಸನ್ಮಾನ್ಯ ಅಧ್ಯಕ್ಷರೇ, ಜಂಟಿ ಅಧಿವೇಶದಲ್ಲಿ ರಾಜ್ಯಪಾಲರು ಮಾಡಿದ ಭಾಷಣಕ್ಕಾಗಿ ಶ್ರೀಯುತ ಕೋಳಿವಾಡರವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಅವಕ್ಕೆ ಬೆಂಬಲಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ರಾಜ್ಯಪಾಲರು ಮಾಡಿರತಕ್ಕಂಥ ಭಾಷಣ ಅದು ಸರ್ಕಾರ ಮಾಡತಕ್ಕಂಥ ಕಾರ್ಯಕ್ರಮಗಳು ರೂಪುರೇಖೆಗಳು ಒಳಗೊಂಡಂಥ ಒಂದು ಭಾಷಣ. ಸರ್ಕಾರ ಒಂದು ವರ್ಷದಲ್ಲಿ ಏನು ಮಾಡಿದೆ, ಮುಂದೆ ಮಾಡುವಂಥ ಕಾರ್ಯಗಳು ಏನು, ಹಿಂದೆ ಏನು ಮಾಡಿದೆ ಎನ್ನತಕ್ಕಂಥ ಸೂಚನೆಗಳು ಇದರಲ್ಲಿ ಇವೆ. ನನಗೆ ಬಹಳ ಆಶ್ಚರ್ಯ ಆಗುತ್ತಿದೆ. ನಿನ್ನೆಯಿಂದ ನಾನು ಎಡಬಿಡದೆ ಬೆಳಿಗ್ಗೆಯಿಂದ ಸಂಜೆವರೆಗೆ ಎಲ್ಲಾ ಭಾಷಣಗಳನ್ನು ಕೇಳಿದ್ದೇನೆ. ಸರ್ಕಾರ ಘೋಷಣೆ ಮಾಡಿದ ಅಕ್ಷಯ, ಆಶ್ರಯ, ಆರಾಧನಾ, ಶುಶ್ರೂಷ ಮತ್ತು ವಿಶ್ವ-ಈ ಕಾರ್ಯಕ್ರಮಗಳು ಬಗ್ಗೆ ಬಹಳವಾಗಿ ಟೀಕೆ ಟಿಪ್ಪಣೆಗಳು ಬಂತು. ಈ ಸರ್ಕಾರ ಇಂತಹ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಬೇಕು ಎಂದು ಆರಂಭ ಮಾಡಿದೆ. ಆರಂಭವಾಗಿ 2 ವರ್ಷಗಳು ನೋಡಿದ ಮೇಲೆ ಅದರ ಬಗ್ಗೆ ಏನಾದರೂ ಟೀಕೆ ಟಿಪ್ಪಣಿ ಮಾಡಿದರೆ ಅರ್ಥವುಂಟು. ಪ್ರಾರಂಭಮಾಡಿ 6 ತಿಂಗಳಾಗಿಲ್ಲದಿದ್ದರೂ ಸಹ, ಈ ರೀತಿ ಟೀಕೆ ಮಾಡುವುದು ಸರಿಯಲ್ಲ. ಆದ್ದರಿಂದ ಆರಂಭದಲ್ಲೇ ಟೀಕೆ ಮಾಡಿರುವಂಥಾದ್ದು ಬಹಳ ಆಶ್ಚರ್ಯ. ಇನ್ನು ಶುಶ್ರೂಷ ಬಗ್ಗೆ ಬೋಗಸ್ ಎಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಜಿಲ್ಲೆಯಲ್ಲಿ ನನ್ನ 6 ಮಂಡಳ ಕ್ಷೇತ್ರಗಳ ಸಭೆಗಳಲ್ಲಿ ಭಾಗವಹಿಸಿದ್ದೇನೆ. ಪ್ರತಿಯೊಂದು ಬಾರಿಯೂ 200-300 ಜನ ಬಂದಿದ್ದರು. ಅವರ ತಪಾಸಣೆ ಮಾಡಿದ್ದಾರೆ. ಏನು ಎಂಬುವನ್ನು ಹೇಳಿದ್ದಾರೆ. ಏನೂ ಇಲ್ಲದೆ ಇದ್ದವರಿಗೆ ಸರ್ಕಾರಿ ಆಸ್ಪತ್ರೆಗಳಿಗೆ ಹೋಗಲು ಚೀಟಿ ಕೊಟ್ಟಂತಹ ವ್ಯವಸ್ಥೆ ಮಾಡಿರುವುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಇದು ಆರಂಭ ಆರಂಭದಲ್ಲೇ ಕಲ್ಲು ಹಾಕತಕ್ಕಂಥ ಕೆಲಸ ಮಾಡುವುದು ಸರಿಯಲ್ಲ, ಒಳ್ಳೊಳ್ಳೆಯ ಕೆಲಸಗಳನ್ನು ಮಾಡಬೇಕೆಂದು ಸರ್ಕಾರ ಅಭಿಪ್ರಾಯಪಟ್ಟಿರುವಾಗ ಅದು ಏನಾಗಿದೆ ಎಂದು ಆರು ತಿಂಗಳಲ್ಲಿ ಆಲೋಚನೆ ಮಾಡುವುದಲ್ಲ, ಒಂದು ವರ್ಷ, ಎರಡು ವರ್ಷ ನೋಡಿ ಅದು ಚೆನ್ನಾಗಿ ಆಗದಿದ್ದರೆ ಆಗ ಟೀಕೆ ಮಾಡುವುದರಲ್ಲಿ ಅರ್ಥವುಂಟು. ನೀವು ಏನು ಮಾಡಿದರೂ ನಾವು ಟೀಕೆಯನ್ನೇ ಮಾಡುವುದು ಎಂಬ ಅಭಿಪ್ರಾಯವಿದ್ದರೆ, ಅದು ಸರಿಯಲ್ಲ. ಹಾಗಿದ್ದರೆ ನಮ್ಮ ಒಳ್ಳೆಯ ಕಾರ್ಯಕ್ರಮಗಳನ್ನು ಸರಿಯಾಗಿ ಅರ್ಥಮಾಡಿ ಕೊಳ್ಳುವಂತೆ ನಾವು ನಿಮಗೆ ತಿಳಿಸಬೇಕಾಗಿದೆ.

ಇವತ್ತು ನಮ್ಮ ಮಿತ್ರರೊಬ್ಬರು ಮಾತನಾಡುತ್ತಾ, ಈ ಪಂಚಭೂತಗಳು ಎಂದು ಹೇಳಿದರು. ಈ 5 ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಆರೋಗ್ಯ ಮಂತ್ರಿಗಳು, ಸಣ್ಣ ಕೈಗಾರಿಕಾ ಮಂತ್ರಿಗಳು, ಆರಾಧನಾ ಮಂತ್ರಿಗಳು, ಅಕ್ಷಯ ಮಂತ್ರಿಗಳು, ನಗರಾಭಿವೃದ್ಧಿ ಹಾಗೂ ವಸತಿ ಮಂತ್ರಿಗಳು ಈ ಕಾರ್ಯಕ್ರಮದಲ್ಲಿ ತೊಡಗಿದ್ದಾರೆ. ಈ ಕಾರ್ಯಕ್ರಮಗಳು ಜಯಪ್ರದವಾಗಿ 2ವರ್ಷಗಳಲ್ಲಿ ಕಂಡರೆ ಇದೇ ಮಿತ್ರರು ಪಂಚಭೂತಗಳು ಅಲ್ಲ ಪಂಚರತ್ನಗಳು ಎಂದು ಹೇಳತಕ್ಕ ಕಾಲ ಬರಬಹುದು ಎಂದು ನನ್ನ ಆಶಯ. ಏಕೆಂದರೆ ಇನ್ನೂ ಕೆಲಸಕ್ಕೆ ತೊಡಗಲಿಲ್ಲ, ಕೆಲಸ ಪ್ರಾರಂಭ ಮಾಡಲಿಲ್ಲ, ಮಾಡುವಾಗಲೆ ಛೂ ಬಿಡುವುದು ಸರಿಯಲ್ಲ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್:- ಯಾವ ರತ್ನಗಳು?

ಶ್ರೀ ಬಿ.ಎಂ. ಇದಿನಬ್ಬ:- ಪಂಚ ರತ್ನಗಳು. ಅವುಗಳಲ್ಲಿ, ವಜ್ರ, ವೈಢೂರ್ಯ, ಮಾಣಿಕ್ಯ ಎಲ್ಲಾ ಬರುತ್ತವೆ. ಆದ್ದರಿಂದ ಯಾವುದಕ್ಕಾದರೂ ಸ್ವಲ್ಪ ಅವಕಾಶ ಕೊಡಬೇಕು. ಈ ವಿಶ್ವ ಕಾರ್ಯಕ್ರಮ ಇದೆ. ವಿಶ್ವ ಕಾರ್ಯಕ್ರಮದಲ್ಲಿ ತೊಡಗಿದ್ದಾರೆ. ಮೊದಲು ಮಾರ್ಕೆಟ್ ಇರಲಿಲ್ಲ, ಮಾರ್ಕೆಟ್ ಕೂಡ ಅವರೇ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಮೊದಲು ಅನೇಕರು ಗುಡಿ ಕೈಗಾರಿಕೆಗಳನ್ನು ಮಾಡಿದರು, ಕೆಲಸ ಮಾಡಿದರೂ ಅದನ್ನು ತೆಗೆದುಕೊಳ್ಳುವ ಜನ ಇರಲಿಲ್ಲ, ಈಗ ಮಾರ್ಕೆಟ್ ಮಾಡತಕ್ಕಂಥ ವ್ಯವಸ್ಥೆ ಇರುವುದರಿಂದ ಅನೇಕರು ಮುಂದೆ ಬಂದಿದ್ದಾರೆ. ಇದು ಒಳ್ಳೆಯ ಅಭಿಪ್ರಾಯ. "ಆಶ್ರಯ" ಯೋಜನೆಯಲ್ಲಂತೂ ಎಷ್ಟೋ ಜನ ಮರದ ಬುಡದಲ್ಲಿ ಮಲಗತಕ್ಕವರಿಗೆ, ಯಾರ ಯಾರ ಅಂಗಳದಲ್ಲಿ ಮಲಗತಕ್ಕಂಥವರಿಗೆ, ಜಾಗ ಇಲ್ಲದಂಥವರಿಗೆ ಇವತ್ತು ಮೂರು ಮೂರುವರೆ ಸೆಂಟ್ಸ್

ಜಾಗ ಕೊಡತಕ್ಕಂಥ ವ್ಯವಸ್ಥೆಯಾಗಿ ಹಕ್ಕುಪತ್ರಗಳನ್ನು ಕೊಟ್ಟಾಗಿದೆ. ಸರ್ಕಾರಿ ಜಾಗಗಳಲ್ಲಿ ಕೊಟ್ಟಿದೆ. ಇನ್ನು ಇರತಕ್ಕಂಥ ಜಾಗಗಳನ್ನು ಸರ್ಕಾರದವರು ತೆಗೆದುಕೊಂಡು ಕೊಡಬೇಕು. ಈ "ಆಶ್ರಯ" ಯೋಜನೆಯನ್ನು ಎದುರು ಪಕ್ಷಗಳವರು ಒಳ್ಳೆಯದೆಂದು ಹೇಳಿದ್ದಾರೆ. ಇನ್ನು ಅವರಿಗೆ ಮನೆ ಕಟ್ಟಿ ಕೊಡತಕ್ಕಂಥ ವ್ಯವಸ್ಥೆಯನ್ನು ಕೂಡ ಮಾಡತಕ್ಕ ಕಾರ್ಯಕ್ರಮ ಇದೆ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಬಡವರಿಗೆ ಬಹಳ ಉಪಕಾರ ಆಗುತ್ತದೆ ಎಂದು ನನ್ನ ಅಭಿಪ್ರಾಯ. ಆದ್ದರಿಂದ ಆರಂಭದಲ್ಲೇ ಯಾವುದೇ ಒಂದು ಕಾರ್ಯಕ್ರಮವನ್ನು ನಾವು ಬೋಗಸ್ ಎಂದು ಹೇಳುವುದಾಗಲಿ, ಅದನ್ನು ಲೇವಡಿ ಮಾಡುವುದಾಗಲಿ ಸರಿಯಲ್ಲ. ಒಂದು ಸ್ವಲ್ಪ ಕಾಲ ಕಾದು ನೋಡಿ ಮತ್ತೆ ಆಕ್ಷೇಪಣೆ ಮಾಡಿದರೆ ಅದಕ್ಕೆ ಬೆಲೆ ಬರುತ್ತದೆ, ಒಂದು ಶಕ್ತಿ ಬರುತ್ತದೆ, ಒಂದು ರೀತಿಯ ತೂಕ ಬರುತ್ತದೆ. ಇಲ್ಲವಾದರೆ ವಿರೋಧಕ್ಕೆ ವಿರೋಧ ಮಾಡಬೇಕು, ಟೀಕೆಗೆ ಟೀಕೆ ಮಾಡಬೇಕು ಎನ್ನತಕ್ಕಂಥ ಒಂದೇ ವ್ಯವಸ್ಥೆ ಉಳಿಯುತ್ತದೆಂದು ನನ್ನ ಅಭಿಪ್ರಾಯ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಕೃಷಿಯ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಕೃಷಿಯನ್ನು ಮುಂದೆ ತರತಕ್ಕಂಥ ವಿಚಾರದಲ್ಲಿ ಒಳ್ಳೆಯ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅರಣ್ಯ ವಲಯಗಳ ಅಭಿವೃದ್ಧಿಯ ನೆಲೆಗಟ್ಟನ್ನು ಇನ್ನೂ ಹೆಚ್ಚು ಬಲ ಪಡಿಸಲು ನನ್ನ ಸರ್ಕಾರ ಉದ್ದೇಶಿಸಿದೆ ಎಂದು ಅವರು ಹೇಳಿದ್ದಾರೆ. ಅರಣ್ಯವನ್ನು ಇನ್ನೂ ಒಳ್ಳೆಯ ರೀತಿಯಲ್ಲಿ ಕಾಪಾಡುವಂಥದ್ದು, ಅದೇ ರೀತಿಯಲ್ಲಿ ಇವತ್ತು ಕೃಷಿ ಇಲ್ಲದಿದ್ದರೆ, ರೈತರು ಇಲ್ಲದಿದ್ದರೆ, ನಿಜವಾಗಿಯೂ ನಮ್ಮ ನಾಡಾಗಲೀ, ನಮ್ಮ ದೇಶವಾಗಲಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಕೃಷಿಯ ಬಗ್ಗೆ, ಕೃಷಿ ಕೆಲಸ ಮಾಡತಕ್ಕಂಥ ಜನರ ಬಗ್ಗೆ, ತೋಟಗಾರಿಕೆ ಮಾಡತಕ್ಕಂಥ ಜನರ ಬಗ್ಗೆ ಹೆಚ್ಚಿನ ಕಳಕಳಿಯನ್ನು ರಾಜ್ಯಪಾಲರ ಭಾಷಣದಲ್ಲಿ ತೋರಿಸಿದ್ದಾರೆ. ಆದ್ದರಿಂದ ನಾನು ಹೇಳುತ್ತೇನೆ, ಇವತ್ತು ಕೃಷಿಕರ ಬಗ್ಗೆ ನಾವು ಅಸಡ್ಡೆ ಮಾಡುವುದಕ್ಕೆ ಸಾಧ್ಯವಿಲ್ಲ, ಕೃಷಿಕರ ಬಗ್ಗೆ ಅಸಡ್ಡೆ ಮಾಡಬಾರದು ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತು ಅನೇಕರು ಕೃಷಿಕರು ಬೆಳೆದಂಥ ಬೆಳೆಗಳನ್ನು ಬಹಳ ಸುಲಭ ರೀತಿಯಲ್ಲಿ ಪಡೆಯಬಹುದು, ಕೃಷಿಕರಿಗೆ ಹೆಚ್ಚಿನ ಅನ್ಯಾಯ ಮಾಡುವುಂಥವರು ಇರಬಹುದು. ಅಧಿಕಾರಿಗಳಲ್ಲಿ ಕೂಡ ಕೃಷಿ ಇಲಾಖೆಯವರು ಅಥವಾ ಕೃಷಿ ಕೆಲಸ ಮಾಡತಕ್ಕಂಥ ಜನರಿಗೆ ಉಪಕಾರ ಮಾಡದೆ ಮರೆಯತಕ್ಕವರು ಇರಬಹುದು. ದೊಡ್ಡ ದೊಡ್ಡ ದಲ್ಲಾಳಿಗಳು ಇರಬಹುದು. ಆದರೆ, ರೈತರನ್ನು ಮರೆಯಲಿಕ್ಕೆ ಸಾಧ್ಯವಿಲ್ಲ. ಅವರು ಗೊಬ್ಬರದ ಮೇಲೆ ನಡೆಯತಕ್ಕವರು, ಗೊಬ್ಬರದ ಮೇಲೆ ಅವರು ಇರತಕ್ಕಂಥವರು. ಗೊಬ್ಬರ ಹೊತ್ತು ಅಲ್ಲಿ ಬಿತ್ತು ಆ ರೀತಿಯಲ್ಲಿ ಮಾಡಿ ಬೆಳೆದು ನಮಗೆ ನಾಡಿಗೆ, ಜನರಿಗೆ, ಊರಿಗೆ, ದೇಶಕ್ಕೆ ಕೊಡತಕ್ಕಂಥ ಅವರ ಬಗ್ಗೆ ಕಳಕಳಿಯಿಂದ ನಾವು ಯಾವಾಗಲೂ ಯೋಚಿಸಬೇಕು. ಅದು ರಾಜ್ಯಪಾಲರ ಭಾಷಣದಲ್ಲಿ ಇದೆ. ಕುವೆಂಪುರವರು ಒಂದು ಕಡೆಯಲ್ಲಿ ರೈತರ ಬಗ್ಗೆ ಒಂದು ಕವನವನ್ನು ಹೇಳಿದ್ದಾರೆ. "ನೀವು ಹೆಚ್ಚು ಮೆರೆಯುತ್ತಿದ್ದೀರಿ ದಲ್ಲಾಳಿಗಳು ಮೆರೆಯುತ್ತಿದ್ದೀರಿ, ಅಧಿಕಾರಿಗಳು ಮೆರೆಯುತ್ತಿದ್ದೀರಿ ಆದರೆ ಜಾಗೃತಿ ಇಟ್ಟುಕೊಳ್ಳಿ. ನೀವು ಬಹಳ ಗಂಧ ಹಚ್ಚಿಕೊಳ್ಳಬಹುದು, ಬಹಳ ಕಸ್ತೂರಿ ಹಚ್ಚಿಕೊಳ್ಳಬಹುದು, ಸೆಂಟು ಹಚ್ಚಿಕೊಳ್ಳಬಹುದು, ಎಷ್ಟು ಕಾಲ ಹಚ್ಚಿಕೊಳ್ಳುತ್ತೀರಿ.... ಎಂದು ಕುವೆಂಪುರವರು ಒಂದು ಕಡೆ ಹೇಳಿದ್ದಾರೆ.

"ಹಚ್ಚಿಕೊಳ್ಳಿರೋ ಹಚ್ಚಿಕೊಳ್ಳಿ, ಹಚ್ಚಿಕೊಳ್ಳಿರೋ ಹಚ್ಚಿಕೊಳ್ಳಿ, ಎಷ್ಟು ದಿನ ಹಚ್ಚಿಕೊಳ್ಳುವಿರಿ ಗಂಧ ಲೇಪನ ಕಸ್ತೂರಿ ಗಂಧ ಲೇಪನ ಈ ರೀತಿಯಲ್ಲಿ ನೀವು ಎಷ್ಟು ದಿನ ಹಚ್ಚಿಕೊಳ್ಳುವಿರಿ ಇದನ್ನು ನಾ ನೋಳ್ಪೆ."

ಎಂದು ಕವಿ ಹೇಳುತ್ತಾರೆ. ನೀವು ಬಹಳ ಅಹಂಕಾರದಲ್ಲಿ ಇರಬಹುದು, ಕೃಷಿಕರನ್ನು ಗಮನ ಮಾಡದೇ ಇರಬಹುದು. ಅಧಿಕಾರಿಗಳಾಗಲೀ, ದಲ್ಲಾಳಿಗಳಾಗಲೀ, ಯಾರೇ ಆಗಲಿ ಇದು ಸರಿಯಲ್ಲ.

"ಹಚ್ಚಿಕೊಳ್ಳಿರೋ ಹಚ್ಚಿಕೊಳ್ಳಿ ಎಷ್ಟು ದಿನ ಗಂಧ ಲೇಪನ, ಪುನುಗು, ಜವಾಜಿ ಕಸ್ತೂರಿ ಹಚ್ಚಿಕೊಳ್ಳುವಿರಿ ಇದನ್ನು ನಾನು ನೋಳ್ಪೆ. ಒಂದು ದಿನ ಬರಬಹುದು, ಒಂದು ದಿನ ಬರಬಹುದು ಅಂದು ಗೊಬ್ಬರದ ಬುಟ್ಟಿಯನ್ನು ತಲೆಯಲ್ಲಿ ಹೊತ್ತು ಅದರ ರಸ ಜಿನುಗಿದಾಗ ಅದೇ ಗಂಧ ಲೇಪನ, ಅದೇ ಪುನುಗು ಲೇಪನ, ಅದೇ ಪುನಗು, ಜವಾಜಿ, ಕಸ್ತೂರಿ ಅಂಥ ತಿಳಿದುಕೊಳ್ಳಿ."

ಎಂದು ಅವರು ಒಂದು ರೀತಿಯ ಸವಾಲನ್ನೆ ಹಾಕಿದ್ದಾರೆ. ಒಂದು ದಿನ ಬರುತ್ತದೆ, ಆ ದಿನ ಗೊಬ್ಬರದ ಬುಟ್ಟಿಯನ್ನು ಹೊತ್ತಾಗ ಅದರಿಂದ ಜಿನುಗುವಂಥ ರಸ ಅದೇ ಜವಾಜಿ ಆಗುತ್ತದೆ, ಕಸ್ತೂರಿ ಆಗುತ್ತದೆ, ಗಂಧ ಲೇಪನ ಆಗುತ್ತದೆ ಎಂದು ಕವಿಗಳು ಹೇಳಿದ್ದಾರೆ. ಆದ್ದರಿಂದ ಕೃಷಿಕರ ಬಗ್ಗೆ ಗಮನ ಇಡಬೇಕು ಎನ್ನುವ ಭಾವನೆ ಏನಿದೆ ಅದು ಬಹಳ ಪ್ರಾಮುಖ್ಯವಾದುದು. ಅದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತೋರಿಸಿದ್ದಾರೆ. ಸರ್ಕಾರ ಕೂಡ ಆ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಕೂಡ ನಾವು ಬಹಳವಾಗಿ ನೋಡತಕ್ಕಂಥ ವಿಷಯ;

ಇನ್ನು ರೇಷ್ಮೆ ಕಾಲೇಜನ್ನು ಕೋಲಾರದಲ್ಲಿ, ಅರಣ್ಯ ಕಾಲೇಜನ್ನು ಕೊಡಗಿನಲ್ಲಿ, ತೋಟಗಾರಿಕೆ ಕಾಲೇಜನ್ನು ಮೂಡಿಗೆರೆಯಲ್ಲಿ, ಕೃಷಿ ಕಾಲೇಜನ್ನು ಮಂಡ್ಯದಲ್ಲಿ ಮಾಡತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ಇಟ್ಟುಕೊಂಡಿದೆ. ಇದರಿಂದ ಎಷ್ಟೋ ವಿದ್ಯಾರ್ಥಿಗಳಿಗೆ ಅನೇಕ ರೀತಿಯಲ್ಲಿ ಉಪಕಾರ ಆಗುತ್ತದೆ. ಅರಣ್ಯ ಕಾಲೇಜಾಗಲಿ, ಕೃಷಿ ಕಾಲೇಜಾಗಲಿ, ತೋಟಗಾರಿಗೆ ಕಾಲೇಜಾಗಲಿ, ಅನೇಕ ವಿದ್ಯಾರ್ಥಿಗಳು ಕಲಿತು ಮುಂದೆ ಬರತಕ್ಕಂಥ ವ್ಯವಸ್ಥೆಯಾಗುತ್ತದೆ.

ಅದನ್ನೂ ಕೂಡ ಸರ್ಕಾರ ತೆಗೆದುಕೊಂಡಿರುವುದನ್ನು ನಾವು ಈ ಸಂದರ್ಭದಲ್ಲಿ ನೆನೆಸಬೇಕಾದ್ದು ಬಹಳ ಪ್ರಾಮುಖ್ಯ. ಇನ್ನು ರಸ್ತೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನಿಜ ವಾಹನಗಳನ್ನು ಹೆಚ್ಚು ಮಾಡಿದರೆ ಸಾಲದು, ಅಲ್ಲಿಯ ರಸ್ತೆಗಳು ಕೂಡ ಒಳ್ಳೆಯವಾಗಬೇಕು. ಇವತ್ತೇನಾಗಿದೆ ಎಂದರೆ, ಜಿಲ್ಲಾಪರಿಷತ್ತಿನ ಕೈಯಲ್ಲಿ ಎಲ್ಲ ರಸ್ತೆಗಳು ಇದ್ದುದರಿಂದ ನಾದುರಸ್ತಿ ಸ್ಥಿತಿಯಲ್ಲಿವೆ, ಡಾಂಬರೀಕರಣ ಆಗಲಿಲ್ಲ, ಅಂತಹ ಮಾರ್ಗಗಳಲ್ಲಿ ಹೇಗೆ ವಾಹನಗಳನ್ನು ಓಡಿಸಲಿಕ್ಕೆ ಸಾಧ್ಯ? ಮಾನ್ಯ ಲೋಕೋಪಯೋಗಿ ಸಚಿವರು ಒಂದು ಸಂದರ್ಭದಲ್ಲಿ ಹೇಳಿದ್ದಾರೆ. ಈ ಜಿಲ್ಲಾಪರಿಷತ್ತಿನ ಕೈಯಲ್ಲಿದ್ದು ಹಾಳಾಗಿದ್ದು, ದುರಸ್ತಿಯಾಗದೆ ಡಾಂಬರು ಹಾಕದೆ ಇರುವ ರಸ್ತೆಗಳನ್ನೆಲ್ಲ ನಾವು ಪ್ರತಿ ಕ್ಷೇತ್ರದಲ್ಲೂ 40-50 ಕಿ. ಮೀ. ತೆಗೆದುಕೊಳ್ಳುವ ವ್ಯವಸ್ಥೆ ಮಾಡಿ ಕೂಡಲೇ ರಿಪೇರಿ ಮಾಡಿಸುವ ವ್ಯವಸ್ಥೆ ಮಾಡುತ್ತೇವೆ ಎಂದು ಕೂಡ ಹೇಳಿದ್ದರಿಂದ ವಾಹನಗಳನ್ನು ಹೆಚ್ಚು ಮಾಡಿದಾಗ ರಸ್ತೆ ಕೂಡ ಒಳ್ಳೆಯದಾಗುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ.

ಇನ್ನು ಪಂಚಸೂತ್ರದ ವಿಷಯವನ್ನು ರಾಜ್ಯಪಾಲರು ಹೇಳಿದ್ದಾರೆ. ಅನೇಕರು ಇದನ್ನು ಬಹಳವಾಗಿ ಟೀಕೆ ಮಾಡಿದ್ದಾರೆ. ಈ ಪಂಚಸೂತ್ರದ ಅರ್ಥವೇನೆಂದರೆ ಆಡಳಿತದಲ್ಲಿ ಬಿಗಿ ತರುವುದಕ್ಕೆ ಏನೆಲ್ಲ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಂಡು ಆದಷ್ಟು ಮುತುವರ್ಜಿಯಿಂದ ಮಾಡಿ ಆಡಳಿತವನ್ನು ಶುದ್ಧೀಕರಿಸುವ ಒಳ್ಳೆಯದು ಮಾಡುವ, ಅಭಿವೃದ್ಧಿ ಮಾಡುವ ಕಾರ್ಯಕ್ರಮಗಳಿಗೆ ಅನುಗುಣವಾಗಿ ಮಾಡುವ ಕಾರ್ಯಕ್ರಮ; ಆದರೆ ಈ ಪಂಚಸೂತ್ರವನ್ನು ಅನೇಕರು ಬಹಳ ತಮಾಷೆಯಾಗಿ ಟೀಕೆ ಟಿಪ್ಪಣಿ ಮಾಡಿದ್ದಾರೆ, ಮಾಡಲಿ. ಅವರು ಮಾಡುವುದು ಮಾಡಲಿ. ನಾನು ಹೇಳುವುದೇನೆಂದರೆ, ಈ ರೀತಿ ಆಡಳಿತದಲ್ಲಿ ಬಂದೋಬಸ್ತ್ ಮತ್ತು ಬಿಗಿ ತರುವ ವ್ಯವಸ್ಥೆ ಮಾಡುವುದು ಒಳ್ಳೆಯದು. ನಾನು ಹೇಳುತ್ತೇನೆ, ಪಂಚ ತಂತ್ರಗಳನ್ನು ಉಪಯೋಗಿಸಿ ಪಂಚಸೂತ್ರಗಳನ್ನು ಸರಿಯಾಗಿ ನಾವು ಮಾಡುತ್ತಾ ಹೋದರೆ ಅದು ಜನತೆಗೂ ಒಳ್ಳೆಯದು, ನಮ್ಮ ನಾಡಿಗೂ ಒಳ್ಳೆಯದು ಮಾತ್ರವಲ್ಲ ಜನತೆ ಕೂಡ ಅದನ್ನು ಮೆಚ್ಚುತ್ತದೆ. ಈ ಪಂಚಸೂತ್ರದ ಬಗ್ಗೆ ಯಾರು ಟೀಕೆ ಟಿಪ್ಪಣಿ ಮಾಡಿದ್ದಾರೋ ಒಂದು ದಿವಸ ಈ ಪಂಚತಂತ್ರದ ಪಂಚಸೂತ್ರದಿಂದ ಜನತೆಗೆ ಅದು ಪಂಚಕಜ್ಜಾಯವಾಗಲಿಕ್ಕೂ ಸಾಧ್ಯವಿದೆ ಎಂದು ನನಗೇನೋ ಮನವರಿಕೆಯಾಗುತ್ತಿದೆ. ಯಾವುದು ಮಾಡಬಾರದು ಎಂದು ಹೇಳಿದ್ದಾರೆ? ಆಡಳಿತದಲ್ಲಿ ಬಿಗಿ ಇಲ್ಲ ಅದನ್ನು ಒಳ್ಳೆಯ ರೀತಿಯಲ್ಲಿ ತರಬೇಕೆಂಬ ಒಂದು ಕಾರ್ಯಕ್ರಮ ಇದೆ. ಅದು ಮಾಡಲಿಕ್ಕೆ ಹೊರಟಿದೆ ಅಷ್ಟೆ. ಅದರ ಜೊತೆಗೆ ಮಿತವ್ಯಯ ಕೂಡ ಈ ರಾಜ್ಯದಲ್ಲಿ ಬರಬೇಕು. ಇದನ್ನು ನಾನು ಒಪ್ಪುತ್ತೇನೆ. ಅನೇಕ ಮಿತ್ರರು ಹೇಳಿದಂತೆ, ವಿಭಾಗಾಧಿಕಾರಿಗಳ ವ್ಯವಸ್ಥೆ ಸರಿಯಲ್ಲ ಎಂಬುದನ್ನು ನಾನೂ ಒಪ್ಪುತ್ತೇನೆ. ಅದು ಅನಾವಶ್ಯಕ. ಅಲ್ಲಿ ಎಷ್ಟೋ ಜನ ಕೆಲಸ ಮಾಡುವುದು ಏನೂ ಇಲ್ಲ. ಒಂದೊಂದು ಕುರ್ಚಿಯಲ್ಲಿ ಒಬ್ಬೊಬ್ಬ ಕುಳಿತುಕೊಂಡಿರುತ್ತಾನೆ. ಅವನು ಏನು ಮಾಡುತ್ತಾನೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಅದೇ ರೀತಿ ಅಸಿಸ್ಟೆಂಟ್ ಕಮಿಷನರ್ ಪೋಸ್ಟ್ ಕೂಡ ಬೇಡ ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ, ಒಂದೊಂದು ಆಫೀಸಿಗೆ ನಾವು ಹೋದರೆ ಕುರ್ಚಿಯಲ್ಲಿ ಒಬ್ಬ ಕುಳಿತು ಸುಮ್ಮನೆ ತೂಕಡಿಸುವುದು ನಮಗೆ ಕಾಣುತ್ತಾ ಇದೆ. ಲೆಕ್ಕಕ್ಕಿಂತ ಹೆಚ್ಚು ಅಧಿಕಾರಿಗಳನ್ನು, ಸಿಬ್ಬಂದಿಯನ್ನೂ ನಾವು ನೇಮಕ ಮಾಡಿರುವುದರಿಂದ ಏನಾಗಿದೆ ಎಂದರೆ, ಇಂದು ಖರ್ಚು ಹೆಚ್ಚಾಗಲಿಕ್ಕೆ ಕಾರಣವಾಗಿದೆ. ಈ ರೀತಿ ಖರ್ಚನ್ನು ಕಡಿಮೆ ಮಾಡಬೇಕಾಗಿದೆಯೇ ಹೊರತು ಅಲ್ಲಿಂದಾ ಒಂದು ಕಾಗದ ಇಲ್ಲಿಗೆ ಬಂದು, ನಂತರ ತಹಸೀಲ್ದಾರ್‌ರಿಂದ ಬಂದು, ವಿಲೇಜ್ ಅಕೌಂಟೆಂಟ್‌ರಿಂದ ಬಂದು, ಅಲ್ಲಿಂದ ಎ. ಸಿ. ಯವರಿಗೆ ಬಂದು, ಅಲ್ಲಿಂದ ಡಿ.ಸಿ.ಯವರು, ಅಲ್ಲಿಂದ ವಿಭಾಗಾಧಿಕಾರಿಗಳು– ಹೀಗೆ ಆರೇಳೆಂಟು ತಿಂಗಳು ಕಳೆದುಹೋಗುತ್ತದೆ. ಇದನ್ನು ತಪ್ಪಿಸಿದರೆ ಸರ್ಕಾರಕ್ಕೆ ಹೆಚ್ಚಿನ ಮಿತವ್ಯಯ ಆಗಬಹುದು ಎಂಬ ಸಲಹೆಯನ್ನೂ ಕೂಡ ನಾನು ಕೊಡಲಿಕ್ಕೆ ಅಪೇಕ್ಷೆಪಡುತ್ತೇನೆ. ಇನ್ನು ನನ್ನ ಅಭಿಪ್ರಾಯ. ಅನೇಕರು ಈ ಸರ್ಕಾರಿ ಅಧಿಕಾರಿಗಳ ವೇತನದಲ್ಲಿ 10 ಪರ್ಸೆಂಟ್ ಕಡಿತ ಮಾಡಬೇಕು ಎಂದು ಹೇಳಿದರು. ನನ್ನ ಅನಿಸಿಕೆಯಲ್ಲಿ ಅದು ಸರಿಯಲ್ಲ ಏಕೆಂದರೆ, ಸರ್ಕಾರಿ ಅಧಿಕಾರಿಗಳೂ ಕೂಡ ಇವತ್ತಿನ ಬೆಲೆಯಲ್ಲಿ, ಈ ಬೆಲೆಯೇರಿಕೆಯ ಕಾಲದಲ್ಲಿ ಜೀವನ ನಿರ್ವಹಿಸುವುದು ಕಷ್ಟವಾಗಿದೆ. ಬೆಲೆ ಏರಿಕೆ ಕೇಂದ್ರದಿಂದ ಬಂದಿರುವ ವ್ಯವಸ್ಥೆ. ಈಗ ಸರ್ಕಾರಿ ನೌಕರರ ಸಂಬಳದಲ್ಲಿ ಕಡಿತ ಮಾಡಿದರೆ ಅವರಿಗೆ ಎಷ್ಟು ನೋವಾಗಬಹುದು.

ಒಂದು ವೇಳೆ ಬೆಲೆಗಳು ಇಳಿದರೆ ಕಡಿತ ಮಾಡಬಹುದು ಎಂದು ಹೇಳಿದರೆ ಆಗ ಅದಕ್ಕೊಂದು ಅರ್ಥ ಬರಬಹುದೆಂಬುದು ನನ್ನ ಅಭಿಪ್ರಾಯ. ಮಧ್ಯಮವರ್ಗದಲ್ಲಿರುವವರ ಕಷ್ಟ ನೋಡಿದರೆ ಅವರಿಗೆ ಜೀವನ ತೆಗೆಯುವುದೇ ಕಷ್ಟ. ಆದ್ದರಿಂದ ಈಗಿನ ಬೆಲೆಯೇರಿಕೆ ಪರಿಸ್ಥಿತಿಯಲ್ಲಿ ಮಧ್ಯಮವರ್ಗದ ಸರ್ಕಾರಿ ನೌಕರರ ವೇತನವನ್ನು ಇನ್ನೂ ಕಡಿಮೆ ಮಾಡಿದರೆ ಅದು ಅಷ್ಟು ಸಮಂಜಸವಲ್ಲ ಎಂಬುದು ನನ್ನ ಅಭಿಪ್ರಾಯ. ಒಬ್ಬೊಬ್ಬರ ಅಭಿಪ್ರಾಯ ಒಂದೊಂದು ರೀತಿ ಇರುತ್ತದೆ. ಏಕೆಂದರೆ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಎಂದ ಹಾಗೆ ನಾವು ಅವರ ಮೇಲೆ ಮಾಡಬಾರದು. ಒಂದು ವೇಳೆ ಬೆಲೆಗಳು ಇಳಿದರೆ ನೀವು ಸ್ಯಾಕ್ರಿಫೈಸ್ ಮಾಡಿ ನೀರಾವರಿಗೆ ಈ ಹಣವನ್ನು ಕೊಡಿ ಎಂದು ಕೇಳಬಹುದು. ನಾನು ಹೇಳುತ್ತೇನೆ. ಈ ವಿಭಾಗಾಧಿಕಾರಿಗಳ, ಎ.ಸಿ.ಗಳ ಆಫೀಸನ್ನು ರದ್ದು ಮಾಡುವಂತಹ ವ್ಯವಸ್ಥೆ ಬಂದರೆ ಅಲ್ಲಿ ಬೇಕಾದಷ್ಟು ಹಣ ಸಿಕ್ಕಿ ಆ ಮೂಲಕ ಬೇಕಾದಷ್ಟು ಮಿತವ್ಯಯ ಆಗುತ್ತದೆ ಎಂದು ನನ್ನ ಅನಿಸಿಕೆ.

11.25 ಎ.ಎಂ.

ಇವತ್ತು ನಾನು ಕನ್ನಡದ ಬಗ್ಗೆ ಹೇಳುವಂಥದ್ದು ಏನೆಂದರೆ, ಕನ್ನಡದ ಏಳಿಗೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಇಲ್ಲದಿದ್ದರೂ ಕೂಡಾ ಅದು ಬಹಳ ಪ್ರಾಮುಖ್ಯ. ಕರ್ನಾಟಕ ಎಂದು ಯಾವಾಗ ಆಗಿದೆಯೋ ಕನ್ನಡ ಭಾಷೆಯ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ಕನ್ನಡದ ಅಭಿವೃದ್ಧಿ ಬಗ್ಗೆ ಬಳಕೆಯಲ್ಲಿ ಕನ್ನಡ ಬರತಕ್ಕಂಥ ವ್ಯವಸ್ಥೆಯಲ್ಲಿ ನಾವು ಅತ್ಯಂತ ಅಗ್ರಮಾನ್ಯ ವ್ಯವಸ್ಥೆಗಳನ್ನು ಮಾಡಬೇಕಾಗಿದೆ. ಏಕೆಂದರೆ, ಇವತ್ತು ಕೇರಳಕ್ಕೆ ಹೋದರೆ ಅಲ್ಲಿ ಬಿ.ಕಾಂ., ಎಂ.ಎ., ಎಂ.ಕಾಂ., ತೇರ್ಗಡೆಯಾದಂಥ ಮನುಷ್ಯ ಕೂಡಾ ಕೈಯಲ್ಲಿ ಹಿಡಿರುವಂಥದ್ದು ಮಲೆಯಾಳ ಪತ್ರಿಕೆ ಮಾತ್ರ. ಅವನು ಮಾತನಾಡತಕ್ಕಂಥದ್ದು ಮಲೆಯಾಳ ಭಾಷೆ ಮಾತ್ರ. ಬೇರೆ ಯಾವ ಭಾಷೆಯ ಒಂದೇ ಒಂದು ಶಬ್ದವನ್ನೂ ಅಲ್ಲಿ ಕೇಳುವುದಕ್ಕೆ ಸಾಧ್ಯವಿಲ್ಲ, ನಾನು ಇಡೀ ಕೇರಳದಲ್ಲಿ ಸುತ್ತಾಡಿದ್ದೇನೆ. ಅಲ್ಲಿ ಅಸೆಂಬ್ಲಿಯಲ್ಲಿ ಇದ್ದ 145 ಜನರಲ್ಲಿ ಹಿಂದೆ ಮಹಾಬಲ ಭಂಡಾರಿ ಎನ್ನತಕ್ಕಂಥವರೊಬ್ಬರು ಮಂಜೇಶ್ವರದಿಂದ ಹೋಗಿದ್ದರು. ಅವರೊಬ್ಬರು ಮಾತ್ರ ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದರು. ಬಾಕಿ ಎಲ್ಲರೂ ಕೂಡ, ಸ್ಪೀಕರ್‌ರವರು ಕೂಡ ಮಲೆಯಾಳದಲ್ಲಿ ಮಾತನಾಡತಕ್ಕಂಥ ವ್ಯವಸ್ಥೆ ಇದೆ ಎಂದು ಹೇಳುವಾಗ ಈ ಭಾಷಾವಾರು ರಾಜ್ಯಗಳಾದಂಥ ಫಲವನ್ನು ಕೇರಳ, ತಮಿಳುನಾಡು ಒಳ್ಳೆಯ ರೀತಿಯಲ್ಲಿ ಅನುಭವಿಸಿದೆ. ಕರ್ನಾಟಕದಲ್ಲಿ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಒಂದು ದಾಕ್ಷಿಣ್ಯ, ಒಂದು ಮುಲಾಜು ಅಥವಾ ನಮ್ಮ ದೊಡ್ಡಸ್ತಿಕೆಯೋ ಏನೋ ಎಂದು ನನಗೆ ಗೊತ್ತಿಲ್ಲ. ನಾವು ಕನ್ನಡ ಪತ್ರಿಕೆಯನ್ನು ಓದುವುದೇ ಸರಿಯಲ್ಲ ಎನ್ನತಕ್ಕಂಥದ್ದು ಕೆಲವರ ಅಭಿಪ್ರಾಯ. ಕೆಲವರು ಇಂಗ್ಲೀಷ್ ಪತ್ರಿಕೆಯನ್ನು ಹಿಡಿದುಕೊಂಡರೆ ದೊಡ್ಡವರು ಎಂದು ಹೇಳತಕ್ಕಂಥ ಪರಿಸ್ಥಿತಿ ಇದೆ. ಈ ರೀತಿಯೆಲ್ಲಾ ಇರುತ್ತದೆ. ಈ ರೀತಿಯಾದರೆ ಕನ್ನಡ ಬೆಳೆಯುವುದೂ ಕಷ್ಟ, ಕನ್ನಡ ಸಾಹಿತ್ಯ ಬೆಳೆಯುವುದೂ ಕಷ್ಟ. ಅದಕ್ಕಾಗಿ ಸರ್ಕಾರ ಇವತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂದು ಒಂದು ವ್ಯವಸ್ಥೆಯನ್ನು ಮಾಡಿದೆ, ಅದು ಮುಂದೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿ ಈ ಕನ್ನಡದ ಅಭ್ಯುದಯದ ಬಗ್ಗೆ ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾದೀತು ಎಂದು ನನ್ನ ಅಭಿಪ್ರಾಯ. ಏಕೆಂದರೆ, ರಾಜ್ಯದ ಆಡಳಿತದಲ್ಲಿ ಕನ್ನಡ ಬರಬೇಕು ಎಂದು ಎಷ್ಟೋ ವರ್ಷಗಳಿಂದ ಹೇಳುತ್ತಿದ್ದೇವೆ, ಏಳೆಂಟು ವರ್ಷಗಳಿಂದಲೂ ಕೂಡ ಹೇಳುತ್ತಿದ್ದೇವೆ. ಇದೇ ನಮ್ಮ ವಿಧಾನಮಂಡಲದಲ್ಲಿಯೂ ಕೂಡ ಹೇಳಿದ್ದೇವೆ. ಆದರೆ ಇನ್ನೂ ಕಾರ್ಯರೂಪಕ್ಕೆ ತರಲಿಲ್ಲ, ನಾನು ಹೇಳುತ್ತಿದ್ದೇನೆ, ನಮ್ಮ ಅಸೆಂಬ್ಲಿಯಲ್ಲೇ ಬರಲಿಲ್ಲ. ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ಹಜ್ ಸಮಿತಿ ಎಂದು ನಮ್ಮಲ್ಲಿ ಒಂದುಂಟು. ಅವರಿಂದ ಬರತಕ್ಕಂಥ ಎಲ್ಲಾ ಕಾಗದ ಪತ್ರಗಳು ಇಂಗ್ಲೀಷ್‌ನಲ್ಲಿ ಬರುತ್ತದೆಯೇ ಹೊರತು ಕನ್ನಡದಲ್ಲಿ ಬರುವುದೇ ಇಲ್ಲ. ಒಂದೇ ಒಂದು ಪತ್ರ ಕೂಡ ಕನ್ನಡದಲ್ಲಿ ಇಷ್ಟರವರೆಗೂ ಬರಲಿಲ್ಲ. ಅದು ಏತಕ್ಕೆ ಎಂದು ನನಗೆ ಅರ್ಥವಾಗುವುದಿಲ್ಲ. ಅಂದರೆ ಯಾರಾದರೂ ಅದನ್ನು ಮಾಡಿಕೊಂಡು ಹೋದರೆ ಮಾತ್ರ ಅದು ಕಾರ್ಯರೂಪಕ್ಕೆ ಬರುತ್ತದೆ. ಆದುದರಿಂದ ಕನ್ನಡದಲ್ಲೇ ಆಗಬೇಕು. ಬೇಕಾದರೆ ಹಿಂಬದಿಯಲ್ಲಿ ಇಂಗ್ಲೀಷ್‌ನಲ್ಲಿ ಹಾಕಿ. ಮತ್ತೊಂದು ಕಡೆಯಲ್ಲಾದರೂ ಕನ್ನಡದಲ್ಲಿ ಹಾಕಬೇಕಲ್ಲ, ಕರ್ನಾಟಕ ಎಂಬ ಹೆಸರನ್ನು ಏತಕ್ಕೆ ನಾವು ಕೊಟ್ಟಿದ್ದೇವೆ? ಭಾಷಾವಾರು ರಾಜ್ಯ ಏತಕ್ಕೆ ಆಗಿದೆ? ಅದು ಮಾತ್ರವಲ್ಲ, ಒಳ್ಳೆ ಒಳ್ಳೆಯ ಕನ್ನಡ ಸಾಹಿತಿಗಳು ಇದ್ದಾರೆ, ಕಲಾವಿದರು ಇದ್ದಾರೆ, ಒಳ್ಳೆ ಒಳ್ಳೆಯ ಗ್ರಂಥಗಳನ್ನು ಬರೆಯತಕ್ಕಂಥವರೂ ಇದ್ದಾರೆ. ಅವರಿಗೆ ಪ್ರೋತ್ಸಾಹವನ್ನು ಕೊಡತಕ್ಕಂಥ ವ್ಯವಸ್ಥೆ ಬರತಕ್ಕಂಥದ್ದು ಕೂಡ ಬಹಳ ಪ್ರಾಮುಖ್ಯ ಎಂದು ಈ ಸಂದರ್ಭದಲ್ಲಿ ಸಲಹೆಯನ್ನು ಕೊಡುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಇನ್ನು ಮೀನುಗಾರರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ.

ಪ್ರಕಟಣೆ

ಅಧ್ಯಕ್ಷರು:- ನಿಮಗೆ ಇನ್ನು ಅವಕಾಶವನ್ನು ಕೊಡುತ್ತೇನೆ. ಒಂದು ಸಣ್ಣ ಅನೌನ್ಸ್‌ಮೆಂಟ್ ಮಾಡಬೇಕಾಗಿದೆ. ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ನನಗೆ ಸಹಕರಿಸುವುದಕ್ಕೆ ಪ್ಯಾನಲ್ ಆಫ್ ಛೇರ್ಮೆನ್ ಎಂದು ಮಾಡಿದ್ದೇವಲ್ಲಾ, ಅದಕ್ಕೆ ಎರಡು ಹೆಸರುಗಳನ್ನು ಸೇರಿಸಬೇಕೆಂಬ ಉದ್ದೇಶದಿಂದ ಶ್ರೀ ಬನ್ನಿಕೋಡ್ ಮತ್ತು ಶ್ರೀ ಜಿ.ಎಸ್. ಶಿವನಂಜಪ್ಪ ಇವರುಗಳನ್ನು ಕೂಡ ಸೇರಿಸುತ್ತಿದ್ದೇನೆ. ಇನ್ನು ತಾವು ಮುಂದುವರಿಸಬಹುದು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

ಶ್ರೀ ಬಿ. ಎಂ. ಇದಿನಬ್ಬ:- ನಾನು ರಾಜ್ಯಪಾಲರ ಭಾಷಣದಲ್ಲಿರುವ ಸೂಕ್ಷ್ಮ ವಿಚಾರಗಳನ್ನು ಹೇಳುತ್ತಿದ್ದೆ. ಇನ್ನು ಅಲ್ಪಸಂಖ್ಯಾತರ ಒಂದು ರಿಪೋರ್ಟ್‌ನ್ನು ಹಿಂದಿನ ಸರ್ಕಾರ ಇರುವಾಗ ಮಾಡಿತ್ತು. ಗೂಢವಾಲ ಎಂದು ಒಬ್ಬರು, ಮೊಹಿಸೀನ್ ಎನ್ನುವವರು ಇನ್ನೊಬ್ಬರು. ಈ ಇಬ್ಬರ ರಿಪೋರ್ಟ್ ಕೂಡ ಬಂದಿದೆ. ಗೂಢವಾಲರ ರಿಪೋರ್ಟ್ ಗೂಢವಾಗಿಯೇ ಉಳಿದಿದೆ. ಮೊಹಿಸೀನ್ ಅವರ ರಿಪೋರ್ಟ್ ಏನಾಗಿದೆಯೋ ಎಂದು ಯಾರಿಗೂ ಗೊತ್ತಿಲ್ಲ. ಆದುದರಿಂದ ಅಲ್ಪಸಂಖ್ಯಾತ ವರ್ಗದವರ ಹಿತಕ್ಕಾಗಿ ಮಾಡಿರತಕ್ಕಂಥ ಈ ಒಂದು ರಿಪೋರ್ಟ್ ಏನಾಗಿದೆ ಎಂಬುದನ್ನು ಸಹಾ ನಾವು ತಿಳಿಯಬೇಕು.

ಅವರಿಗೆ ಸಿಗತಕ್ಕಂಥ ಸೌಲಭ್ಯ ಏನು ಎಂಬುದನ್ನು ತಿಳಿಯಬೇಕು. ಅದನ್ನು ಕೂಡ ಈಗ ನಮ್ಮ ಸರ್ಕಾರ ಕೈಗೆತ್ತಿಗೊಂಡು ನೋಡಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ವಕ್ಫ್ ಬೋರ್ಡ್ ಎಂದು ಒಂದುಂಟು. ವಕ್ಫ್ ಬೋರ್ಡ್ ಬಗ್ಗೆ ಕೆಲವರು ಹೇಳುತ್ತಾರೆ, ಅದು ಸ್ವತಂತ್ರವಾಗಿದೆ, ಸರ್ಕಾರದ ಕೆಲವು ತನಿಖೆಗೆ ಮಾತ್ರ ಇದೆ. ಆದುದರಿಂದ ವಕ್ಫ್ ಬೋರ್ಡ್‌ನವವರು ಅವರಷ್ಟಕ್ಕೆ ಅವರು ಕೆಲವು ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಸರ್ಕಾರಕ್ಕೆ ಸರಿಯಾದ ಹಿಡಿತ ಇರಬೇಕು. ಜಿಲ್ಲೆ ಜಿಲ್ಲೆಗಳಲ್ಲಿ ವಕ್ಫ್ ಬೋರ್ಡ್‌ಗಳನ್ನು ರಚನೆ ಮಾಡುವಾಗ ಅಥವಾ ಅಧ್ಯಕ್ಷರನ್ನು ರಚನೆ ಮಾಡುವಾಗ ಸರಿಯಾದಂಥ ಜನರನ್ನು ನೇಮಕ ಮಾಡತಕ್ಕಂಥ ವ್ಯವಸ್ಥೆ ಬಗ್ಗೆ ಕೂಡ ಸರ್ಕಾರ ಆಲೋಚನೆ ಮಾಡಬೇಕು. ಅದರಲ್ಲಿ ವಕ್ಫ್ ಬೋರ್ಡ್‌ನವರದ್ದೇ ಮೇಲಾಗಬೇಕು ಅಥವಾ ಸರ್ಕಾರದ್ದೇ ಮೇಲಾಗಬೇಕು ಎಂದು ಹೇಳತಕ್ಕಂಥ ರೀತಿಯಲ್ಲಿ ಎಲ್ಲರಿಗೂ ಸರಿಸಮಾನ ಎಂದು ಹೇಳತಕ್ಕಂಥ ರೀತಿಯ ವ್ಯವಸ್ಥೆಯಾಗಬೇಕು. ವಕ್ಫ್ ಬೋರ್ಡ್ ಕೂಡ ಒಂದು ರೀತಿಯಲ್ಲಿ ಮಾರ್ಪಾಡಾಗಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇನ್ನು ಬಹಳ ಮುಖ್ಯವಾಗಿ ನಮ್ಮ ಪರಿಸರದ ಅರಣ್ಯದ ವಿಚಾರವನ್ನು ನಾನು ಹೇಳುತ್ತಿದ್ದೆ. ಈ ಅರಣ್ಯ ಉಳಿಯದಿದ್ದರೆ, ಪರಿಸರ ಒಳ್ಳೆಯದಾಗದಿದ್ದರೆ ನಮ್ಮ ನಾಡಿಗೆ ಕೀರ್ತಿ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತು ಪರಿಸರ ಮಾಲಿನ್ಯದಿಂದ ಆಗಿರತಕ್ಕಂಥ ಅನಾಹುತ ಏನು ಎಂದು ನಮಗೆ ಗೊತ್ತಿದೆ. ಪರಿಸರ ಮಾಲಿನ್ಯ ನಿಯಂತ್ರಣ ಇಲಾಖೆಯಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಸಾರಿ ಅದಕ್ಕಾಗಿ ಬೇರೆ ತೆಗೆದಿಟ್ಟಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಅದರ ಮಂತ್ರಿಗಳಾಗಿ ಬಹಳ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಪರಿಸರ ಮಾಲಿನ್ಯದಿಂದಾಗಿ ಇಡೀ ನಮ್ಮ ನಾಡೇ ಹಾಳಾಗಿದೆ. ಅರಣ್ಯ ಕೂಡ ಸಂಪೂರ್ಣವಾಗಿ ಕಾಡು ಕಳ್ಳರ ವಶವಾಗಿದೆ. ಕಾಡುಕಳ್ಳರು ಅರಣ್ಯವನ್ನು ನಾಶಮಾಡುವುದನ್ನು ತಪ್ಪಿಸಬೇಕು. ಹಿಂದೆ ಒಬ್ಬ ಬ್ರಿಟಿಷ್ ತಜ್ಞ ಭಾರತವನ್ನು ನನ್ನ ಕೈಯಲ್ಲಿ ಆಳುವುದಕ್ಕೆ ಬಿಟ್ಟರೆ, ನಾನು ಈ ದೇಶದ ಅರಣ್ಯ ಸಂಪತ್ತಿನಿಂದ 50 ವರ್ಷ ರಾಜ್ಯಭಾರ ಮಾಡಿಯೇನು ಎಂದು ಹೇಳಿದ್ದ. ಹಾಗಿದ್ದರೆ ಆ ಅರಣ್ಯ ಸಂಪತ್ತು ಎಷ್ಟು ದೊಡ್ಡದೆಂದು ನಾವು ಆಲೋಚನೆ ಮಾಡಬಹುದು. ಇಂತಹ ಅರಣ್ಯ ಸಂಪತ್ತು ಇವತ್ತು ಹಾಳಾಗಿಹೋಗುತ್ತಿದೆ. ಇವತ್ತು ಕವಿಗಳೇ ಅದರ ವರ್ಣನೆಯನ್ನು ಮಾಡುತ್ತಿದ್ದಾರೆ.

"ಹರಿಹರ ರಾಘವರಿಗೆ ಎರಗುವ ಮನ
ಹಾಳಾಗಿ ಹಂಪೆಗೆ ಕೊರಗುವ ಮನ
ಪಂಪನ ಬನವಾಸಿಗೆ ಮರುಗುವ ಮನ
ಜೋಗದ ಜಲಪಾತದಿ ದುಮುಕುವ ಮನ
ಮಲೆನಾಡಿಗೆ ಹೊಂಕುಳಿ ಹೋಗುವ ವಕ್ಷ"

"ಕಾಜಾಣದ ಗಿಣಿ ಕೋಗಿಲೆ ಇಂಪಿಗೆ ಮಲ್ಲಿಗೆ ಸಂಪಿಗೆ ಕೇದಿಗೆ ಸೊಂಪಗೆ
ಮಾವಿನ ಹೊಂಗೆಯ ತಳಿರಿನ ತಂಪಗೆ ರಸ ರೋಮಾಂಚನ
ಗೊಳುವಾತನ ಮನ ಎಲ್ಲಿದ್ದರೆ ಏನ್, ಎಂತಿದ್ದರೆ ಏನ್ ಎಂದಿಗೂ ತಾನ್ ಕನ್ನಡ ನಾಡು."

ಎಂದು ಕವಿ ಕುವೆಂಪುರವರು ಹೇಳುತ್ತಾರೆ. ಅದೇ ರೀತಿಯಲ್ಲಿ ನಮ್ಮ ಇಡೀ ದೇಶದ ಪರಿಸರದ ವರ್ಣನೆಯನ್ನು ಅವರು ಮಾಡುತ್ತಾರೆ. ಮುಖ್ಯಮಂತ್ರಿಗಳು ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಾಗ ಹೇಳಿದರು. ಪರಿಸರದ ಬಗ್ಗೆ, ಅರಣ್ಯ ಸಂಪತ್ತಿನ ಸೊಬಗಿನ ಬಗ್ಗೆ ಹೇಳಿ ಎಂದು ಹೇಳಿದರು. ಅದೇ ರೀತಿ ಕವಿ ಕುವೆಂಪುರವರು ಬಹಳವಾಗಿ ಹೇಳಿದ್ದಾರೆ. ಅಂತಹದ್ದನ್ನು ಉಳಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಬೇಕಾದರೆ ಅರಣ್ಯ ಸಂಪತ್ತು ನಾಶವಾಗುವುದನ್ನು ನಿಲ್ಲಿಸಬೇಕು. ಕಾಡುಕಳ್ಳರನ್ನು ಹಿಡಿದು ಉಗ್ರವಾಗಿ ಶಿಕ್ಷೆ ಮಾಡಬೇಕು. ಇವತ್ತು ಕಾಡುಕಳ್ಳರು ತುಂಬಿಹೋಗಿದ್ದಾರೆ. ಈ ಕಾಡುಕಳ್ಳರನ್ನು ಇಲ್ಲವಂತೆ ಮಾಡದಿದ್ದರೆ ನಮ್ಮ ಅರಣ್ಯ ಉಳಿಯುವುದಿಲ್ಲ. ಅರಣ್ಯ ಉಳಿಯದಿದ್ದರೆ ಮಳೆ, ಬೆಳೆ, ಯಾವುದು ನಮಗೆ ಸರಿಯಾಗಿ ಸಿಕ್ಕತಕ್ಕಂಥಹ ವ್ಯವಸ್ಥೆ ಇಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ಸಾಕ್ಷರತೆ ವಿಚಾರ. ಅದೂ ಕೂಡ ಬಹಳ ಜೋರಾಗಿ ನಡೆದಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕ್ಷರತೆಯಲ್ಲಿ ಎಲ್ಲರೂ ಮುಂದೆ ಬಂದು ಎಲ್ಲರೂ ನೂರಕ್ಕೆ ನೂರು ಭಾಗ ಅಕ್ಷರಸ್ಥರಾಗುವಂತಹ ಪರಿಸ್ಥಿತಿ ಬಂದಿದೆ ಎನ್ನುವಂತಹ ಘೋಷಣೆಯನ್ನು ನಾವು ಈ ಹಿಂದೆಯೇ ಮಾಡಿಬಿಟ್ಟಿದ್ದೇವೆ. ಬೀದರ್, ಬಿಜಾಪುರ, ಮಂಡ್ಯ ಮೊದಲಾದ ಕಡೆಗಳಲ್ಲಿಯೂ ಕೂಡ ಈ ಸಾಕ್ಷರತೆಯನ್ನು ತಂದು ನಮ್ಮ ದೇಶದಲ್ಲಿ ಎಲ್ಲರೂ ಬರಹ ಇರುವವರು, ಹೆಬ್ಬೆಟ್ಟನ್ನು ಒತ್ತುವುದನ್ನು ತಪ್ಪಿಸಿ ರುಜು ಹಾಕತಕ್ಕಂತಹ ವ್ಯವಸ್ಥೆಗೆ ಬರತಕ್ಕವರು ಎಂದು ಹೇಳತಕ್ಕದ್ದನ್ನು ಮಾಡಿತೋರಿಸುವಂತಹ ಕಾರ್ಯಕ್ರಮ ಇವತ್ತು ಬಹಳ ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ.

ಇನ್ನು ಪರಿಶಿಷ್ಠ ಜಾತಿ:- ಪರಿಶಿಷ್ಟ ವರ್ಗದವರ ಏಳಿಗೆಗೂ ಕೂಡ ವಿಶ್ವವಿದ್ಯಾನಿಲಯದಿಂದ ಹೊರಬಂದಕೂಡಲೆ ಅವರಿಗೆ ಉದ್ಯೋಗವನ್ನು ಕೊಡಬೇಕು ಎನ್ನುವಂತಹ ಮಾತನ್ನು ಕೂಡ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂತಹ ವಿಚಾರ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡದವರ ಬಗ್ಗೆ ಕೂಡ ಕಳಕಳಿಯನ್ನು ರಾಜ್ಯಪಾಲರ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ವಿಶ್ವವಿದ್ಯಾನಿಲಯದಿಂದ ಹೊರಗೆ ಬಂದ ಕೂಡಲೆ ಅವರಿಗೆ ಉದ್ಯೋಗವನ್ನು ಕೊಡತಕ್ಕಂತಹ ವ್ಯವಸ್ಥೆ ಏನು ಇದೆಯೋ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಬಹಳ ಸ್ಪಷ್ಟವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ರಾಜ್ಯಪಾಲರ ಭಾಷಣ ಸಾಕ್ಷ್ಯವಾಗಿರುತ್ತದೆ. ಆದ್ದರಿಂದ ಅದರ ಬಗ್ಗೆ ಎಲ್ಲವನ್ನು ವಿವರಣೆ ಮಾಡುವುದಕ್ಕೆ ಆಗುವುದಿಲ್ಲ. ಅವರು ಸರ್ಕಾರದ ನೀತಿಗಳನ್ನು, ಸರ್ಕಾರ ಮಾಡತಕ್ಕಂತಹ ಕಾರ್ಯಕ್ರಮಗಳನ್ನು ಪ್ರತಿಬಿಂಬಿಸುತ್ತಿದ್ದಾರೆ. ಆದ್ದರಿಂದ ಈ ವಿಚಾರವನ್ನು ಇವತ್ತು ನಾವು ಚೆನ್ನಾಗಿ ಮನದಟ್ಟು ಮಾಡಬೇಕು.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಾಮುಖ್ಯವಾದಂತಹ ವಿಚಾರ ಎಂದರೆ, ಸ್ಮಶಾನಕ್ಕಾಗಿ ಸ್ಥಳವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೊಡುವುದು. ಇದೊಂದು ತಮಾಷೆಯೆಂದು ಯಾರೂ ತಿಳಿಯಬಾರದು. ಇವತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಈ ಕಷ್ಟ ಹೇಳತೀರದು. ಮುಸಲ್ಮಾನರಿಗೆ ಸ್ಮಶಾನ ಇಲ್ಲ, ಹಿಂದುಗಳಿಗೆ ಸ್ಮಶಾನ ಇಲ್ಲ, ಗ್ರಾಮಾಂತರ ಪ್ರದೇಶದಲ್ಲಿ ನಡೆದಂತಹ ಒಂದು ಚಿತ್ರವನ್ನು ನಿಮ್ಮ ಮುಂದೆ ಹೇಳುತ್ತೇನೆ. ಒಂದು ಸಂದರ್ಭದಲ್ಲಿ ಒಂದು ಹಳ್ಳಿಯ ಮುಸಲ್ಮಾನರು ನನ್ನ ಹತ್ತಿರ ಬಂದು ನಮಗೆ ದಫನ್ ಮಾಡಲಿಕ್ಕೆ ಜಾಗ ಇಲ್ಲ, ನಾವು ಎಂಟು ಮೈಲಿ ದೂರವಿರುವ ಅರಬ್ಬಿ ಸಮುದ್ರಕ್ಕೆ ಶವವನ್ನು ತೆಗೆದುಕೊಂಡುಹೋಗಿ ಹಾಕಬೇಕೋ ಎನ್ನುವಂತಹ ಮಾತನ್ನು ಹೇಳಿದರು. ನಿಜವಾಗಿಯೂ ನಾನು ವಿಚಾರಣೆ ಮಾಡುವಾಗ ಅಲ್ಲಿ ಎಷ್ಟೋ ವರ್ಷಗಳಿಂದ ದಫನ್ ಮಾಡಲು ಅವರಿಗೆ ಜಾಗ ಸಿಕ್ಕಿರಲಿಲ್ಲ. ಅದೇ ರೀತಿಯಲ್ಲಿ ಮತ್ತೊಂದು ಸಂದರ್ಭದಲ್ಲಿ ಹಿಂದುಗಳು ಬಂದು ನಮಗೆ ದಹನಕ್ರಿಯೆ ಮಾಡಲು ಸರಿಯಾದಂತಹ ಜಾಗ ಇಲ್ಲಿ ಇಲ್ಲ, ನಾವು ಏನು ಮಾಡಬೇಕು, ಶವವನ್ನು ಇಟ್ಟು ತಿನ್ನಬೇಕೋ ಎಂದು ಕೇಳಿದರು. ಇಂತಹ ಪರಿಸ್ಥಿತಿ ಗ್ರಾಮಾಂತರ ಪ್ರದೇಶದಲ್ಲಿ ಉಂಟು. ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸ್ಮಶಾನವನ್ನು ಕೊಡತಕ್ಕಂಥಹ ವ್ಯವಸ್ಥೆಯನ್ನು ಮಾನ್ಯ ರಾಜ್ಯಪಾಲರು ಹೇಳಿದ್ದರಲ್ಲಾ ಇದು ಬಹಳ ಪ್ರಮಾಖ್ಯವಾದುದು. ಇದು ತಮಾಷೆಯೆಂದು ಯಾರೂ ತಿಳಿಯಬಾರದು. ಜನನ ಮರಣ ಇದು ಕಾಲಚಕ್ರ. ಹುಟ್ಟಿದವನು ಸಾಯಲೇಬೇಕು. ಸತ್ತವರನ್ನು ದಹನ ಮಾಡಲೇಬೇಕು. ಅದನ್ನು ಇಟ್ಟುಕೊಳ್ಳಲಿಕ್ಕೆ ಬರುವುದಿಲ್ಲ. ಇಟ್ಟುಕೊಂಡರೆ ವಾಸನೆ ಬರುತ್ತದೆ. ಆದ್ದರಿಂದ ಈ ಸ್ಮಶಾನದ ಕಾರ್ಯಕ್ರಮ ಏನಿದೆ ಇದು ಗ್ರಾಮಾಂತರ ಪ್ರದೇಶದ ಮಟ್ಟಿಗೆ ಬಹಳ ಪ್ರಾಮುಖ್ಯವಾದಂತಹ

ಕಾರ್ಯಕ್ರಮ. ಇದನ್ನು ಸರ್ಕಾರದವರು ಕಟ್ಟುನಿಟ್ಟಾಗಿ ಜಾರಿಗೆ ಕೊಡತಕ್ಕಂಥಹ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಅನೇಕರು ಲಂಚವನ್ನು ಕುರಿತು ಬಹಳವಾಗಿ ಮಾತನಾಡಿದ್ದಾರೆ.

ಛೇರ್ಮನ್:- ಮಾನ್ಯ ಇದಿನಬ್ಬನವರೆ, ಸಮಯವಾಯಿತು.

ಶ್ರೀ ಬಿ. ಎಂ. ಇದಿನಬ್ಬ:- ನಾನು ಇನ್ನು ಎರಡು-ಮೂರು ನಿಮಿಷಗಳಲ್ಲಿ ಮುಗಿಸುತ್ತೇನೆ. ನಾನು ಇತಿಹಾಸವನ್ನು ಸ್ವಲ್ಪ ಓದಿದ್ದೇನೆ. ಚರಿತ್ರೆಯನ್ನು ಓದಿದ್ದೇನೆ. ಆ ಕಾಲದಿಂದಲೂ ಈ ಲಂಚ ಉಂಟು. ಆದರೆ ಆಗ ಕಡಿಮೆ ಪ್ರಮಾಣದಲ್ಲಿತ್ತು. 40 ವರ್ಷಗಳಿಂದ ಲಂಚ ಇತ್ತು. ಈಗ ಲಂಚ ಸ್ವಲ್ಪ ಸ್ವಲ್ಪ ಜಾಸ್ತಿಯಾಗಿ ವಿಕೋಪಕ್ಕೆ ಹೋಗಿ ಶಿಖರ ಪ್ರಾಯವಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಅದರಲ್ಲಿ ಏನೂ ಸಂಶಯ ಇಲ್ಲ. ಆದರೆ ಈ ಲಂಚವನ್ನು ಕೊಡುವಂತಹವರು ಯಾರು, ತೆಗೆದುಕೊಳ್ಳುವಂತಹವರು ಯಾರು ಎನ್ನುವುದು ಪ್ರಶ್ನೆ? ಒಬ್ಬ ತೆಗೆದುಕೊಳ್ಳತಕ್ಕಂಥ ಮನುಷ್ಯ ಇರಬೇಕು. ಒಬ್ಬ ಕೊಡುವಂತಹ ಮನುಷ್ಯ ಇರಬೇಕು. ಎರಡು ಕೈಯಲ್ಲಿ ಹೊಡೆದರೆ ಮಾತ್ರ ಚಪ್ಪಾಳೆಯಾಗುವಂತಹದ್ದು. ಬರೀ ಒಂದು ಕೈಯಲ್ಲಿ ಹೊಡೆದರೆ ಚಪ್ಪಾಳೆಯಾಗುವುದಿಲ್ಲ. ಆದ್ದರಿಂದ ಕೊಡತಕ್ಕವರು ಯಾರೆಂದರೆ ಜನತೆ, ನಾವೇ, ನಾವು ಯಾರಿಗೋ ಅಧಿಕಾರಿಗಳಿಗೆ, ದಳ್ಳಾಳಿಗಳಿಗೆ ಲಂಚವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ, ತೆಗೆದಕೊಳ್ಳತಕ್ಕವನು ಎಷ್ಟು ಅನ್ಯಾಯಗಾರನೋ ಅದೇ ರೀತಿ ಕೊಡತಕ್ಕವನು ಕೂಡ ಅನ್ಯಾಯಗಾರನೆಂದು ನಾನು ಘಂಟಾಘೋಷವಾಗಿ ನಾನು ಹೇಳಬಲ್ಲೆ.

ಏಕೆಂದರೆ, ಇದಕ್ಕೊಂದು ನೀತಿ, ನಿಯಮ, ತಾಕತ್ತು ಮತ್ತು ನಿಯತ್ತಿರಬೇಕು. ಉದಾಹರಣೆಗೆ ಒಂದು ಮಾತನ್ನು ಹೇಳುತ್ತೇನೆ ಯಾರೂ ಅನ್ಯಥಾ ಭಾವಿಸಬಾರದು. ಇವೊತ್ತು ನನಗೆ ಇಷ್ಟು ಪ್ರಾಯವಾಗಿದ್ದು, ರಾಜಕೀಯದಲ್ಲಿ ಸುಮಾರು 50 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಇವೊತ್ತಿನವರೆವಿಗೂ ನನ್ನ ಕೈಯಿಂದ ಒಂದು ರೂಪಾಯಿಯನ್ನು ಒಬ್ಬರಿಗೂ ಕೂಡ ಕೊಟ್ಟವನಲ್ಲ, ದುಡ್ಡು ಕೊಟ್ಟು ಯಾವ ಕೆಲಸವನ್ನೂ ಮಾಡಿಸಿಕೊಂಡವನಲ್ಲ, ಕೊಡುವವರ ಹಿಂದೆ ಹೋದವನಲ್ಲ, ಆದರೆ, ನನ್ನ ಕೆಲಸ ಆಗಲಿಲ್ಲವೆ? ಕೆಲಸ ಆಗಿದೆ. ನ್ಯಾಯವಾಗಿರತಕ್ಕಂಥ ಜಿನಿಯನ್ ಕೆಲಸಗಳೆಲ್ಲಾ ಆಗುತ್ತದೆ. ಲಫಡಾ ಕೆಲಸಗಳನ್ನು ತೆಗೆದುಕೊಂಡು ಹೋದರೆ ಯಾವ ಕಾಲಕ್ಕೂ ಆಗುವುದಿಲ್ಲ. ಆದುದರಿಂದ, 'ಲಂಚ' ಎಂದು ಹೇಳತಕ್ಕಂಥ ವಿಚಾರದಲ್ಲಿ ಜನತೆಯ, ನಮ್ಮ ಪಾಲುಕೂಡ ಉಂಟು. ಅಧಿಕಾರಿಗಳು ಕೂಡ ಭ್ರಷ್ಟರಿದ್ದಾರೆ ಎನ್ನುವುದರಲ್ಲಿ ಏನೂ ಸಂಶಯವಿಲ್ಲ. ಅಂತಹವರ ಬಗ್ಗೆ ಬಹಳ ನಿಗಾ ಇಟ್ಟುಕೊಂಡು, ಅಂತಹವರು ಸಿಕ್ಕಿದರೆ ಅವರನ್ನು ಬಗ್ಗುಬಡಿಯುವಂಥಾದ್ದು, ಅವರಿಗೆ ತಕ್ಕ ಶಿಕ್ಷೆ ಕೊಡುವಂಥಾದ್ದು ಕೂಡ ಬಹಳ ಪ್ರಮುಖವಾಗುತ್ತದೆ. ಬರೀ ಲಂಚ ತೆಗೆದುಕೊಳ್ಳುವವರೆ ತಪ್ಪಿತಸ್ಥರೆಂದು ಹೇಳುವುದಕ್ಕಿಂತ ಕೊಡುವವರು ಕೂಡ ತಪ್ಪಿತಸ್ಥರು ಎಂದು ತಿಳಿದುಕೊಂಡರೆ ಒಳ್ಳೆಯದು. ನಿಜವಾಗಿಯೂ ಇದಕ್ಕೆ ಮನಸ್ಸಿನ ತಾಕತ್ತು, ನಿಯತ್ತು, ದೃಢತೆ ಮತ್ತು ಸ್ಥಿರತೆ ಬೇಕು. ಈ ರೀತಿಯಲ್ಲಿ ಬಂದರೆ ನಮ್ಮ ಎಲ್ಲಾ ಕೆಲಸಗಳು ಖಂಡಿತ ಆಗುತ್ತವೆ. ಹೇಳುವುದು ಸುಲಭ ಮತ್ತು ಯಾರನ್ನಾದರೂ ದೂರಿ ಬಿಡುವುದು ಸುಲಭ. ಆದುದರಿಂದ, ಈ ವಿಚಾರವನ್ನು ಆಲೋಚನೆ ಮಾಡಬೇಕಾಗಿದೆ, ಅದರ ಬಗ್ಗೆ ಹೆಚ್ಚಿನ ಕಳಕಳಿ ಇರಬೇಕಾಗುತ್ತದೆ. ಇನ್ನು ಅಧ್ಯಕ್ಷರು ಸಮಯವಾಯಿತೆಂದು ಗಂಟೆ ಬಾರಿಸುತ್ತಿದ್ದಾರೆ. ಹೇಳುವುದಕ್ಕೆ ಅನೇಕ ವಿಚಾರಗಳಿದ್ದರೂ ಕೂಡ ಹೆಚ್ಚು ಹೇಳುವಂಥಾದ್ದು ಏನೆಂದರೆ, ರಾಜ್ಯಪಾಲರ ಭಾಷಣ ಈ ಸರ್ಕಾರ ಮಾಡತಕ್ಕಂಥ ಒಳ್ಳೆಯ ಕಾರ್ಯಕ್ರಮಗಳನ್ನು ಪ್ರತಿಬಿಂಬಿಸತಕ್ಕಂಥ ಒಂದು ಕನ್ನಡಿ. ಈಗ 'ಪಂಚ' ಕಾರ್ಯಕ್ರಮಗಳು ಅಂದರೆ, ವಿಶ್ವ ಕಾರ್ಯಕ್ರಮವಾಗಲಿ, ಆರಾಧನಾ ಕಾರ್ಯಕ್ರಮವಾಗಲಿ, ಆಶ್ರಯ ಕಾರ್ಯಕ್ರಮವಾಗಲಿ, ಅಕ್ಷಯ ಕಾರ್ಯಕ್ರಮವಾಗಲಿ ಅಥವಾ ಶುಶ್ರೂಷಾ ಕಾರ್ಯಕ್ರಮವಾಗಲಿ ಇವು ಇನ್ನೂ ಆರಂಭದ ಹಂತಗಳಲ್ಲಿವೆ. ನೀವು ಒಂದೆರಡು ವರ್ಷಗಳ ಕಾಲ ಕಾದು ನಂತರ ಇದರ ಬಗ್ಗೆ ಎಷ್ಟು ಬೇಕಾದರೂ ಟೀಕೆ ಮಾಡಿ. ಆರಂಭದಲ್ಲೆ ಅಂದರೆ ಈ ಕಾರ್ಯಕ್ರಮಗಳಿಗೆ ತೊಡಗುವಾಗಲೆ ಟೀಕೆ ಮಾಡಿದರೆ ಬಹಳ ಕಷ್ಟವಾಗುತ್ತದೆ. 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು' ಎಂದು ಹೇಳುವ ಹಾಗೆ ನಾವು ಸುಲಭದಲ್ಲಿ ಟೀಕೆ ಮಾಡಬಹುದು. ಆದರೆ, ಅದರ ಪರಿಣಾಮ ಏನೆಂಬುದನ್ನು ಒಂದು ವರ್ಷವಾದರೂ ಕಾದು ನೋಡಿ ಅಥವಾ ಎರಡು ವರ್ಷವಾದರೂ ಕಾದು ನೋಡಿ. ಆಗ ಎಷ್ಟು ಬೇಕಾದರೂ ಟೀಕೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಇವತ್ತು ಕಾರ್ಯಕ್ರಮಗಳನ್ನು ಪ್ರಾರಂಭಮಾಡಿದ್ದಾರೆ. ಪ್ರಾರಂಭದಲ್ಲಿ ಪ್ರೋತ್ಸಾಹ ಕೊಡಬೇಕಲ್ಲದೆ, ಅದನ್ನು ಅಲ್ಲಿಯೇ ಥಳಿಸಿಬಿಡುವಂತಹ ವ್ಯವಸ್ಥೆ ಸರಿಯಲ್ಲವೆಂದು ಹೇಳತಕ್ಕಂಥ ಮನೋಭಾವವಿದೆ.

ಶ್ರೀ ಡಿ.ಬಿ. ಚಂದ್ರೇಗೌಡ: 2-3 ವರ್ಷಗಳು ಕಾಯುವುದು ಬೇರೆ. ವರ್ಷಕ್ಕೆ ಒಂದು ಭಾಷಣ ಆಗುತ್ತದೆ. ಆದರೆ, ವಾರ್ಷಿಕ ಕಾರ್ಯಕ್ರಮವೆಂದು ಹಾಕಿಕೊಳ್ಳುತ್ತೀರಲ್ಲಾ, ಅದು ಏನಾಗಿದೆಯೆಂದು ಕೇಳುತ್ತಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ:- ನಾವು ಎಷ್ಟು ಮುಂದೆ ಹೋಗಿದ್ದೇವೆಂದು ಬರುವ ವರ್ಷದಲ್ಲಿ ಆಲೋಚನೆ ಮಾಡಬಹುದು. ಆದುದರಿಂದ, ಈ ಕಾರ್ಯಕ್ರಮ ಕನ್ನಡ ನಾಡಿನ ಜನತೆಗೆ ಬೇಕಾಗಿದೆ. ಸರ್ಕಾರ ಏನೂ ಮಾಡದಿದ್ದರೆ ಏನೂ ಮಾಡಿಲ್ಲವೆಂದಾಯಿತು. ಈಗ ಯಾವುದಾದರೂ ಕಾರ್ಯಕ್ರಮವನ್ನು ತೆಗೆದುಕೊಂಡರೆ ಅದು 'ಬೋಗಸ್' ಎಂದಾಯಿತು. ಈ ರೀತಿಯಾದರೆ ಬಹಳ ಕಷ್ಟ. ಮೊದಲು ಕೆಲಸ ಮಾಡುವುದಕ್ಕೆ ಬಿಡಬೇಕು. ಬಿಟ್ಟು ಅನಂತರ, ನಮ್ಮ ಅಸ್ತ್ರಗಳನ್ನು ನಾವು ಅವರ ಮೇಲೆ ಎಸೆಯುವುದರಲ್ಲಿ ಅರ್ಥವುಂಟು ಎನ್ನುವುದು ನನ್ನ ಭಾವನೆ. ಆದುದರಿಂದ, ಇವೊತ್ತು ರಾಜ್ಯಪಾಲರು ಮಾಡಿದ ಭಾಷಣ ಸರ್ಕಾರ ಮಾಡತಕ್ಕಂಥ ಕಾರ್ಯಕ್ರಮಗಳ ಒಂದು ಕೈಗನ್ನಡಿ. ಮಾಡತಕ್ಕಂಥ ಕಾರ್ಯಕ್ರಮಗಳು ಅನೇಕ ಇವೆ. ಅದನ್ನೆಲ್ಲವನ್ನೂ ನಾವು ಕಾದು ನೋಡಬೇಕು. ಗ್ರಾಮಾಂತರ ಪ್ರದೇಶಗಳಿಗೆ ಬೇಕಾದ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಅದರಲ್ಲಿ 'ಆಶ್ರಯ' ಕಾರ್ಯಕ್ರಮ ವನ್ನೆಂತೂ ಎದುರು ಪಕ್ಷದವರು ಸಹ ಹೊಗಳಿದ್ದಾರೆ. ಆದುದರಿಂದ, 'ಆಶ್ರಯ' ಕಾರ್ಯಕ್ರಮ ನಿಜವಾಗಿಯೂ ಬಹಳ ಪ್ರಾಮುಖ್ಯವಾದಂಥ ಕಾರ್ಯಕ್ರಮ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇವೊತ್ತು ಜಾಗ ಇಲ್ಲದವರಿಗೆ, ಮನೆ ಇಲ್ಲದವರಿಗೆ ಬೇರೆಯವರ ಮನೆ ಬಾಗಿಲಲ್ಲಿ ಮಲಗಿಕೊಳ್ಳತಕ್ಕಂಥವರಿಗೆ, ಮರದ ಬುಡದಲ್ಲಿ ಮಲಗತಕ್ಕಂಥವರಿಗೆ, ದಿಕ್ಕಿಲ್ಲದಂತಿರುವ ಜನರಿಗೆ ಒಂದು ರೀತಿಯ ಆಶೆ ಇದೆ. ಏನೆಂದರೆ, ನಮಗೆ ಜಾಗ ಸಿಕ್ಕಿತು, ಹಕ್ಕು ಪತ್ರ ಸಿಕ್ಕಿದೆ, ಇನ್ನೊಂದು ಮನೆ ಸಿಗುತ್ತದೆಂದು ಹೇಳತಕ್ಕಂಥಾದ್ದನ್ನು ನಾವು ಒಳ್ಳೆಯ ರೀತಿಯಲ್ಲಿ ಮಾಡಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ನಾನೇ ಬರೆದ ನಾಲ್ಕು ಚರಣವನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಈ ಬಾರಿಯ ರಾಜ್ಯಪಾಲರ ಭಾಷಣ

ಸಿಹಿ-ಕಹಿಯ ಲೇಪನದ ಸಮ್ಮಿಶ್ರಣ

ಹುಡುಕಿದರೆ ಸಿಗುವುದು ಅಲ್ಲಲ್ಲಿ ಸಿಹಿ ಹೂರಣ

ಹುಡುಕದೆ ಮಡುಕಿದರೆ ಆಗ ಗ್ರಹಣ.

SHRI M. BHAKTHAVACHALAM :- (K. G. F.):- Mr. Speaker Sir, it is my honour and privilege to extend my thanks on behalf of my party and myself to the addresses made by His Excellency the Governor of Karnataka. The proposals, and the government policies that are to be adopted for the successful implementation of Developmental Programmes like "Ashraya", "Akshaya", "Aradhana" for upliftment of the SC and ST and also economically weaker sections of the society. Great importance has to be given to Education, Power-Generation, Health, Irrigation and Agriculture.

Opening of Sericultural College at Kolar District for Special Education of the Students of Karnataka and importance given for the road transport facility. Formation of High Power Authority under the SC and ST Commissioner to protect all Constitutional Rights of SC and STs, direct Employment to Rank Holders belonging to SC and ST, and importance to the Public Distribution system are worthy steps and are appreciated by all sections of the society.

SHRI D.B. CHANDRE GOWDA:- They are asking which was the press you got it printed in Madras. ಮದ್ರಾಸಿನ ಯಾವ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಇದು ಪ್ರಿಂಟಾಯಿತು?

ಶ್ರೀ ಎಂ. ಭಕ್ತವತ್ಸಲಂ:- ಇದನ್ನು ನಾನೇ ಟೈಪ್ ಮಾಡಿದ್ದುದು.

ಶ್ರೀ ವಾಟಾಳ್ ನಾಗರಾಜ್:- ಅವರೇ ಟೈಪ್ ಮಾಡಿಕೊಂಡು ಬಂದು ಇಲ್ಲಿ ಓದುತ್ತಿದ್ದಾರೆ, ಇದಕ್ಕೆ ಅವಕಾಶವಿದೆಯೇ?

ಛೇರ್ಮನ್:- ದಯವಿಟ್ಟು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿಕ್ಕೆ ಅವಕಾಶವನ್ನು ಮಾಡಿಕೊಡಿ.

SHRI M. BHAKTHAVACHALAM:- The Honourable Government have failed to notice the employment opportunities to be provided for all unemployed educated youths in the State. No point on Mid-day Meal Scheme. It was assured in the last year's address. Kindly see that the loss of life and property of the people of Karnataka in Cauvery issue is prevented immediately. Compensation to the victims of Cauvery issue, now provided is insufficient and the same should be paid as per the estimate of loss. Serious action should be taken to punish the culprits who are responsible and involved in this issue. The Government has utterly failed to take action against the arrogant and biased Superintendent of Police, K. G. F.

ವಾಟಾಳ್ ನಾಗರಾಜ್:- ತಮಿಳುನಾಡು ಸರ್ಕಾರದವರು ಕನ್ನಡಿಗರಿಗೆ ಅನ್ಯಾಯವಾಗಿರುವುದಕ್ಕೆ ಪರಿಹಾರವನ್ನು ಕೊಡುವುದರಲ್ಲಿ ವಿಫಲರಾಗಿದ್ದಾರಂತೆ.

SHRI M. BHAKTHAVACHALAM:- He is continuously harassing the SC and ST people of KGF by filing hundreds of false cases, including the local legislator with the directions of my political adversaries. There was Clamping of Section 144 Cr. P. C. for more than 75 days during the month of April 1991 and January 1992. More than 15 murders are reported and none of them has been traced. The Superintendent of Police has converted his office into particular political group meeting place, from where plots are hatched to harass other political party members and innocent SC and ST people at K. G. F. Due to his mis-administration many Police Sub-Inspectors are on long leave; only Asst. Sub-Inspectors are incharge of several Police Stations under his jurisdiction.

(MR. SPEAKER IN THE CHAIR)

The Superintendent of Police is an in-efficient and worst adminstrator. The Law and Order at KGF is completely collapsed. The Minister of State for Small Scale Industries who is a native of KGF is the Godfather to the Superintendent of Police by protecting him in all the circumstances. The Local Legislator cannto freely work as long as this Superintendent of Police continues at K.G.F. I also request this Hon'ble Government to take drastic action against the arrogant and vindictive Superintendent of Police and transfer him from KGF at once. The KGF should be made as a Revenue Sub-Division with a separate Assistant Commissioner, Tahsildar and Sub-Registrar office. The Minister of State for Small Scale Industries should immediately stop the interference in the adminstration of my constituency.

ಮಾನ್ಯ ಅಧ್ಯಕ್ಷರೇ, ನನಗೆ ಒಂದು ಡೌಟ್ ಬಂದಿದೆ. ನಾನು ಕೆ.ಜಿ.ಎಫ್.ನಲ್ಲಿ ಎಲೆಕ್ಟ್ ಆಗಿದ್ದೇನೆಯೋ ಅಥವಾ ಬಿನ್ನಿಪೇಟೆ ಕ್ಷೇತ್ರದಲ್ಲಿ ಎಲೆಕ್ಟ್ ಆಗಿದ್ದೇನೆಯೋ ನನಗೆ ಗೊತ್ತಿಲ್ಲ. ಏನೋ ನಮ್ಮ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಮಿನಿಸ್ಟರ್ ಕಂಪ್ಲೀಟ್ ನನ್ನ ಕ್ಷೇತ್ರದಲ್ಲಿ ಇಂಟರ್‌ಫಿಯರ್ ಆಗುತ್ತಾರೆ. ಅಲ್ಲಿ ಅಡ್ಮಿನಿಸ್ಟ್ರೇಟರ್ಸ್ ಯಾರು ಆಫೀಸ್‌ಗೆ ಸರಿಯಾಗಿ ಬರುವುದಿಲ್ಲ. ಆಫೀಸರ್ ಟ್ರಾನ್ಸಫರ್ ಮಾಡುತ್ತಾರೆ. ಆಫೀಸರ್ಗೆ ಇವರು ಆರ್ಡರ್ರ್ಮಾಡುತ್ತಾರೆ. ಅಲ್ಲಿ ಡಕಾಯತಿ

ಮಾಡಿರುವವರು, ಮರ್ಡರ್ ಮಾಡಿರುವವರು, ತಪ್ಪು ಮಾಡಿರುವವರು, ನೇರವಾಗಿ ಮಿನಿಸ್ಟರ್ ಮನೆಗೆ ಬರುತ್ತಾರೆ. ಮಿನಿಸ್ಟರ್ ಇಲ್ಲಿಂದ ಫೋನ್ ಮಾಡುತ್ತಾರೆ. ರಿಲೀಸ್ ಮಾಡುತ್ತಾರೆ. ಅಲ್ಲಿ ಆರ್ಡಿನ ಸೂಪರ್‌ಇನ್‌ಟೆಂಡಿಂಗ್ ಆಫ್ ಪೋಲೀಸ್ ಅಲ್ಲಿಂದ ಅವರನ್ನು ಕಾನ್‌ಸ್ಟೇಬಲ್ ಕೂಡ ಲೋಕಲ್ ಎಂ.ಎಲ್.ಎ. ಗೆ ಮರ್ಯಾದೆ ಕೊಡುವುದಿಲ್ಲ. ಅಲ್ಲಿ ಪೋಲೀಸ್‌ನವರು ನನಗೆ ಥ್ರೆಟನ್ ಮಾಡುತ್ತಾರೆ, 22 ದಿವಸ ನನ್ನನ್ನು ಅರೆಸ್ಟ್ ಮಾಡಿ ಸೆಂಟ್ರಲ್ ಜೈಲಿಗೆ ಕಳುಹಿಸಿ ಪೋಲೀಸ್‌ನವರು ಗೌರ್ನಮೆಂಟ್‌ನಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ. ನನ್ನನ್ನು 22 ದಿವಸ ಸೆಂಟ್ರಲ್ ಜೈಲಿಗೆ ಕಳುಹಿಸಿದ್ದು ದೊಡ್ಡ ಸಾಧನೆ. ನಮ್ಮ ಸ್ಮಾಲ್ ಸ್ಕೇಲ್ ಮಿನಿಸ್ಟರ್, ಹೋಮ್ ಮಿನಿಸ್ಟರ್‌ಗೆ ಫೋನ್ ಮಾಡಿ ಒಳ್ಳೆಯ ಕೆಲಸಮಾಡಿದಿರಿ, ತುಂಬಾ ಸಂತೋಷವೆಂದು ಹೇಳುತ್ತಾರೆ ಅವರು ಮಿನಿಸ್ಟರ್ ಆಗಿ ಬಂದಿದ್ದಕ್ಕೆ ನಾನು 22 ದಿವಸ ಜೈಲಿಗೆ ಹೋಗಿದ್ದೇನೆ. ಅವರು ಮಿನಿಸ್ಟರ್ ಆಗಿದ್ದಾರೋ ಏನೋ ನನಗೆ ಗೊತ್ತಿಲ್ಲ. ಅವರು ಏತಕ್ಕೋಸ್ಕರ ನನ್ನ ಕ್ಷೇತ್ರದಲ್ಲಿ ಎಂಟರ್ ಆಗುತ್ತಾರೆ ಎಂದು ಅಧ್ಯಕ್ಷರೇ ನೀವು ಒಂದು ಜಡ್ಜ್‌ಮೆಂಟ್ ಮಾಡಬೇಕಾಗುತ್ತದೆ. ಅಲ್ಲಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ನವರು ಇವರು ಏನು ಹೇಳುತ್ತಾರೆ ಅದನ್ನೇ ಕೇಳುತ್ತಾರೆ. ಇವರ ರಿಲೇಷನ್ ಅವರು. ಅಲ್ಲಿ ಗೌರ್ನಮೆಂಟ್ ಆಫೀಸ್ ಪೂರ್ತಿ ಯಾರು ಆಫೀಸರ್ ಇದ್ದಾರೆ ಅವರೆಲ್ಲಾ ಇವರ ರಿಲೇಷನ್‌ನವರೇ. ಅಲ್ಲಿ 80 ಪರ್ಸೆಂಟ್ ಷೆಡ್ಯೂಲ್ ಕ್ಯಾಸ್ಟ್ ಇದ್ದಾರೆ; ಇವರು ಪೋಸ್ಟಿಂಗ್ ಮಾಡಿರುವುದು, ಇವರು ಟ್ರಾನ್ಸಫರ್ ಮಾಡಿರುವುದು, ಇವರು ಆರ್ಡರ್ ಮಾಡಿರುವುದನ್ನು ನೋಡಿದರೆ ಇವರು ಹೋಮ್ ಮಿನಿಸ್ಟರ್ ಇಲ್ಲ, ಸ್ಮಾಲ್ ಸ್ಕೇಲ್ ಮಿನಿಸ್ಟರ್ ಎಂದು ನನಗೆ ಗೊತ್ತಿಲ್ಲ. ಇವರು ಪೋಲೀಸ್‌ನವರಿಗೆ ಏನು ಹೇಳುತ್ತಾರೆ ಅದೇ ಅಲ್ಲಿ ಮಾಡುವುದು. ಅಲ್ಲಿ ಮರ್ಡ್ರರ್ ಮಾಡಿ ನೇರವಾಗಿ ಇಲ್ಲಿಗೆ ಬರುತ್ತಾರೆ. ಕೆ. ಜಿ. ಎಫ್.ನಲ್ಲಿ ಇವತ್ತು ಒಂದು ಮರ್ಡರ್ ಆಗಿದೆ. ಮಂತ್‌ಲಿ ಟು ಮರ್ಡರ್ಸ್ ಆಗುತ್ತದೆ.

ಇವತ್ತು ಒಂದು ಮರ್ಡರ್ ಆಗಿದೆ. ಲಾಸ್ಟ್ ವೀಕ್ ಒಂದು ಮರ್ಡರ್ ಆಗಿದೆ. ಈ ಸೂಪರ್‌ಇನ್‌ಟೆಂಡಿಂಗ್ ಆಫ್ ಪೋಲೀಸ್ ಬಂದ ಮೇಲೆ 16 ಮರ್ಡರ್ಸ್ ಆಯಿತು. ಇದುವರೆಗೆ ಅವರು ಏನೂ ಕ್ರಮ ತೆಗೆದುಕೊಂಡಿಲ್ಲ. ಚೀಫ್ ಮಿನಿಸ್ಟರ್‌ಗೆ ಎಷ್ಟೋ ಸಲ ನಾನು ಹೇಳಿದ್ದೇನೆ.

MR. SPEAKER:- The Hon'ble Member says that every month two murders take place in K.G.F. and this morning also one murder took place.

ಶ್ರೀ ಎಂ. ಭಕ್ತವಚ್ಚಲಂ:- ಒಂದು ಇಯರ್‌ನಲ್ಲಿ 16 ಮರ್ಡರ್ಸ್ ಆಗಿವೆ. ಇವತ್ತು ಒಂದು ಮರ್ಡರ್ ಆಯಿತು.

ಅಧ್ಯಕ್ಷರು:- ಇಷ್ಟು ಹೊತ್ತಿಗೇ ನಿಮಗೆ ಹೇಗೆ ಗೊತ್ತಾಯಿತು? ಇನ್ನು ಬೆಳಿಗ್ಗೆ 12-00 ಗಂಟೆ.

ಶ್ರೀ ಎಂ. ಭಕ್ತವತ್ಸಲಂ:- ಸ್ವಾಮಿ, ಆಟೋ ಡ್ರೈವರ್‌ಸ 3 ಡೇಸ್ ಹಿಂದೆ ಅವರ ಕಾರಿನಲ್ಲಿ ಕ್ಯಾಪಿಟಲ್‌ಗೆ ಬಂದಿದ್ದು, ಇವತ್ತು ನಮ್ಮ ಊರಿನಿಂದ ಫೋನ್ ಬಂದಿದೆ. ಅವರು ಅಂಡರ್‌ಗ್ರೌಂಡ್‌ನಲ್ಲಿ ಮರ್ಡರ್ ಮಾಡಿಹಾಕಿದ್ದಾರೆ ಎಂದು ಪೋಲೀಸ್ ರಿಪೋರ್ಟ್ ಆಗಿ ಅಲ್ಲಿ ಬಾಡಿಯನ್ನು ಎತ್ತಿಕೊಂಡಿದ್ದಾರೆಂದು ಫೋನ್ ಬಂದಿದೆ. ಇವತ್ತು ಒಂದು ಮರ್ಡರ್ ಆಗಿದೆ. ಮಂತ್‌ಲಿ ಎರಡು ಮರ್ಡರ್ ಆಗುತ್ತವೆ. ಯಾವತ್ತು ಮರ್ಡರ್ ಆಗಿತ್ತು ಇದರಲ್ಲಿ ಒಂದು ನಾಲ್ಕು ತಿಂಗಳಾದರೂ ನಾನು ಹೋಮ್ ಮಿನಿಸ್ಟರ್‌ನ್ನು ನೋಡಿ ಲೆಟರ್ ಕೊಟ್ಟಿದ್ದೇನೆ. ಅವರು ಲೆಟರ್ ಓದುವುದಿಲ್ಲ. ನಾನು ಹೇಳುವುದನ್ನು ಕೇಳುವುದಿಲ್ಲ. ಸೂಪರಿಂಟೆಂಡೆಂಟ್ ಆಫ್ ಪೋಲೀಸರಿಂದ ಇಷ್ಟು ಅನ್ಯಾಯವಾಗಿದೆಯೆಂದು ಚೀಫ್ ಮಿನಿಸ್ಟರ್‌ಗೆ ಎಷ್ಟೋ ಸಲ ಹೇಳಿದ್ದೇನೆ. ಒಂದು ಗಂಟೆ ಅವರು ನನ್ನ ಹತ್ತಿರ ಡಿಸ್‌ಕಸ್ ಮಾಡಿದ್ದಾರೆ. ನನ್ನ ಪ್ರಾಬ್ಲಮ್ ಸಾಲ್ವ್ ಮಾಡುವುದಕ್ಕೆ ಅವರು ಅಶ್ಯೂರೆನ್ಸ್ ಕೊಟ್ಟಿದ್ದಾರೆ, ಅವರೂ ಏನೂ ಮಾಡಲಿಲ್ಲ. ಇದಕ್ಕೆಲ್ಲಾ ಕಾರಣ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಮಿನಿಸ್ಟರ್ ನಮ್ಮ ಕ್ಷೇತ್ರದಲ್ಲಿ ಇಂಟರ್‌ಫಿಯರ್ ಆಗುವುದು. ಇದರಿಂದ ಅಲ್ಲಿ ನಮಗೆ ಏನು ಫ್ರೀಡಂ ಇಲ್ಲ, ನಾನು ಎಲೆಕ್ಟ್ ಆಗಿ ಬಂದಿದ್ದೇನೆಯೋ ಅಥವಾ ನಾಮಿನೇಟೆಡ್ ಎಂ.ಎಲ್.ಎ. ನೋ ನನಗೆ ಗೊತ್ತಿಲ್ಲ. ಅಲ್ಲಿ ಏನೂ ಒಂದು ಕೆಲಸ ಮಾಡುವುದಿಲ್ಲ. ಲೇಬರ್ ಮಿನಿಸ್ಟರ್ ಇದ್ದಾರೆ ಕೇಳಿಬಿಡಿ. ಕೆ.ಜಿ.ಎಫ್. ನಲ್ಲಿ ಐ.ಟಿ.ಐ. ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಇದೆ. ಕೋಲಾರದಲ್ಲಿರುವ ಎಂ.ಎಲ್.ಎ. ಅಲ್ಲಿ ಮೆಂಬರ್ ಆಗಿರುತ್ತಾರೆ, ಬಂಗಾರಪೇಟೆ ಎಂ.ಎಲ್.ಎ. ಅಲ್ಲಿ ಮೆಂಬರ್ ಆಗಿರುತ್ತಾರೆ. ಬಂಗಾರಪೇಟೆಯಲ್ಲಿರುವ ಮುನಿಸಿಪಲ್ ಪ್ರೆಸಿಡೆಂಟ್ ಅಲ್ಲಿ ಮೆಂಬರ್ ಆಗಿರುತ್ತಾರೆ. ಆದರೆ ಲೋಕಲ್ ಎಂ.ಎಲ್.ಎ. ಅಲ್ಲಿ ಮೆಂಬರ್ ಆಗಿರುವುದಿಲ್ಲ. ಇದನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಮಿನಿಸ್ಟರ್ ಮಾಡಿದ್ದಾರೆ. ಲಾಸ್ಟ್ ವೀಕ್ ಬಂಗಾರಪೇಟೆಯಲ್ಲಿ ಒಂದು ಉರುಸ್ ಫಂಕ್ಷನ್ ಆಯಿತು. ಆ ಫಂಕ್ಷನ್‌ನಲ್ಲಿ 100 ಬಿಜೆಪಿ ಸದಸ್ಯರನ್ನು ಸೂಪರಿಟೆಂಡೆಂಟ್ ಆಫ್ ಪೋಲೀಸ್ ಅವರು ಅರೆಸ್ಟ್ ಮಾಡಿದ್ದಾರೆ. ಅಲ್ಲಿ ಗ್ರೂಪ್ ಗಲಾಟೆ ಆಯಿತು. ಎರಡು ಗ್ರೂಪ್ ಮೇಲೆ ಅವರು ಆಕ್ಷನ್ ತೆಗೆದುಕೊಳ್ಳಬೇಕು.

ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಸ್ ಮಿನಿಸ್ಟರ್ ಅಲ್ಲಿಗೆ ಬರುತ್ತಾರೆ ಎಂದಿದ್ದಕ್ಕೋಸ್ಕರ 100 ಜನ ಬಿಜೆಪಿ ಸದಸ್ಯರನ್ನು ಅರೆಸ್ಟ್ ಮಾಡಿ ಅವರ ಮೇಲೆ ಕೇಸ್ ಲಿಸ್ಟ್ ಮಾಡಿದ್ದಾರೆ. ಇದು ನಮ್ಮ ತಾಲ್ಲೂಕು, ನಮ್ಮ ಕ್ಷೇತ್ರಕ್ಕೂ ಇವರಿಗೂ ಏನು ಸಂಬಂಧವಿದೆ? ಇವರದು ನಮ್ಮ ಊರು ಇರಬಹುದು, ನಮ್ಮ ಊರಿನವರು ಇವರು ಮಿನಿಸ್ಟರ್ ಆಗಿದ್ದಾರೆ, ತುಂಬಾ ಸಂತೋಷ. ಇವರು ಬಿನ್ನಿಪೇಟೆ ಕ್ಷೇತ್ರದಲ್ಲಿ ಎಲೆಕ್ಟ್ ಆಗಿರುವುದು ಆದರೆ ಅಲ್ಲಿಗೆ ಬಂದು ಇವರು ಏತಕೋಸ್ಕರ ರಾಜಕೀಯ ಮಾಡುತ್ತಾರೆ. ಅವರು ಮಿನಿಸ್ಟರ್ ಆದಮೇಲೆ 10 ಸಾರಿಗಿಂತ ಹೆಚ್ಚು ಸಲ ಕೆ.ಜಿ.ಎಫ್. ಗೆ ಬಂದಿದ್ದಾರೆ. ಒಂದೇ ಒಂದು ಟೈಂನಲ್ಲೂ ಕೂಡ ಲೋಕಲ್ ಎಂ.ಎಲ್.ಎ. ಗೆ ಇಂಟಿಮೇಷನ್ ಕೊಟ್ಟಿಲ್ಲ, ಇಲ್ಲಿ ನೋಡಿ ಈ ಇನ್ವಿಟೇಷನ್ ಕಾರ್ಡ್ ಇದೆ. ಇವರು ಇಂಡಿಪೆಂಡೆನ್ಸ್ ಡೇ ಆಚರಣೆ ಮಾಡಿದ್ದಾರೆ, ಸ್ಪೋರ್ಟ್ಸ್ ಫಂಕ್ಷನ್ ಮಾಡಿದ್ದಾರೆ, ಗೌರ್ನಮೆಂಟ್ ಫಂಕ್ಷನ್ಸ್ ಮಾಡಿದ್ದಾರೆ. ಆದರೆ ಒಂದೇ ಒಂದು ಇನ್ವಿಟೇಷನ್‌ನಲ್ಲೂ ನನ್ನ ಹೆಸರಿಲ್ಲ, ಅವರೇ ಎಂ.ಎಲ್.ಎ. ಆಗಿದ್ದಾರೆ, ಅವರೇ ಮಿನಿಸ್ಟರ್ ಆಗಿದ್ದಾರೆ, ಚೀಫ್ ಮಿನಿಸ್ಟರ್, ಹೋಂ ಮಿನಿಸ್ಟರ್ ಎಲ್ಲಾ ಅವರೇ ಆಗಿದ್ದಾರೆ. ಇದನ್ನು ನೋಡಿದರೆ ನಾನು ಎಲೆಕ್ಟ್ ಆಗಿದ್ದೇನೋ, ಇಲ್ಲವೋ ಅನಿಸುತ್ತದೆ. ಎಲೆಕ್ಟ್ ಆಗಿಲ್ಲ ಎಂದರೆ ಇವತ್ತೇ ನಾನು ರಿಸೈನ್ ಮಾಡುತ್ತೇನೆ. ಅಲ್ಲಿ ಲೋಕಲ್ ಎಂ.ಎಲ್.ಎ.ಗೆ ಮರ್ಯಾದೆ ಇಲ್ಲ ಅಂದಮೇಲೆ ನಾನು ಎಂ.ಎಲ್.ಎ. ಆಗಿ ಏತಕ್ಕೆ ಇರಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ:- ಸ್ಮಾಲ್ ಸ್ಕೇಲ್ ಮಿನಿಸ್ಟರ್‌ರವರು ಬಿಗ್ ಸ್ಕೇಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ನೀವು ಏತಕ್ಕೆ ಹೇಳುತ್ತಿದ್ದೀರಿ? ಅವರು ಹೇಳಲಿ ಬಿಡಿ.

ಶ್ರೀ ನಜೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ರಿಪಬ್ಲಿಕ್ ಡೇ ಫಂಕ್ಷನ್ ಬಗ್ಗೆ ಮತ್ತು ಇಂಡಿಪೆಂಡೆನ್ಸ್ ಡೇ ಫಂಕ್ಷನ್ ಬಗ್ಗೆ ಇನ್ವಿಟೇಷನ್ನನ್ನು ಏನು ತೋರಿಸಿದ್ದಾರೆ, ಅದರ ಬಗ್ಗೆ ಹೇಳುವುದಾದರೆ, ನಾನು ರಿಪಬ್ಲಿಕ್ ಡೇ ಫಂಕ್ಷನ್‌ಗೂ ಹೋಗಿಲ್ಲ, ಇಂಡಿಪೆಂಡೆನ್ಸ್ ಡೇ ಫಂಕ್ಷನ್‌ಗೂ ಹೋಗಿಲ್ಲ, ಅದರಲ್ಲಿ ಹೆಸರುಗಳನ್ನು ಹಾಕಿರಬಹುದು. But I have not attended those functions. He was mentioning about the Superintendent of Police. You can get the information from the people of K.G.F. Earlier, there was lot of law and order problems and tension was created by few people there. After the S.P. has gone there, things are peaceful and people are feeling some kind of peaceful atmosphere in that area. What he means, is that it must have hurt him. He made a mention that in Bangarpet, I attended a Urus ceremony. I am sorry. I have not attended that Urus. I am extremely sorry. I have not attended that Urus function.

ಅಧ್ಯಕ್ಷರು:- ಏನ್ರಿ, ಅವರು ಯಾವುದಕ್ಕೂ ಹೋಗೇ ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಭಕ್ತವಚ್ಚಲಂ:- ಇವತ್ತೂ ಅಲ್ಲಿ ಒಂದು ಫಂಕ್ಷನ್ ಇದೆ. ಇವತ್ತು ಇವರು ಆ ಫಂಕ್ಷನ್‌ಗೆ ಹೋಗುತ್ತಾರೆ, ತಾವೇ ಕೇಳಿ.

ಅಧ್ಯಕ್ಷರು:- ಪ್ರಿಂಟಾಗಿದೆ ಇವರು ಇಲ್ಲೇ ಇದ್ದಾರೆ.

ಶ್ರೀ ಭಕ್ತವಚ್ಚಲಂ:- ಇವರು ಆ ಫಂಕ್ಷನ್‌ಗೆ ಹೋಗುತ್ತಾರೆ; ಕೇಳಿ. ಆಮೇಲೆ ಹೋಗುತ್ತಾರೆ. ಇವತ್ತಿನ ಫಂಕ್ಷನ್‌ಗೂ ಕೂಡ ನನಗೆ ಇನ್ವಿಟೇಷನ್ ಕೊಟ್ಟಿಲ್ಲ.

ಅಧ್ಯಕ್ಷರು:- ಶ್ರೀ ನಜೀರ್ ಅಹಮದ್‌ರವರೆ, ಇವರನ್ನೂ ನಾಲ್ಕಾರು ಫಂಕ್ಷನ್ಸ್‌ಗೆ ಹಾಕಿಸಿ ಇವರು ಎಂ.ಎಲ್.ಎ. ಆಗಿ ಅಷ್ಟೊಂದು ಜನರನ್ನು ಪ್ರತಿನಿಧಿಸುತ್ತಾರೆ.

ಶ್ರೀ ನಜೀರ್ ಅಹಮದ್:- ಭಕ್ತವತ್ಸಲಂರವರ ಹೆಸರನ್ನು ಹಾಕಿಸುವುದಕ್ಕೆ ಹೇಳುತ್ತೇನೆ.

ಶ್ರೀ ಎಂ. ಭಕ್ತವಚ್ಚಲಂ:- ಕಾವೇರಿ ವಿಷಯಕ್ಕೋಸ್ಕರ 1991ರ ಜುಲೈ 26ರಂದು ಎಲ್ಲಾ ಪಕ್ಷಗಳೂ ಕರ್ನಾಟಕ ಪೂರ್ತಿ ಬಂದ್‌ಗೆ ಕರೆ ನೀಡಿದ್ದುವು.

ಶ್ರೀ ಡಿ.ಬಿ. ಚಂದ್ರೇಗೌಡ:- ಇವರನ್ನು ಫಂಕ್ಷನ್ಸ್‌ಗೆ ಹಾಕಿಸಿ ಎಂದು ತಾವು ಆದೇಶಕೊಟ್ಟಿರಿ. ಇವರನ್ನು ಫಂಕ್ಷನ್ಸ್‌ಗೆ ಹಾಕಿಸತಕ್ಕದ್ದು, ಬಿಡತಕ್ಕದ್ದು ಅವರಿಗೆ ಸೇರಿದ್ದೇ? ಅಥವಾ ಶಾಸಕರಿಗೆ ಸೇರಿದ್ದೇ? ಅವರು ಯಾರು ಇವರನ್ನು ಫಂಕ್ಷನ್ಸ್‌ಗೆ ಹಾಕಿಸುವುದಕ್ಕೆ? ಇವರಿಗೆ ಅವರನ್ನು ಹಾಕಿಸಿ ಎಂದು ಹೇಳುವುದು ಸರಿ. ಚುನಾಯಿತ ಪ್ರತಿನಿಧಿ ನನ್ನ ಕ್ಷೇತ್ರದಲ್ಲಿ ಮಂತ್ರಿಗಳು ಬರುವುದಾದರೆ ಅವರನ್ನು ಹಾಕಿಸಿ ಎಂದು ಹೇಳಬಹುದು. ಆದರೆ ಸಂಬಂಧವೇ ಇಲ್ಲದಿರತಕ್ಕ ಮಂತ್ರಿಯವರ ಹತ್ತಿರ ಇವರನ್ನೂ ಫಂಕ್ಷನ್ಸ್‌ಗೆ ಹಾಕಿಸಿ ಎಂದು ಹೇಳುವಂಥ ಪರಿಸ್ಥಿತಿ ಬಂದರೆ ಈ ಜನತಂತ್ರ ವ್ಯವಸ್ಥೆಯೇ ಬುಡಮೇಲು ಆದಂತಾಗುತ್ತದೆ.

ಅಧ್ಯಕ್ಷರು:- ಇಲ್ಲಿ ಸ್ವಲ್ಪ ವ್ಯತ್ಯಾಸವಾಗಿರುವಂತೆ ನನಗೂ ಕಾಣಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಬೇರೆ ವಿಷಯಗಳ ವಿವರ ನನಗೆ ಗೊತ್ತಿಲ್ಲ. ಆದರೆ ಒಬ್ಬ ಶಾಸಕರು ಎದ್ದುನಿಂತು ತಾನು ಸರಿಯಾದ ರೀತಿಯಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗುತ್ತಿಲ್ಲ, ಮತ್ತೆ ಪ್ರತಿಯೊಂದು ಸಂದರ್ಭದಲ್ಲೂ ಮಂತ್ರಿಗಳ ಇಂಟರ್‌ಫಿಯರೆನ್ಸ್ ಇದೆ. ಎಲ್ಲಿ ಯಾವುದೇ ಕಾರ್ಯಕ್ರಮವಾಗಲಿ, ಆ ಇನ್ವಿಟೇಷನ್‌ನಲ್ಲಿ ನನ್ನ ಹೆಸರನ್ನು ಹಾಕಿಸಿಕೊಳ್ಳಬೇಕಾದರೆ ರಿಕ್ವೆಸ್ಟ್ ಮಾಡಿಕೊಳ್ಳುವಂಥ ದುಸ್ಥಿತಿ ಬಂದಿದೆ ಎಂದು ಹೇಳುವಂಥ ಅನೇಕ ಉದಾಹರಣೆಗಳು ನಮ್ಮ ರಾಜ್ಯದಲ್ಲಿವೆ. ನಾನು ತಮ್ಮ ಗಮನಕ್ಕೆ ಒಂದೇ ಒಂದು ಅಂಶವನ್ನು ತರುತ್ತಿದ್ದೇನೆ. ವಿರೋಧ ಪಕ್ಷದಲ್ಲಿರುವವರು ಬಹಳ ಕಡಿಮೆ ಇದ್ದೇವೆ. ನಮ್ಮ ಶಕ್ತಿಮೀರಿ ಕೆಲಸಮಾಡುವಂಥ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲೂ ಸಹ ವಿರೋಧಪಕ್ಷದವರ ಆಕ್ಟಿವಿಟೀಸ್‌ನ್ನು ಹತ್ತಿಕ್ಕತಕ್ಕ ಪ್ರಯತ್ನ, ಷಡ್ಯಂತ್ರ ಆಡಳಿತ ಪಕ್ಷದಿಂದ ಕೆಲವುಕಡೆ ವ್ಯವಸ್ಥಿತವಾಗಿ ನಡೆಯುತ್ತಿದೆ. ಇಂಥ ಅನೇಕ ಅನುಭವಗಳು ನಮ್ಮ ವಿರೋಧಪಕ್ಷದಲ್ಲಿರುವವರಿಗೆ ಬಂದಿವೆ. ಈಗ ನಾನು ಯಾವುದೇ ವಿವರಕ್ಕೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ಅಂಶವನ್ನು ತರುತ್ತಿದ್ದೇನೆ. ದಯವಿಟ್ಟು ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಹೇಳುತ್ತಿದ್ದೇನೆ. ಶಾಸಕರ ಕ್ಷೇತ್ರಗಳಿಗೆ ಮಂತ್ರಿಗಳು ಹೋದಾಗ, ಕಾರ್ಯಕ್ರಮಗಳನ್ನು ಇಟ್ಟಾಗ ಆಯಾಯ ಶಾಸಕರಿಗೆ ತಿಳಿಸಿ ಹೋಗಬೇಕೆಂದು ಒಂದು ಅಭಿಪ್ರಾಯ ಇದೆ. ಕಾರ್ಯಕ್ರಮಗಳಲ್ಲಿ ಭಾಗವಹಿಸುವಂಥ ವಿಚಾರ ಅಥವಾ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಅದನ್ನು ಜವಾಬ್ದಾರಿಯಿಂದ ನಿರ್ವಹಣೆ ಮಾಡುವುದಕ್ಕೆ ಅವಕಾಶ ಕೊಡತಕ್ಕ ವಿಚಾರ ಇನ್ನೊಂದು. ಇಲ್ಲಿ ಎರಡು ವಿಚಾರಗಳ ಬಗ್ಗೆ ಗಮನಹರಿಸಬೇಕು.

ಮೊದಲನೆಯದಾಗಿ, ಕೆಲವು ಸರ್ಕಾರಿ, ಕಾರ್ಯಕ್ರಮಗಳನ್ನು ನಾವೇ ಇಟ್ಟಾಗ ನಾವು ಸ್ಥಳೀಯ ಶಾಸಕರಿಗೆ ಉದ್ಘಾಟನಾ ಕಾರ್ಯ, ಮುಖ್ಯ ಅತಿಥಿಯಾಗಿ ಅಥವಾ ಬೇರೆ ರೀತಿಯಲ್ಲಿ ಅಥವಾ ಅಧ್ಯಕ್ಷತೆ ವಹಿಸುವುದಕ್ಕೆ ಅಥವಾ ಇನ್ನೂ ಮುಂತಾದ ಪ್ರಮುಖ ಪಾತ್ರಗಳಲ್ಲಿ ಕೊಡತಕ್ಕದ್ದು ಅವಶ್ಯಕತೆ ಬಹಳ ಇದೆ.

ಎರಡನೆಯದಾಗಿ, ಖಾಸಗಿಯಾಗಿ ಕೆಲವು ಕಾರ್ಯಕ್ರಮಗಳನ್ನು ಬೇರೆಯವರು ಇಟ್ಟು ಕೊಳ್ಳುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಉರುಸ್ ಕಾರ್ಯಕ್ರಮವನ್ನು ಸರ್ಕಾರದವರೇ ಮಾಡುತ್ತಾರೆಂದು ತಾವು ತಿಳಿದುಕೊಳ್ಳಬಾರದು. ಅದು ಒಂದು ಸ್ಥಳೀಯ ಸಮಿತಿ ಇರಬಹುದು. ಆದರೆ ಇದಕ್ಕೆ ಯಾರನ್ನು ಕರೆಯಬೇಕು, ಯಾರನ್ನು ಕರೆಯಬಾರದೆಂದು ನಾವು ಹೇಳುವುದಕ್ಕಾಗುವುದಿಲ್ಲ, ಈ ವಿಚಾರ ತಮಗೂ ಗೊತ್ತಿದೆ. ಈ ವಿಚಾರದಲ್ಲಿ ಸ್ಥಳೀಯ ಶಾಸಕರನ್ನು ಕರೆಯತಕ್ಕದ್ದು, ಬಿಡತಕ್ಕದ್ದು ಅವರಿಗೆ ಸೇರಿದ್ದು. ಅದೇ ರೀತಿ ಮಂತ್ರಿಗಳನ್ನೂ ಕೂಡ ಕೆಲವು ಸಾರಿ ಕರೆಯುವುದಿಲ್ಲ. ಅವರವರೇ ಮಾಡಿಕೊಳ್ಳುತ್ತಾರೆ. ಅವರವರೇ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುತ್ತಾರೆ. ಅದಕ್ಕೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ.

11.55 ಎ. ಎಂ.

ಆದರೆ ಒಂದು ನೀತಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ಸ್ಥಳೀಯ ಶಾಸಕರು ಏನು ಇರುತ್ತಾರೆ ಅವರಿಗೆ ಗೌರವ ಕೊಡತಕ್ಕಂಥದ್ದು, ಸಮಾರಂಭಗಳಲ್ಲಿ ಭಾಗವಹಿಸತಕ್ಕಂಥದ್ದು ಮುಖ್ಯವಿರುತ್ತದೆ. ಮೊನ್ನೆ ನಾನು ಮಾನ್ಯ ವಿರೋಧಪಕ್ಷದ ನಾಯಕರ ಕ್ಷೇತ್ರಕ್ಕೆ ಹೋಗಿದ್ದೆ. ಮತ್ತೆ ಬೇರೆ ಕೆಲವು ಕ್ಷೇತ್ರಗಳಿಗೂ ನಾನು, ಹೋಗಿದ್ದೆ. ನಾನು ಯಾವಾಗಲೂ ಚಾಚೂತಪ್ಪದೆ ಹೇಳುತ್ತೇನೆ, ಪಕ್ಷಾತೀತವಾಗಿ ಸ್ಥಳೀಯ ಶಾಸಕರನ್ನು ಕರೆಯಬೇಕು. ಅವರು

ಅಧ್ಯಕ್ಷತೆಯನ್ನು ವಹಿಸುವುದಕ್ಕಾಗಲಿ ಅಥವಾ ಉದ್ಘಾಟನೆ ಮಾಡಲಿಕ್ಕೆ ಮತ್ತೊಂದಕ್ಕೆ ಅವರನ್ನು ಕರೆದರೆ ಏನೂ ತಪ್ಪಾಗುವುದಿಲ್ಲ. ಯಾವ ಪಕ್ಷದವರನ್ನು ಗೆಲ್ಲಿಸಬೇಕೆನ್ನತಕ್ಕಂಥದ್ದು ಚುನಾವಣೆ ಕಾಲದಲ್ಲಿ ಜನತೆಗೆ ಬಿಟ್ಟಿರುವ ವಿಚಾರ.

ಶ್ರೀ ಡಿ.ಬಿ. ಚಂದ್ರೇಗೌಡ:- ನಮ್ಮ ಸಮಸ್ಯೆ ಅದಲ್ಲ, ಹಿಸ್ ಮೆಜೆಸ್ಟಿ ಲಾಯಲ್ ಅಪೋಜಿಷನ್‌ದೇ ಈ ಗತಿಯೇ ಹೀಗಾದರೆ ಉಳಿದ ಅಪೋಜಿಷನ್‌ನವರ ಗತಿ ಏನು ಎಂದು?

ಶ್ರೀ ವಾಟಾಳ್ ನಾಗರಾಜ್:- ನಮ್ಮಲ್ಲಿ ಒಬ್ಬರು ಮಂತ್ರಿಗಳು ತಿಂಗಳಿಗೆ ಎರಡು ಸಾರಿ ಬರುತ್ತಾರೆ. ನಾವು ನೋಡುವುದಕ್ಕೆ ಹೋಗುವುದೇ ಇಲ್ಲ. ತಿಂಗಳಿಗೆ ಎರಡುಬಾರಿ ಮಂತ್ರಿಗಳು ಬಂದು ಅಲ್ಲಿ ಕುಳಿತುಕೊಂಡು ಓಡಾಡಿಕೊಂಡುಬಂದರೆ ಬರಲಿ. ಆದರೆ ಸಂಬಂಧಪಟ್ಟ ಶಾಸಕರನ್ನು ಕರೆಯದೆ ಬರುತ್ತೇವೆಂದು ಅವರು ಹೇಳುವುದಾದರೆ ಬಂದು ಹೋಗಿ ಎಂದು ಹೇಳಿಬಿಡುತ್ತೇವೆ, ನಾವೇ ಹೋಗುವುದಿಲ್ಲ. ಏತಕ್ಕೆಂದರೆ, ಅವರು ಬೇರೆ ಬೇರೆ ವಿಚಾರಗಳಿಗೆ ಬರುತ್ತಾರೆ. ನಾವು ಅಲ್ಲಿಗೆ ಏತಕ್ಕೆ ಹೋಗಬೇಕು ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಯಾವುದೇ ಕ್ಷೇತ್ರದಲ್ಲಿ ಪ್ರೈವೇಟ್ ಫಂಕ್ಷನ್ ಆದರೆ ಆ ಶಾಸಕರನ್ನು ಕರೆಯುವುದು ಬಿಡುವುದು ಆ ಸಂಸ್ಥೆಯವರಿಗೆ ಬಿಟ್ಟಿದ್ದು. ಯಾವುದೇ ಶಾಸಕ ಆ ಸ್ಥಿತಿಯಲ್ಲಿ ಇಲ್ಲ, ಅವರು ಕರೆಯಲಿಲ್ಲ ಎನ್ನಿಸಿಕೊಳ್ಳುವ ಸ್ಥಿತಿಯಲ್ಲಿರುವುದು ಅಥವಾ ಅವರು ಕರೆಯದಿದ್ದರೂ ಹೋಗಬೇಕೆಂದು ಕೇಳಿಕೊಳ್ಳತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಸರ್ಕಾರದ ಕಾರ್ಯಕ್ರಮಗಳಲ್ಲಿ ಇದುವರೆಗೆ ನಡೆದುಕೊಂಡು ಬಂದಿರತಕ್ಕಂಥದ್ದು ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಗಳು ನಡೆದುಕೊಂಡು ಬಂದಿರುತ್ತದೆ. ಅಕಸ್ಮಾತ್ ನಾನು ಬರುವುದಕ್ಕಾಗುವುದಿಲ್ಲ ಅದಕ್ಕೋಸ್ಕರ ಕಾರ್ಯಕ್ರಮವನ್ನೇ ಹಾಕಬಾರದು ಎಂದು ಯಾರೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ನಾನು ತಿಳಿದುಕೊಂಡಿರುವಂತೆ ಇದುವರೆಗೆ ನಡೆದುಕೊಂಡು ಬಂದಿರತಕ್ಕಂಥ ಪದ್ಧತಿ ಏನೆಂದರೆ, ಆ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಮಂತ್ರಿಗಳು ಬಂದರೆ ಸರ್ಕಾರಿ ಸಮಾರಂಭಗಳು ವ್ಯವಸ್ಥಿತವಾಗಿ ನಡೆದುಕೊಂಡು ಬಂದಿರುತ್ತದೆ. ಈಗಲೂ ನಡೆಯುತ್ತಿದೆ. ಆದರೆ ಕೆಲವುಕಡೆ ಲೋಪವಾಗುತ್ತಿದೆ. ಅದು ಆಗದಹಾಗೆ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರೈವೈಟ್ ಫಂಕ್ಷನ್ ಬಗ್ಗೆ ಯಾರು ಕೇಳುವುದಕ್ಕೆ ಹೋಗುತ್ತಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ನಾನು ಸುಮಾರು 10-12 ವರ್ಷಗಳಿಂದ ಶಾಸಕನಾಗಿದ್ದೇನೆ. ಬಹುಶಃ ಈ ಮಂತ್ರಿಮಂಡಲದಲ್ಲಿ ಹಿರಿಯಮಂತ್ರಿಗಳನ್ನು ಬಿಟ್ಟರೆ ಕೆಲವರು ಹೊಸದಾಗಿ ಬಂದಿರುವವರ ಹುರುಪು ಏನೊ ಗೊತ್ತಾಗಲಿಲ್ಲ. ಶಾಸಕರ ಕ್ಷೇತ್ರಗಳಲ್ಲಿ ಅವರ ಇಂಟರ್‌ಫಿಯರೆನ್ಸ್ ಬಹಳ ಜಾಸ್ತಿಯಾಗಿದೆ. ನಾನು ಇವತ್ತು ಅವರ ಹೆಸರನ್ನು ಹಿಡಿದು ಮಾತನಾಡುವುದಿಲ್ಲ.

ಮಂತ್ರಿಯವರ ಹತ್ತಿರ, ಚೀಫ್ ಮಿನಿಸ್ಟರ್‌ರವರ ಹತ್ತಿರ ಪರ್ಸನಲ್‌ಆಗಿ ಮಾತನಾಡುತ್ತೇನೆ. ಅವರು ಹೇಳದೆ ಕೇಳದೆ ಬರತಕ್ಕಂಥದ್ದು ಬಹಳ ಜಾಸ್ತಿಯಾಗಿದೆ. ನನಗೂ ಕೆಲವು ಸಾರಿ ಹೀಗೆ ಅನಿಸಿದೆ. ಶಾಸಕರಿಗೆ ಕೆಲಸಮಾಡುವುದಕ್ಕೆ ಕಷ್ಟವಾಗುತ್ತದೆಂದು ಪಾಪ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ಅನುಭವ ನನಗೂ ಆಗಿದೆ. ಇದು ಹೊಸದಾಗಿ ಬಂದಿರುವ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೊ ಗೊತ್ತಿಲ್ಲ. ಇದಕ್ಕೆ ತಾವು ಒಂದು ತಿಳುವಳಿಕೆಯನ್ನು ಕೊಟ್ಟರೆ ಬಹಳ ಒಳ್ಳೆಯದೆಂದು ಭಾವಿಸುತ್ತೇನೆ. ದಯವಿಟ್ಟು ಹೊಸಬರಿಗೆ ಹೇಳಬೇಕೆಂದು ನಾನು ಭಾವಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಶಾಸಕರ ಕ್ಷೇತ್ರಗಳಿಗೆ ಮಾನ್ಯ ಮಂತ್ರಿಗಳು ಹೋದಂಥ ಸಂದರ್ಭದಲ್ಲಿ ಅವರಿಗೆ ತಿಳಿಸತಕ್ಕಂಥಾದ್ದು, ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕಂಥದ್ದು ಇದು ಒಂದು ಭಾಗವಾಯಿತು. ಅದಕ್ಕೂ ಮುಖ್ಯವಾಗಿ ಈ ಸದನದಲ್ಲಿ ಮಾನ್ಯ ಭಕ್ತವತ್ಸಲಂರವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಏನಿದೆ ಅದನ್ನು ಕಳೆದ ಅಧಿವೇಶದಲ್ಲೂ ತಮ್ಮ ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದಾರೆ. ಮಾನ್ಯ ಗೃಹಸಚಿವರ ಗಮನಕ್ಕೂ ಈ ವಿಷಯವನ್ನು ತಂದಿದ್ದಾರೆ. ಇದಷ್ಟೇ ಅಲ್ಲ, ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲೂ ಸಹಿತ ನನಗೆ ರಕ್ಷಣೆ ಇಲ್ಲದಿರುವುದರಿಂದ ನನಗೆ ರಕ್ಷಣೆಯನ್ನು ಕೊಡಿಸಬೇಕೆಂದು ತಮ್ಮಲ್ಲೂ ಕೇಳಿಕೊಂಡಿರುತ್ತಾರೆ. ಈಗಾಗಲೇ ಅವರು 2-3 ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ಗಳಲ್ಲಿ ಬಂದಿದ್ದಾಗ ಅವರಿಗೆ ಸಲಹೆ ಮಾಡಿದೆ, ಇಲ್ಲ ಸ್ಪೀಕರ್‌ರವರಿಗೂ ಅದಕ್ಕೂ ಸಂಬಂಧವಿಲ್ಲ, ನೀವು ಅಟೆಂಡ್‌ಮಾಡಿ, ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ ಎನ್ನತಕ್ಕಂಥ ವಿಚಾರವನ್ನು ಕೂಡ ಅವರು ಹೇಳಿದ್ದಾರೆ. ಮತ್ತೆ ನಜೀರ್ ಅಹಮದ್‌ರವರು, ಯಾವುದೇ ರೀತಿಯಲ್ಲಿ ನನಗೆ ಸಂಬಂಧವಿಲ್ಲವೆಂದು ಹೇಳಿದ್ದಾರೆ. ಅವರ ಸಮಸ್ಯೆ ಏನಿದೆ ಎನ್ನುವುದನ್ನೂ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡತಕ್ಕಂಥ ಅಭಿಪ್ರಾಯದಲ್ಲಿ ಬೇರೆ

ರೀತಿಯಾದ ಅಭಿಪ್ರಾಯವಿದೆ. ಇದರ ಬಗ್ಗೆ ವಿಚಾರಣೆ ನಡೆಸಿ. ಕೆ.ಜಿ.ಎಫ್.ನಲ್ಲಿ ಏನಾಗಿದೆ ಎಂಬುದನ್ನು ತಿಳಿಸಿ ಅವರಿಗೆ ರಕ್ಷಣೆ ಸಿಕ್ಕುವಂತೆ ಮಾಡಬೇಕು ಮತ್ತು ಅವರ ಮೇಲೆ ತಪ್ಪು ಏನಾದರೂ ಇದ್ದಲಿ ಅದು ಈ ಸದನಕ್ಕೆ ಗೊತ್ತಾಗಬೇಕು ಮತ್ತು ರಾಜ್ಯಕ್ಕೂ ಗೊತ್ತಾಗಬೇಕು. ಅವರ ಮೇಲೆ ಕೇಸ್ ಮತ್ತೊಂದು ಇದ್ದರೆ ಅದು ಸಹಿತ ಗೊತ್ತಾಗಲಿ. ಅದರ ಬಗ್ಗೆ ವಿಚಾರಣೆ ನಡೆಸಿ ಶಾಸಕರಾಗಿ ಫಂಕ್ಷನ್ ಮಾಡಲಿಕ್ಕೆ ಅವರಿಗೆ ಆಗುತ್ತಿಲ್ಲವೆನ್ನತಕ್ಕಂಥ ವಿಚಾರವನ್ನು ಹೇಳುತ್ತಿದ್ದಾರೆ. ಅದಕ್ಕೆ ತಾವು ಮಹತ್ವವನ್ನು ಕೊಡಬೇಕೆನ್ನುವುದು ನನ್ನ ಒತ್ತಾಯ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರೇ, ಒಂದು ನೀತಿಯನ್ನು ನಾವು ಒಪ್ಪಲೇಬೇಕು. ಇದು ಪ್ರಜಾಪ್ರಭುತ್ವ. ಮಾನ್ಯ ಸದಸ್ಯರು ಯಾವುದೇ ಪಕ್ಷಕ್ಕೆ ಸೇರಿರಲಿ, ಪಕ್ಷಾತೀತವಾಗಿ ಮುಕ್ತವಾಗಿರತಕ್ಕಂಥ ಒಂದು ವಾತಾವರಣದಲ್ಲಿ ಇರಬೇಕು. ಅವರು ಯಾವುದೇ ವಾತಾವರಣ ಕಲುಶಿತಗೊಳ್ಳಿಸತಕ್ಕಂಥ ವಿಚಾರ ಇರಬಹುದು, ಆ ವಾತಾವರಣಕ್ಕೆ ಒತ್ತಡ ಬರತಕ್ಕಂಥ ವಿಚಾರ ಇರಬಹುದು ಅದರಲ್ಲಿ ಯಾರೂ ಕೂಡ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿ ಆಗಬಾರದು. ಕೆಲವು ಸಂದರ್ಭಗಳಲ್ಲಿ ಶಾಸಕರು ಜನರ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗುತ್ತದೆ. ಏತಕ್ಕೆಂದರೆ, ಒಬ್ಬ ವ್ಯಕ್ತಿ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದುಬಿಟ್ಟರೆ ಆ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಮಾತ್ರವಲ್ಲ ಇಡಿ ರಾಜ್ಯವನ್ನೇ ಪ್ರತಿನಿಧಿಸುತ್ತಾರೆ.

ನಾವು ಈ ಮಾತನ್ನು ಎಷ್ಟೋ ಸಾರಿ ಮಾತನಾಡಿದ್ದೇವೆ. ಇವತ್ತು ರಾಜ್ಯದ ಯಾವುದೇ ಒಂದು ಮೂಲೆಯಲ್ಲಿ ಘಟನೆ ನಡೆದರೆ ಅಲ್ಲಿಗೆ ಮಂತ್ರಿಗಳು ಹೋಗಿಬರತಕ್ಕ ವಿಚಾರ, ಜವಾಬ್ದಾರಿಯ ಹಿನ್ನೆಲೆಯಲ್ಲಿ ಅಡಗಿರುತ್ತದೆ. ಅವರ ಸ್ವಕ್ಷೇತ್ರಕ್ಕೆ ಹೆಚ್ಚಿನ ಗಮನ ಕೊಡತಕ್ಕ ನೀತಿ ಇದರಲ್ಲಿ ಅಡಗಿದೆ. ಈ ವಿಚಾರ ಇಲ್ಲಿ ಮೊದಲ ಸಾರಿ ಚರ್ಚೆಗೆ ಬಂದಿಲ್ಲ, ಅನೇಕ ವರ್ಷಗಳಿಂದ ನಾವು ಕೇಳುತ್ತಿದ್ದೇವೆ. ಅದು ಸರಿಯಾಗುತ್ತಾ ಬಂದಿದೆ. ಆದರೂ ಇನ್ನೂ ಕೂಡ ಅಲ್ಲಲ್ಲಿ ಸಂಪೂರ್ಣ ಸರಿಯಾಗಿಲ್ಲವೆಂದು ಪದೇಪದೇ ಕೇಳಿ ಬರುತ್ತಿದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಲ್ಲೆ. ಮಾನ್ಯ ಭಕ್ತವತ್ಸಲಂ ಅವರು ಘಟನೆಗಳು ನಡೆದಿವೆ, 10-16 ಮರ್ಡರ್ ಕೇಸುಗಳು ಆಗಿವೆ ಎಂದು ಹೇಳುತ್ತಿದ್ದಾರೆ. ಅದು ತನಿಖೆಗೆ ಸಂಬಂಧಪಟ್ಟ ವಿಚಾರ. ಈ ಸಂದರ್ಭದಲ್ಲಿ ಏತಕ್ಕೆ, ಏನು ಎಂದು ನಾನು ಆಡಲಾರೆ. ಅವರು ಹೇಳಿರತಕ್ಕ ಮತ್ತೊಂದು ವಿಚಾರಕ್ಕೆ ಸಣ್ಣ ಕೈಗಾರಿಕಾ ಸಚಿವರು ಉತ್ತರ ಹೇಳಿದ್ದಾರೆ. ಸಾಮಾನ್ಯವಾಗಿ ಜನರು, ನನ್ನ ಅಥವಾ ಬೇರೆ ಮಂತ್ರಿಗಳ ಹೆಸರನ್ನು ಹೇಳದೆ ಕೇಳದೆ ಅಹ್ವಾನ ಪತ್ರಿಕೆಗಳಲ್ಲಿ ಪ್ರಿಂಟ್ ಮಾಡಿಸಿರುತ್ತಾರೆ. ಇಂಥವರು ಅಧ್ಯಕ್ಷತೆ ವಹಿಸುತ್ತಾರೆ, ಇಂಥವರು ಉದ್ಘಾಟನೆ ಮಾಡುತ್ತಾರೆಂದು ಹಾಕಿಕೊಳ್ಳುತ್ತಾರೆ. ಅದು ತಪ್ಪು. ನಾನು ಕಾರ್ಯಕರ್ತರಲ್ಲಿ ವಿನಂತಿಸುತ್ತೇನೆ, ಸಚಿವರ ಒಪ್ಪಿಗೆ ಇಲ್ಲದೆ ಅವರ ಹೆಸರನ್ನು ಅಹ್ವಾನ ಪತ್ರಿಕೆಗಳಲ್ಲಿ ಹಾಕಬಾರದು ಎಂದು. ಏಕೆಂದರೆ, ಸಚಿವರು ಒಪ್ಪಿಗೆ ಕೊಟ್ಟಿದ್ದರೂ ಕಾರ್ಯಕ್ರಮಕ್ಕೆ ಬಂದಿಲ್ಲವೆಂದು ಜನರು ಭಾವಿಸುತ್ತಾರೆ. ನಾನು ಎಷ್ಟೋ ಸಾರಿ ಹೇಳಿದ್ದೇನೆ. ನೀವು ಮಾಡುವ ತಪ್ಪಿಗೆ ಇನ್ನೊಂದು ಸಾರಿ ಪ್ರಿಂಟ್ ಮಾಡಿಸಿ ಎಂದು ಏನೆಂದರೆ, ಸಚಿವರ ಒಪ್ಪಿಗೆ ಪಡೆಯದೆ ಅಹ್ವಾನ ಪತ್ರಿಕೆಯಲ್ಲಿ ಅವರ ಹೆಸರನ್ನು ಪ್ರಿಂಟ್ ಮಾಡಿಸಿದ್ದ ಅಪರಾಧಕ್ಕಾಗಿ ಕ್ಷಮೆ ಕೇಳುತ್ತೇವೆಂದು ಎಂದು ಪ್ರಿಂಟ್ ಮಾಡಿಸಬೇಕು ಎಂದು. ಇಲ್ಲದಿದ್ದರೆ ಜನರಿಗೆ ಹೇಗೆ ಗೊತ್ತಾಗುತ್ತದೆ? ಒಬ್ಬರಿಗೂ ಗೊತ್ತಾಗುವುದಿಲ್ಲ. ಇನ್ನೊಂದು, ಅವರನ್ನು ಕೇಳಿ ಅವರ ಹೆಸರನ್ನು ಅಚ್ಚುಹಾಕಿಸಿ ಅವರು ಹೋಗದಿದ್ದರೆ ಆ ಪ್ರಶ್ನೆ ಬೇರೆ. ನನಗೆ ಗೊತ್ತಿಲ್ಲ ನಾನು ಹೋಗಿಲ್ಲವೆಂಬ ಅಭಿಪ್ರಾಯವನ್ನು ಮಾನ್ಯ ಸಚಿವರು ಹೇಳಿದ ಮೇಲೆ ಅದು ಅವರಿಗೆ ಸಂಬಂಧಪಟ್ಟಿರುವುದಿಲ್ಲ. ಇವತ್ತು ತಾವು ಹೇಳಿದ್ದೀರಿ, ಸಣ್ಣ ಕೈಗಾರಿಕಾ ಸಚಿವರು ಇಂಡಿಪೆಂಡೆಂಟ್ ಇದ್ದಾರೆ ಮತ್ತೊಂದು ಎಂದು. ಇವೆಲ್ಲಾ ತನಿಖೆಗೆ ಸಂಬಂಧಪಟ್ಟ ವಿಚಾರಗಳು. ಆದ್ದರಿಂದ ನಾನು ಇದರಲ್ಲಿ ಏನು ಆಗಿದೆ ಎಂಬ ವಿವರಗಳನ್ನು ಪಡೆದು ನಂತರ ತಮಗೆ ತಿಳಿಸುತ್ತೇನೆ. ಆದರೆ ತಾವು ಕೂಡ ಒಂದು ಮಾತನಾಡಿದ್ದೀರಿ. ಸಮಾರಂಭಕ್ಕೆ ಅವರು ಹೋಗಿಲ್ಲವೆಂದ ಮೇಲೆ ಅದು ಅವರ ಗಮನದಲ್ಲಿ ಇಲ್ಲವೆಂದು ಅರ್ಥ ಬರುತ್ತದೆ. ಈ ಬಗ್ಗೆ ಮಾನ್ಯ ಸಚಿವರೊಡನೆ ಮಾತನಾಡಿ ಎಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡುತ್ತೇನೆ. ಅವರು ಮುಖ್ಯಮಂತ್ರಿಗಳ ಹತ್ತಿರ ಹೋಗಿ, ಇಲ್ಲದಿದ್ದರೆ ನನ್ನ ಹತ್ತಿರ ಬನ್ನಿ ಎಂದು ಹೇಳಿದರೆಂದರು. ಅದಕ್ಕೆ ಉತ್ತರ ಕೊಡಬೇಕೆಂದು ಇದ್ದೆ. ಈಗ ಧರ್ಮಸಿಂಗ್‌ರು ಇಲ್ಲಿ ಇಲ್ಲ. ನಾನು ಈ ವಿಚಾರದಲ್ಲಿ ಗಮನ ಕೊಡಿ ಎಂದು ಗೃಹ ಸಚಿವರಿಗೆ ಹೇಳಿದ್ದೇನೆ. ಇವರನ್ನು ನಾನು ಅವರ ಹತ್ತಿರ ಕಳುಹಿಸಿಕೊಟ್ಟಿದ್ದೇನೆ. ನೀವು ದಯವಿಟ್ಟು ಹೋಗಿ ಮಾತನಾಡಿ ಎಂದು ತಿಳಿಸಿದ್ದೇನೆ. ಅವರೂ ಹೋಗಿ ಮಾತನಾಡಿದ್ದಾರೆ. ಇದು ಒಂದೇ ಅಭಿಪ್ರಾಯ ಇಟ್ಟುಕೊಂಡು ಹೋಗಬಾರದು. ಅಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ಇನ್‌ವೆಸ್ಟಿಗೇಷನ್ ಆಗಬೇಕಾಗಿದೆ. ಅದು ಹೇಗೆ, ಏನು ಎಂದು ಈಗ ವಿವರ ಕೊಡುವುದಕ್ಕಾಗುವುದಿಲ್ಲ. ಅದು ಒಂದೊಂದು ಕೇಸಿನ ಮೇಲೆ ಒಂದೊಂದು ರೀತಿ ಹೋಗುತ್ತದೆ. ಸಭೆ, ಸಮಾರಂಭ ಮತ್ತೊಂದು ವಿಚಾರದಲ್ಲಿ ಆಯಾಯ ಕ್ಷೇತ್ರದ ಶಾಸಕರನ್ನು ಬಿಟ್ಟು

ಮಾಡತಕ್ಕದ್ದು, ಅದರಲ್ಲೂ ಸರ್ಕಾರದ ಕೆಲಸಕಾರ್ಯಗಳಿಗೆ ಅವರನ್ನು ಬಿಟ್ಟು ಮಾಡತಕ್ಕದ್ದು ಎಂದೂ ಒಳ್ಳೆಯದಲ್ಲ. ಈ ನೀತಿಯನ್ನು ನಾವು ಅಲ್ಲಿದ್ದಾಗ ಹೇಳಿದ್ದೇವೆ. ಇಲ್ಲಿದ್ದಾಗ ಹೇಳುತ್ತಿದ್ದೇವೆ. ಒಂದೇ ರೀತಿ ನೀತಿ. ಆದರೆ ಸಮಾರಂಭದ ಅಧ್ಯಕ್ಷರು ಯಾರು, ಉದ್ಘಾಟಕರು ಯಾರು ಎಂಬ ವಿವರಗಳಿಗೆ ಹೋಗುವುದು ಬೇಡ ಎಂದು ಹೇಳುತ್ತೇನೆ, ಆದರೆ ಅವರಿಗೆ ಗೌರವ ಕೊಡಬೇಕು. ನಾನು ತಮ್ಮ ಅನುಮತಿ ಪಡೆದು ಬಂದು ವಿಚಾರವನ್ನು ಹೇಳುತ್ತೇನೆ. ಮಂತ್ರಿಮಂಡಲದ ಸದಸ್ಯರು ಯಾರೇ ಇರಬಹುದು, ಹಿರಿಯ ಸಚಿವರ ಬಗ್ಗೆ ಯಾರೂ ಆ ರೀತಿ ಹೇಳಿಲ್ಲ; ಆ ರೀತಿ ಗೊತ್ತಿಲ್ಲದೆ ಇರತಕ್ಕ ವಿಚಾರ ಇದ್ದರೂ ಕೂಡ ಹೊಸ ಸಚಿವರು ಎಂಬ ಭಾವನೆ ಇದ್ದರೆ ಮತ್ತೊಂದು ಸಾರಿ ನನ್ನ ಸಚಿವ ಮಿತ್ರರಿಗೆ ತಿಳಿವಳಿಕೆ ಹೇಳುವ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ.

ಶ್ರೀ ನಜೀರ್ ಅಹಮದ್:- ಮಾನ್ಯ ಸದಸ್ಯರು ಈಗಾಗಲೇ ಇನ್ನೊಂದು ಆರೋಪ ಮಾಡಿದರು. ಕೋಲಾರ ಗೋಲ್ಡ್ ಫೀಲ್ಡ್‌ನಲ್ಲಿರತಕ್ಕ ಅಧಿಕಾರಿಗಳು ನನ್ನ ರಿಲೇಟೀವ್ಸ್ ಇದ್ದಾರೆ ಎಂದು ಹೇಳಿದರು. ಅಲ್ಲಿ ಯಾರೊ ಒಬ್ಬರೂ ನನ್ನ ರಿಲೇಟೀವ್ಸ್ ಇಲ್ಲ, ಜೊತೆಗೆ ಇವತ್ತಿನವರೆಗೂ ಅಫಿಷಿಯಲ್ ಫಂಕ್ಷನ್ಸ್‌ಗೆ ಯಾವುದಕ್ಕೂ ನಾನು ಅಟೆಂಡ್ ಆಗಿಲ್ಲ.

ಶ್ರೀ ಎಂ. ಭಕ್ತವತ್ಸಲಂ:- ಇನ್ನೊಂದು ಮುಖ್ಯವಾದುದನ್ನು ಹೇಳುತ್ತೇನೆ. ಕಾವೇರಿ ಇಶ್ಯೂ ಬಗ್ಗೆ ಹೇಳುವುದಾದರೆ, ಕೆ.ಜಿ.ಎಫ್.ನಲ್ಲಿ 80 ಪರ್ಸೆಂಟ್ ತಮಿಳರು ಇದ್ದಾರೆ. ಕಳೆದ 26ರ ಜುಲೈ 1991ರಂದು ಕರ್ನಾಟಕ ಪೂರ್ತಿ ಬಂದ್ ಆಯಿತು.

ಆ ಟೈಂನಲ್ಲಿ ಕೆ.ಜಿ.ಎಫ್. ಪೂರ್ತಿ ಬಂದ್ ಆಯಿತು. ಲಾಸ್ಟ್ ಡಿಸೆಂಬರ್‌ನಲ್ಲಿ ಬಂದ್ ಆಯಿತು. ಡಿಸೆಂಬರ್‌ನಲ್ಲಿ ಕೆ.ಜಿ.ಎಫ್.ನಲ್ಲಿ ಆಲ್ ಇಂಡಸ್ಟ್ರೀಸ್, ಆಲ್ ಬ್ಯಾಂಕ್, ಆಲ್ ಷಾಪ್ಸ್ ಕಂಪ್ಲೀಟ್ ಬಂದ್ ಆಯಿತು. 26ನೇ ಜುಲೈ 1991ರಲ್ಲಿ ಆಲ್ ಪಾರ್ಟಿ ಬಂದ್ ಆದಾಗ ಕೆ.ಜಿ.ಎಫ್.ನಲ್ಲಿ ಪೂರ್ತಿ ಬಂದ್ ಆದ ಟೈಂನಲ್ಲಿ ನಾನು ಬಂದು ಚೀಫ್ ಮಿನಿಸ್ಟರನ್ನು ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಅಲ್ಲಿ ಮುನಿಸಿಪಲ್ ಆಫೀಸ್ ಮಾತ್ರ ರನ್ ಮಾಡುವುದಕ್ಕೆ ಏನೋ ಪ್ಲಾನ್ ಮಾಡಿದ್ದಾರೆ ಸಾರ್, ಅದರ ಮೇಲೆ ನೀವು ಇಂಟರೆಸ್ಟ್ ಮಾಡಿ ಏನಾದರೂ ಮಾಡಬಹುದು ಎಂದು ನಾನು ಹೇಳಿದ್ದೇನೆ. 25ನೇ ತಾರೀಖು ರಾತ್ರಿ ಕೋಟಿಲಿಂಗನಗೌಡ, ಸೆಕ್ರೆಟರಿ ಅವರಿಗೆ ಈ ಬಂದ್‌ಗೆ ಕಂಪ್ಲೀಟ್ ಸಪೋರ್ಟ್ ಮಾಡಬೇಕು ಎಂದು ಚೀಫ್ ಮಿನಿಸ್ಟರ್ ಹೇಳಿದ್ದಾರೆ. ಕೋಟಿಲಿಂಗನಗೌಡ ಅವರು ಫೋನ್ ಮಾಡಿದ್ದಾರೆ. ಫೋನ್ ಮಾಡಿದ ಮೇಲೆ ಆ ಟೈಂನಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮಿನಿಸ್ಟರ್ ಇಂಟರ್‌ಫಿಯರ್ ಆಗಿ....

ಅಧ್ಯಕ್ಷರು:- ಪುನಃ ಬಂದರಲ್ಲ.

ಶ್ರೀ ಎಂ. ಭಕ್ತವತ್ಸಲಂ:- ಇದು ಇಂಪಾರ್ಟೆಂಟ್ ಮ್ಯಾಟರ್ ಸ್ವಾಮಿ. ಅದಕ್ಕೋಸ್ಕರ ಹೇಳಿದ್ದು.

ಅಧ್ಯಕ್ಷರು:- ಆಲ್‌ರೈಟ್.

ಶ್ರೀ ಎಂ. ಭಕ್ತವತ್ಸಲಂ:- ಮುನಿಸಿಪಲ್ ಆಫೀಸ್ ಮಾತ್ರ ರನ್ ಮಾಡಬೇಕು ಎಂದು ಅವರು ಫೋನ್ ಮಾಡುತ್ತಾರೆ. ನಾನು ಏನು ಮಾಡುವುದು ಸ್ವಾಮಿ ಎಂದು ಕೋಟಿಲಿಂಗನಗೌಡರು ನನ್ನ ಹೆಸರಿನಲ್ಲಿ ಹೇಳಿದ್ದಾರೆ. ಏನು ಸ್ವಾಮಿ, ಡಿಸ್ಟ್ರಿಕ್ಟ್ ಆಫೀಸ್ ಪೂರ್ತಿ ಬಂದ್ ಆಯಿತು, ಬಂದ್‌ಗೆ ಕಂಪ್ಲೀಟ್ ಸಪೋರ್ಟ್ ಮಾಡುತ್ತಾರೆ. ಕೆ.ಜಿ.ಎಫ್‌ನಲ್ಲಿ ತಮಿಳಿನವರಿದ್ದಾರೆ, ಮುನಿಸಿಪಾಲಿಟಿ ಆಫೀಸ್ ಮಾತ್ರ ರನ್ ಮಾಡುತ್ತೇವೆ ಎಂದರೆ ಕೆ.ಜಿ.ಎಫ್. ಜನರ ಮೇಲೆ ಬ್ಯಾಡ್ ಒಪೀನಿಯನ್ ಬರುತ್ತದೆ ಎಂದು ನಾನು ಕೋಟಿಲಿಂಗನಗೌಡರನ್ನು ನೆಕ್ಸ್‌ಡೇ ಬಂದು ಕೇಳಿದೆ. ಅದಕ್ಕೆ ಅವರು ಹೇಳಿದರು, ಇದು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮಿನಿಸ್ಟರ್ ಎಂಟರ್ ಆಗಿದ್ದಾರೆ ಎಂದು. ವೀಕೋಟಾ ಆಂಧ್ರ ಪ್ರದೇಶದಲ್ಲಿದೆ ಸ್ವಾಮಿ. ಅಲ್ಲಿ ಕೌನ್ಸಿಲರ್ಸ್ ಎಲ್ಲಾ ಬ್ಯಾಕಿಂಗ್ ಮಾಡಿದ್ದಾರೆ. ಇಲ್ಲಿಂದ ನಮ್ಮ ಸ್ಟೇಟ್ ಪೋಲೀಸ್ ಹೋಗಿ ಅಲ್ಲಿಂದ ಕರೆದುಕೊಂಡು ಬಂದು ಮೀಟಿಂಗ್ ರನ್ ಮಾಡುತ್ತಾರೆ. ಇದು ಹೇಗೆ ಸ್ವಾಮಿ ಎಂದು ಕೇಳಿದಾಗ ಕೋಟಿಲಿಂಗನಗೌಡರು ಹೇಳುತ್ತಾರೆ......

ಅಧ್ಯಕ್ಷರು:- ಭಕ್ತವತ್ಸಲಂ....

ಶ್ರೀ ವಾಟಾಳ್ ನಾಗರಾಜ್:- ಕರ್ನಾಟಕ ಬಂದ್ ಆಗಬೇಕು ಎಂಬುದು ಸರ್ವಪಕ್ಷಗಳ ಬೆಂಬಲದಿಂದ ಆಗಿದ್ದು. ಕೆ.ಜಿ.ಎಫ್. ಎಂದರೆ ತಮಿಳುನಾಡು ಎಂದು ನಮ್ಮ ಸ್ನೇಹಿತರು ತಿಳಿದುಕೊಂಡಿದ್ದಾರೆ. ಅಲ್ಲೇ ತಾಪತ್ರಯ ಬಂದಿರುವುದು. ಕೆ.ಜಿ.ಎಫ್. ಕರ್ನಾಟಕದ್ದು ಎಂದು ತಿಳಿದುಕೊಳ್ಳಬೇಕು ಅವರು.

ಅಧ್ಯಕ್ಷರು:-ರಾಜ್ಯಪಾಲರ ಭಾಷಣದಲ್ಲಿ ಇದು ಯಾವುದೂ ನಮೂದಾಗಿಲ್ಲ.

ಶ್ರೀ ಎಂ. ಭಕ್ತವಚ್ಚಲಂ:- ಇಲ್ಲ ಸ್ವಾಮಿ. ನಮಗೆ ಇದೇ ಸಮಯ ಸಿಕ್ಕಿದೆ. ಬೇರೆ ಸಮಯ ಸಿಕ್ಕಿಲ್ಲ.

ಅಧ್ಯಕ್ಷರು:- ನೀವು ಯಾವಾಗಲೂ ನನ್ನನ್ನು ಕೇಳಲಿಲ್ಲ ಭಾಷಣ ಮಾಡುತ್ತೇನೆ ಎಂದು. ನಾನು ನಿಮ್ಮ ಕಡೆ ನೋಡುತ್ತಾ ಇರುತ್ತೇನೆ.

ಶ್ರೀ ಎಂ. ಭಕ್ತವಚ್ಚಲಂ:- ಲಾಸ್ಟ್ ಟೈಂ ಹೇಳುವುದಕ್ಕೇ ನನಗೆ ಟೈಂ ಕೊಡಲಿಲ್ಲ. ಅದಕ್ಕೋಸ್ಕರ ಮಾತನಾಡುತ್ತೇನೆ.

ಅಧ್ಯಕ್ಷರು:- ಈಗ ಒಂದು ಕೆಲಸಮಾಡಿ. ಗೃಹ ಸಚಿವರ ಡಿಮ್ಯಾಂಡ್ ಬರುತ್ತದೆ. ಅವತ್ತು ನಿಮ್ಮನ್ನು ಕರೆಯುತ್ತೇನೆ. ಅವತ್ತು ನೀವು ಅಸೆಂಬ್ಲಿಯಲ್ಲಿ ಇರಿ.

ಶ್ರೀ ವಾಟಾಳ್ ನಾಗರಾಜ್:- ತಮಗೆ ಹೇಳುವುದಾದರೆ ಕೆ.ಜಿ.ಎಫ್.ನಲ್ಲಿ ಕನ್ನಡಿಗರೇ ಉಳಿಯುವ ಹಾಗಿಲ್ಲ. ಆ ಪರಿಸ್ಥಿತಿಯಾಗಿದೆ. ತಾವು ಸರ್ಕಾರದವರು ನೋಡಬೇಕು. ಯಾರ ಬಗ್ಗೆ ಮಾತನಾಡುವುದಲ್ಲ. ಸ್ವಲ್ಪ ತಾವು ನೋಡಬೇಕು. ಅಲ್ಲಿ ಏನು ನಡೆದಿದೆ ಎಂದು ತಾವು ನೋಡಬೇಕು.

ಶ್ರೀ ಹರ್ಷಕುಮಾರಗೌಡ:- ಮೈಸೂರಿನಲ್ಲಿ ರಕ್ಷಣೆ ಕೊಟ್ಟಿದ್ದೀರಿ. ಊಟಿಯಲ್ಲೇ ಕೊಲೆ ಮಾಡಿರುವುದು. ಮೈಸೂರಿನಲ್ಲಿ ರಕ್ಷಣೆ ಕೊಡಿ ತಮಿಳರಿಗೆ......

ಶ್ರೀ ವಾಟಾಳ್ ನಾಗರಾಜ್:- ನಿಮಗೆ ಹೇಳುವುದಾದರೆ ತಮಿಳುನಾಡಿನಲ್ಲಿ ಕನ್ನಡಿಗರಿಗೆ ರಕ್ಷಣೆ ಕೊಡಲಿಲ್ಲ. ಇವರು ಏನು ತಿಳಿಮುಕೊಂಡಿದ್ದಾರೆ ಎಂದರೆ ಕೆ.ಜಿ.ಎಫ್. ಎಂದರೆ ತಮಿಳುನಾಡು ಎಂದು ತಿಳಿದುಕೊಂಡಿದ್ದಾರೆ.

(ಗೊಂದಲ)

ಶ್ರೀ ಎಂ. ಭಕ್ತವಚ್ಚಲಂ:- ಕೆ.ಜಿ.ಎಫ್.ನಲ್ಲಿರುವವರು ಕರ್ನಾಟಕದವರೇ ಅವರು. ಅವರು ಕರ್ನಾಟಕ ಭಾಷೆಗೆ ಸಪೋರ್ಟ್ ಮಾಡುತ್ತಾರೆ. ಭಾಷೆಗೆ ಎಲ್ಲದಕ್ಕೂ ಸಪೋರ್ಟ್ ಮಾಡುತ್ತಾರೆ.

ಅಧ್ಯಕ್ಷರು:- ಕಾವೇರಿಗೂ ಸಪೋರ್ಟ್ ಮಾಡುತ್ತಿದ್ದಾರೆ.

ಶ್ರೀ ಎಂ. ಭಕ್ತವಚ್ಚಲಂ:- ಹೌದು ಸಾರ್.

ಅಧ್ಯಕ್ಷರು:- ಸರಿ, ಮುಗಿಸಿ ಈಗ.

Sri M.BHAKTHAVACHALAM:- A comprehensive development plan should be implemented to meet....

ಅಧ್ಯಕ್ಷರು:-ಭಾಷಣವನ್ನು ಓದುತ್ತಿದ್ದೀರಲ್ಲ!

ಶ್ರೀ ವಾಟಾಳ್ ನಾಗರಾಜ್:- ಅಷ್ಟುಹೊತ್ತಿನಿಂದ ಓದಿದ್ದಾರೆ. ನಾವೇನೂ ಮಾಡುವುದಕ್ಕೆ ಹೋಗಿಲ್ಲ. ಅಷ್ಟು ಹೊತ್ತಿನಿಂದ ಅವರು ಬರೆದುಕೊಂಡು ಓದುತ್ತಿದ್ದಾರೆ. ತಾವು ಅವಕಾಶ ಕೊಟ್ಟರೆ ಓದಲಿ.

ಅಧ್ಯಕ್ಷರು: ಸಣ್ಣ ಕೈಗಾರಿಕೆ ಮಂತ್ರಿಗಳ ಮೇಲೆ ಬಹಳ ಚೆನ್ನಾಗಿ ಕನ್ನಡದಲ್ಲಿ ಹೇಳಿದಿರಿ.

ಶ್ರೀ ಎಂ. ಭಕ್ತವಚ್ಚಲಂ:- ಡೆವಲಪ್‌ಮೆಂಟ್‌ಗು ಇನ್ನೂ ಸ್ವಲ್ಪ ಹೇಳಬೇಕು ಸ್ವಾಮಿ.

A comprehensive development plan should be implemented to meet acute shortage of drinking water at K.G.F.

ಅಧ್ಯಕ್ಷರು:- ಓದುವುದಕ್ಕೆ ರೂಲ್ಸ್ ಪ್ರಕಾರ ಅವಕಾಶ ಇಲ್ಲ. ನಿಮಗೆ ತಿಳಿದುದನ್ನು ಹೇಳಬೇಕಷ್ಟೆ ಇಲ್ಲಿ.

ಶ್ರೀ ವಾಟಾಳ್ ನಾಗರಾಜ್:- ಬಾಯಿಗೆ ಬಂದ ಹಾಗೆ?

ಅಧ್ಯಕ್ಷರು:- ತಿಳಿದುದನ್ನು ಹೇಳಬೇಕು ಅಷ್ಟೆ. ನಿಮಗೆ ತಿಳಿದುದನ್ನು ಎಕ್ಸ್‌ಟೆಂಪೋರ್ ಮಾತನಾಡಬೇಕು. ಬಾಯಿಯಿಂದ ಹೇಳಬೇಕು, ಓದಬಾರದು.

ಶ್ರೀ ಎಂ. ಭಕ್ತವತ್ಸಲಂ:- ಸ್ವಲ್ಪ ಇದೆ ಸಾರ್. A Government college should be opened at K.G.F. A Fire-Station should be opened at K.G.F.

MR. SPEAKER:- 'Fire extinguishing centre' ಇರಬೇಕು. 'Fire Station' ಅಲ್ಲ. K.G.F. is sufficiently on fire now.

ಶ್ರೀ ಎಂ. ಭಕ್ತವಚ್ಚಲಂ:- ಅಲ್ಲಿ ಬಿ.ಜಿ.ಎಂ.ಎಲ್. ಇದೆ. ಬಿ.ಇ.ಎಂ.ಎಲ್. ಇದೆ. ದೊಡ್ಡ ಫ್ಯಾಕ್ಟರಿಗಳಿವೆ. Fire Staion ಇಲ್ಲ, ಅದಕ್ಕೋಸ್ಕರ ಕೇಳುತ್ತಿದ್ದೇನೆ. Salaries of Government Teachers and all other staff must be paid on time. KGF General Hospital must be upgraded and Blood Bank should be opened. M.G.R.Mid-day Meal scheme should be implemented in the State of Karnataka.

ಶ್ರೀ ವಾಟಾಳ್ ನಾಗರಾಜ್:- ಏಕೆ ಸ್ವಾಮಿ. ಈ ವ್ಯವಹಾರ ಸರಿಯಿಲ್ಲ, ಎಂಜಿಆರ್‌ಗೂ ರಾಜ್ಯಕ್ಕೂ ಏನು ಸಂಬಂಧ? ಏನು ಇವರು ರಾಜಕೀಯ ಮಾಡುತ್ತಿದ್ದಾರೆ? ಇದು ಸರಿಯಿಲ್ಲ, ಕನ್ನಡ ಮಿಡ್-ಡೇ ಮೀಲ್ ಊಟ ಮಾಡಬೇಕೇ ಹೊರತು ಎಂಜಿ ಆರ್ ಮಿಡ್-ಡೇ ಮೀಲ್ ಬೇಡ.

ಅಧ್ಯಕ್ಷರು:- ಭಕ್ತವಚ್ಚಲಂ ಅವರೇ ಎಂಜಿಆರ್ ಬಿಟ್ಟು ಬಿಟ್ಟು ಬಂಗಲಾರಪ್ಪ ಮಿಡ್ ಡೇ ಮೀಲ್ ಎಂದು ಹೇಳಿರಿ.

ಶ್ರೀ ಎಂ. ಭಕ್ತವಚ್ಚಲಂ:- ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರ ಮಿಡ್ ಡೇ ಮೀಲ್ ಮಾಡಿಸ್ವಾಮಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಒಂದು ವಿಚಾರವನ್ನು ನಾನು ಇಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತೇನೆ. ನಿನ್ನೆ ಸಂಜೆವಾಣಿ ಪತ್ರಿಕೆಯಲ್ಲಿ ಒಂದು ಜಾಹಿರಾತು ಬಂದಿದೆ. ಆ ಜಾಹಿರಾತನ್ನು ಬೆಂಗಳೂರು ಮಹಾನಗರ ಪಾಲಿಕೆಯವರು ಹೊರಡಿಸಿದ್ದಾರೆ. ಅದರಲ್ಲಿ ಇಂದಿರಾಗಾಂಧಿಯವರ ಮತ್ತು ರಾಜೀವ ಗಾಂಧಿಯವರ ಭಾವಚಿತ್ರ ಇದೆ. ಅವರು ಈ ರಾಷ್ಟ್ರದ ಪ್ರಧಾನಿಗಳಾಗಿದ್ದವರು. ಅದರಲ್ಲಿ ಒಂದು ಕಾರ್ಯಕ್ರಮ ಇದೆ. ಮಹಾನಗರ ಪಾಲಿಕೆ ವತಿಯಿಂದ ಸೈಟ್‌ಗಳನ್ನು ಹಂಚತಕ್ಕ ಕಾರ್ಯಕ್ರಮ. ಮಾಜಿ ಮುಖ್ಯಮಂತ್ರಿಗಳಾದ ಗುಂಡೂರಾವ್ ಅವರು, ಜಾಫರ್ ಷರೀಫ್‌ಅವರು ಸೈಟುಗಳನ್ನು ಹಂಚುತ್ತಾರೆಂದೂ ಇದೆ. ಕೆಲವು ಶಾಸಕರ ಹೆಸರಗಳೂ ಅದರಲ್ಲಿ ಇದೆ. ಆ ಜಾಹಿರಾತಿನ ಬಲಗಡೆ ಎಂಜಿಆರ್ ಅವರ ದೊಡ್ಡ ಫೋಟೋ ಅಚ್ಚು ಮಾಡಿದ್ದಾರೆ. ಮಹಾನಗರ ಪಾಲಿಕೆಯವರು ಎಂದಿನಿಂದ ಈ ಪದ್ಧತಿ ಪ್ರಾರಂಭ ಮಾಡಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕು. ನನಗೆ ಎಂಜಿಆರ್ ಅವರ ಬಗ್ಗೆ ಅಗೌರವ ಇಲ್ಲ. ಅವರು ಸಿನಿಮಾರಂಗದಲ್ಲಿ ಇದ್ದಾಗ ಅವರ ಚಿತ್ರಗಳನ್ನು ನಾನು ನೋಡಿದ್ದೇನೆ. ಆದರೆ ನಮ್ಮ ರಾಜ್ಯದಲ್ಲಿ ಇವತ್ತಿನ ಪರಿಸ್ಥಿತಿಯಲ್ಲಿ ಎಂಜಿಆರ್ ಅವರ ಫೋಟೋ ಹಾಕುವುದರಲ್ಲಿ ಏನು ಅರ್ಥ ಇದೆ? ನನಗೆ ಅರ್ಥ ಆಗುವುದಿಲ್ಲ ಸ್ವಾಮಿ. ನಿಮ್ಮ ಪಾರ್ಟಿಗೆ ಎಐಎಡಿಎಂಕೆ ಸಪೋರ್ಟ್ ಇದೆ ಎನ್ನುವುದು ಇಲ್ಲೇ ಗೊತ್ತಾಯಿತಲ್ಲವೇ? ಇಷ್ಟೆಲ್ಲಾ ಆದ ಮೇಲೆ ಕೂಡಾ ರಾಜ್ಯಪಾಲರ ಭಾಷಣಕ್ಕೆ ಸಪೋರ್ಟ್ ಮಾಡುತ್ತಾರೆಂದರೆ ನಾವು ಇನ್ನೇನು ಕೇಳುವುದು?

ಶ್ರೀ ಎಸ್. ಬಂಗಾರಪ್ಪ:- ಇವತ್ತು ಎಂಜಿಆರ್ ಅವರ ಬಗ್ಗೆ ಯಾವ ರೀತಿ ಗೌರವ ಇದೆ ಎನ್ನುವ ಮಾತನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಅವರ ಬಗ್ಗೆ ಅಪಾರವಾದ ಗೌರವ ನಮಗಿದೆ, ನಮ್ಮ ಸರ್ಕಾರಕ್ಕೆ ಇದೆ, ನಿಮಗೂ ಇದೆ, ನಿಮ್ಮೆಲ್ಲರಿಗೂ ಇದ್ದೇ ಇದೆ.

ಎಂಜಿಆರ್ ಅವರು ಜೀವಂತ ಇದ್ದಾಗ ಹಾಗೂ ಅವರು ನಿಧನರಾದ ಸಂದರ್ಭದಲ್ಲಿ ತಮಿಳುನಾಡಿನ ಜನತೆ ಅಷ್ಟೇ ಅಲ್ಲ, ರಾಷ್ಟ್ರವೇ ಅವರಿಗೆ ಕೊಟ್ಟಂತಹ ಗೌರವದ ಬಗ್ಗೆ ನಾವು ತಿಳಿದುಕೊಂಡಿದ್ದೇವೆ, ನೋಡಿದ್ದೇವೆ. ಇವತ್ತಿನ ದಿವಸ ಸೈಟ್ ಹಂಚತಕ್ಕ ಕಾಲದಲ್ಲಿ ಮಹಾ ನಗರಪಾಲಿಕೆಯವರು ಅವರ ಭಾವಚಿತ್ರವನ್ನು ಹಾಕಿದರೆ ತಪ್ಪೇನಿಲ್ಲ.

ನನ್ನ ಪ್ರಕಾರ ತಪ್ಪು ಎಂದು ಕಾಣಿಸುವುದಿಲ್ಲ. ಅವರು ಜೀವಂತ ಇದ್ದಾಗ ಗೌರವ ಕೊಡುತ್ತೇವೆ ಅಥವಾ ಇಲ್ಲದಿದ್ದಾಗ ಗೌರವ ಕೊಡುವುದಿಲ್ಲ ಎನ್ನುವುದಲ್ಲ. ಗೌರವ ಕೊಡಬಾರದು ಎಂದು ಹೇಳಿಲ್ಲ. ಆದರೆ ಇದೆಲ್ಲಾ ಏಕೆ ಮಾಡುತ್ತಾರೆಂದು, ಅಭಿಪ್ರಾಯ ಏನು ಎನ್ನುವುದನ್ನು ಸುಮ್ಮನೆ ತಾವು ಕೇಳಿದ್ದೀರಿ. ಬಡವರಿಗೆ ಸೈಟ್ ಕೊಡುವ ಸಂದರ್ಭದಲ್ಲಿ...

ಶ್ರೀ ವಾಟಾಳ್ ನಾಗರಾಜ್:- ತಮ್ಮ ಪ್ರಕಾರ ಸರ್ಕಾರಿ ಕಾರ್ಯಕ್ರಮಗಳಲ್ಲಿ ಬೇರೆಯವರ ಫೋಟೋಗಳನ್ನೂ ಹಾಕಿಕೊಳ್ಳಬಹುದಲ್ಲವೇ? ಇದು ಸರಿಯಲ್ಲ. ಹಾಗಾದರೆ ಒಂದು ನೀತಿ ಮಾಡಿ, ಇದು ಸಾಧಾರಣ ಪ್ರಶ್ನೆ ಅಲ್ಲ. ನಾಳೆ ಕರುಣಾನಿಧಿಯವರ, ಜಯಲಲಿತಾರವರ, ಜೋಷಿಯವರ ಫೋಟೋ ಹಾಕುತ್ತಾರೆ. ನನಗೆ ತಮ್ಮ ಬಗ್ಗೆ ಗೌರವ ಇದೆ. ಆದರೆ ಇದನ್ನು ನಾನು ಒಪ್ಪುವುದಿಲ್ಲ. ಇದು ತಮ್ಮ ಸರ್ಕಾರದ ಅಭಿಪ್ರಾಯವಾದರೆ ಖಂಡತುಂಡಾಗಿ ಇದನ್ನು ನಾನು ಸಂಪೂರ್ಣ ವಿರೋಧಿಸುತ್ತೇನೆ.

ಶ್ರೀ ಪಿ. ಜಿ.ಆರ್. ಸಿಂಧ್ಯ:- ಮಹಾನಗರಪಾಲಿಕೆಯ ಜಾಹಿರಾತಾದರೆ ಇದು ಸರ್ಕಾರದ ಖರ್ಚೇ. ಸರ್ಕಾರದ ಖರ್ಚಿನಲ್ಲಿ ರಾಜೀವಗಾಂಧಿಯವರ, ಇಂದಿರಾಗಾಂಧಿಯವರ ಭಾವಚಿತ್ರವನ್ನು ಹಾಕಿದ್ದಾರೆ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಇದಕ್ಕೆ ಒಂದು ಬೆಲೆ ಬೇಡವೇ? ಸರ್ಕಾರಿ ಸಮಾರಂಭಗಳಲ್ಲಿ ಈ ರೀತಿ ಒಪ್ಪುವುದು ಸರಿಯಾಗುವುದಿಲ್ಲ. ಹಾಗಾದರೆ ಕರ್ನಾಟಕ ಏಕೆ ಇರಬೇಕು?

ಶ್ರೀ ಎಂ. ಭಕ್ತವಚ್ಛಲಂ:- ಏಐಎಡಿಎಂಕೆ ಕೌನ್ಸಿಲರ್ ಅವರು.

ಶ್ರೀ ವಾಟಾಳ್ ನಾಗಾರಾಜ್:- ಯಾರಾದರೇನು? ಈ ಅವಿವೇಕ ಸರಿಯಲ್ಲ. ಹಾಗಿದ್ದರೆ ಆ ನಗರ ಸಭೆಯನ್ನು ರದ್ದು ಮಾಡಿ.

ಶ್ರೀ ಎಂ. ಭಕ್ತಿಮಚ್ಛಲಂ:- ನಗರ ಸಭೆಗೂ ಅದಕ್ಕೂ ಸಂಬಂಧ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಏಕೆ ಸಂಬಂಧ ಇಲ್ಲ? ಮಹಾನಗರಸಭೆಯವರು ಜಾಹಿರಾತು ಹಾಕಿದ್ದಾರೆ. ಅಲ್ಲಿನ ಕಮೀಷನರ್ ಅದನ್ನು ಹಾಕಿಸಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಈಗ ಎಂಜಿಆರ್ ಅವರ ಬಗ್ಗೆ ಹಾಗೂ ಬೇರೆಯವರ ಬಗ್ಗೆ ಏನು ಗೌರವ ಇದೆಯೋ ಅದನ್ನು ಮುಂದುವರಿಸಿಕೊಂಡು ಹೋಗೋಣ. ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ನಾನು ವಿನಂತಿ ಮಾಡುತ್ತೇನೆ. ವೈಯಕ್ತಿಕವಾಗಿ ಈ ಬಗ್ಗೆ ತಮಗೂ ಅಭ್ಯಂತರ ಇಲ್ಲ. ಗೌರವ ತಮಗೂ ಇದೆ ಎಂದು ನನಗೆ ಗೊತ್ತಿದೆ.

ಏಕೆಂದರೆ ವೈಯಕ್ತಿಕವಾಗಿ ಅಂಥ ವ್ಯಕ್ತಿಗಳ ಬಗ್ಗೆ ವಿರೋಧ ಮಾಡುವುದಕ್ಕೆ ಏನೂ ಕಾರಣ ತಮಗೂ ಇಲ್ಲ, ನಮಗೂ ಇಲ್ಲ. ಒಂದು ಸಮಾರಂಭದಲ್ಲಿ ಅವರು ಭಾವಚಿತ್ರವನ್ನು ಏನು ಹಾಕಿಕೊಂಡಿದ್ದಾರೆ ಅವರು ಎ.ಡಿ.ಎಂ.ಕೆ. ಪಕ್ಷದ ವತಿಯಿಂದ ಗೆದ್ದಿರತಕ್ಕದ್ದು ಕಾರಣ. ಅವರು ಮಹಾನಗರ ಪಾಲಿಕೆ ಸದಸ್ಯರು ಆಗಿರುವುದರಿಂದ ಹಾಕಿ ಕೊಂಡಿದ್ದಾರೆ. ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದರಿಂದ ಹಾಕಿಕೊಂಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದು ಮಹಾನಗರಪಾಲಿಕೆಯ ಅಡ್ವರ್ಟೈಸ್‌ಮೆಂಟ್.

ಶ್ರೀ ಎಸ್. ಬಂಗಾರಪ್ಪ:- ಆಲ್‌ರೈಟ್. ನಾನು ಉಪನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಒಂದು ಸಾರಿ ಹಾಕಿಕೊಂಡರೂ ಕೂಡ ಏನಂತೆ? ನಾವು ಅವರನ್ನು ಕರೆದು ಎಷ್ಟೋ ಸಾರಿ ಸನ್ಮಾನ ಮಾಡುತ್ತೇವೆ, ಮತ್ತೊಂದು ಮಾಡುತ್ತೇವೆ. ಏನೂ ಆಗುವುದಿಲ್ಲ. ಬೇರೆ ಬೇರೆ ಪಕ್ಷದವರು ಬರುತ್ತಾರೆ. ಅದಕ್ಕೆ ನಾನು ನಿಮ್ಮಲ್ಲಿ ವಿನಂತಿಮಾಡುವುದೇನೆಂದರೆ, ಪಕ್ಷಾತೀತವಾಗಿ ಬಡವರ ಕಾರ್ಯಕ್ರಮ ಇರುವಾಗ ಇನ್ನೊಂದೆರಡು ಭಾವಚಿತ್ರ ಹಾಕಿಕೊಂಡರೂ...

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ, ನಾವು ಬಡವರ ಕಾರ್ಯಕ್ರಮಗಳಿಗೆ ಎಂದೂ ವಿರೋಧ ಇಲ್ಲ. ಅವರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಇದೆ. ಯಾವ ಪಕ್ಷದವರು ಬೇಕಾದರೂ ಸರ್ಕಾರದ ಸಮಾರಂಭದಲ್ಲಿ ಅವರವರ ಫೋಟೊ ಹಾಕಿಕೊಳ್ಳುವುದು ಸರ್ಕಾರದ ನೀತಿ ಎಂದು ಅಪ್ಪಣೆ ಕೊಡಿಸಿಬಿಡಿ. ಆಮೇಲೆ ನಡೆಯಲಿ ಅದು. ಅದನ್ನು ಮುಖ್ಯಮಂತ್ರಿಗಳು ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಿಮ್ಮದ್ದೇ ಸ್ವರಾಜ್ಯ ಅಲ್ಲ ಇದು. ತಮಿಳುನಾಡು ಸರ್ಕಾರ ಅಲ್ಲ ಇದು. ಇದು ಕರ್ನಾಟಕ ರಾಜ್ಯ.

ಶ್ರೀ ಎಂ. ಭಕ್ತವತ್ಸಲಂ:- ಅವರಿಗೆ ಭಾರತರತ್ನ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಭಾರತರತ್ನ ಏತಕ್ಕೆ ಕೊಟ್ಟಿರಿ ಎಂದು ಗೊತ್ತು. ಓಟ್ ತೆಗೆದುಕೊಳ್ಳುವುದಕ್ಕೋಸ್ಕರ ಭಾರತರತ್ನ ಕೊಟ್ಟರಂತೆ.

ಅಧ್ಯಕ್ಷರು:- ಪರಸ್ಪರ ವಾಗ್ವಾದಗಳು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ:- ನಂತರ ನಾನು ತಮ್ಮ ಅಪ್ಪಣೆ ಪಡೆದು ಹೇಳತಕ್ಕದ್ದು ಒಂದು. ಒಳ್ಳೆಯ ದೊಡ್ಡ ವ್ಯಕ್ತಿಗಳ ಬಗ್ಗೆ, ಮತ್ತೊಬ್ಬರ ಬಗ್ಗೆ ಯಾವುದೇ ವಿಚಾರ ಮಾತನಾಡುವುದಿಲ್ಲ. ಇವತ್ತು ತಮಿಳು ಭಾಷೆ ಮಾತನಾಡಿರಬಹುದು. ಕನ್ನಡ ಭಾಷೆ ಮಾತನಾಡಿರಬಹುದು. ಯಾರೇ ಇದ್ದರೂ ಕೂಡ ನಾವು ನೂರಾರು ವರ್ಷಗಳಿಂದ ಸಹೋದರರಾಗಿ ಎಲ್ಲ ಕಡೆಯಿಂದ ನಡೆದುಕೊಂಡು ಬಂದಿದ್ದೇವೆ. ಇವತ್ತಿಗೂ ಕೂಡ ನಾವು ಹಾಗೇ ಇದ್ದೇವೆ. ಮುಂದೆ ಕೂಡ ಹಾಗೇ ಹೋಗೋಣ. ಕೆಲವು ಸಾರಿ ಕೆಲವು ವಿಚಾರಗಳು ಹಾಗೆ ಮಧ್ಯೆ ಬಂದಾಗ ಒಂದೊಂದು ಸಾರಿ ಭಿನ್ನವಾಗಿರತಕ್ಕ ಅಭಿಪ್ರಾಯ ಬರತಕ್ಕ ಸಂದರ್ಭ ಬಂದರೂ ಕೂಡ ಅದನ್ನು ನಿಭಾಯಿಸತಕ್ಕವ್ವರಲ್ಲಿ ನಮ್ಮೆಲ್ಲರ ಚಾಣಾಕ್ಷತನ, ಒಗ್ಗಟ್ಟು, ಭವಿಷ್ಯದ ಪೀಳಿಗೆಯ ದೃಷ್ಟಿಯಿಂದ, ತಮಿಳುನಾಡು-ಕರ್ನಾಟಕದ ಸಂಬಂಧದ ಸಹೋದರ ಭಾವನೆ ಇಟ್ಟುಕೊಂಡೇ ಮುಂದೆ ಹೋಗತಕ್ಕ ಸಂದರ್ಭಗಳು ಇವೆ. ಇದನ್ನು ನಾವು ಹತ್ತು ಸಾರಿ ಹೇಳಿದ್ದೇವೆ. ಕನ್ನಡ ಮಾತನಾಡುವವರು ಬೇರೆ ಕಡೆಯೂ ಇರುತ್ತಾರೆ. ನಾವು ಒಟ್ಟಿಗೆ ಹೋಗೋಣ. ಅದರ ಬಗ್ಗೆ ಏನೂ ಮಾಡುವುದು ಬೇಡ. ನಾನು ಭಕ್ತವತ್ಸಲಂ ಅವರಲ್ಲಿ ವಿನಂತಿ ಮಾಡುವುದು ಏನೆಂದರೆ ತಮ್ಮ ಭಾಷಣದಲ್ಲಿ ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ; ಮತ್ತೆ ಅದನ್ನು ಬೆಳೆಸಿಕೊಂಡು ಹೋಗುವುದು ಬೇಡ.

ಶ್ರೀ ಎಂ. ಭಕ್ತವತ್ಸಲಂ:- ಲಾಸ್ಟ್ ಪಾಯಿಂಟ್.

ಶ್ರೀ ವಾಟಾಳ್ ನಾಗರಾಜ್:- ತಾವು ಎಂ. ಜಿ. ಆರ್. ಫೋಟೋವನ್ನು ಸರ್ಕಾರಿ ಸಮಾರಂಭದಲ್ಲಿ ಉಪಯೋಗಿಸುತ್ತೇವೆ ಎಂದು ಹೇಳುವುದಾದರೆ ನಾವು ಈ ಸಭೆಯಲ್ಲಿರುವುದಕ್ಕೆ ತಯಾರಿಲ್ಲ. ಇವತ್ತು ನಾವು ಹೋಗುತ್ತೇವೆ. ನನಗೆ ಬಹಳ ನೋವಾಗಿದೆ. ನನಗೆ ವೈಯುಕ್ತಿಕವಾಗಿ ಯಾರ ಬಗ್ಗೆಯೂ ದ್ವೇಷವಿಲ್ಲ. ಈ ತರಹ ತಮಿಳುನಾಡು ರಾಜಕಾರಣಿಗಳನ್ನು ನಮ್ಮ ಸಮಾರಂಭದಲ್ಲಿ ಹಾಕಿಕೊಳ್ಳಬಹುದು ಎಂದು ಹೇಳುವುದಾದರೆ ನಾವು ಏತಕ್ಕೆ ಇರಬೇಕು? ಈ ರಾಜ್ಯವನ್ನು ನೀವು ತಮಿಳುನಾಡಿಗೆ ಮಾರುವುದು ಒಳ್ಳೆಯದು.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳ ಗಮನ ಸೆಳೆಯುವುದು ಏನೆಂದರೆ, ಎಂ.ಜಿ.ಆರ್. ಅವರಿಗೆ ಕೇಂದ್ರ ಸರ್ಕಾರದವರು ಭಾರತ ರತ್ನ ಪ್ರಶಸ್ತಿ ಕೊಟ್ಟಿದ್ದಾರೆ. ಇದೆಲ್ಲಾ ಒಪ್ಪೋಣ. ಅವರು ಚಲನಚಿತ್ರ ಕ್ಷೇತ್ರದಲ್ಲಿ ಬಹಳ ದೊಡ್ಡ ಹೆಸರನ್ನು ಗಳಿಸಿದ್ದರು. ಆದಾದನಂತರ ಬಡವರಿಗೋಸ್ಕರ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅದೆಲ್ಲಾ ಒಪ್ಪೋಣ. ಆದರೆ ನಾನು ಕೇಳತಕ್ಕದ್ದು ಏನೆಂದರೆ, ಬೆಂಗಳೂರು ಮಹಾನಗರಪಾಲಿಕೆ ಸೈಟ್ ಹಂಚತಕ್ಕ ಪ್ರೋಗ್ರಾಂನಲ್ಲಿ ಈ ರೀತಿ ಹಾಕಿಕೊಳ್ಳುವುದು ಸರಿಯೇ? ಕಾಂಗ್ರೆಸ್ ಪಾರ್ಟಿ ಪ್ರೋಗ್ರಾಂ ಆಯಿತು ಎಂದು ಇಟ್ಟುಕೊಳ್ಳಿ. ಅಲ್ಲಿ ನೀವು ಯಾವುದು ಬೇಕಾದರೂ ಹಾಕಿಕೊಳ್ಳಿ. ನಮ್ಮದೇನೂ ಅಭ್ಯಂತರ ಇಲ್ಲ. ಅಥವಾ ಪ್ರಕಟಣೆ ಮಾಡತಕ್ಕ ಸಂದರ್ಭದಲ್ಲಿ ಎ. ಡಿ. ಎಂ. ಕೆ. ಯವರು ಗೆದ್ದಿದ್ದಾರೆ, ಅವರಿಂದ ಪ್ರಕಟಣೆ ಆಗಿದ್ದರೂ ನಮ್ಮದೇನೂ ತಕರಾರಿಲ್ಲ. ಇದು ಮಹಾನಗರ ಪಾಲಿಕೆಯ ಅಡ್ವರ್ಟೈಸ್‌ಮೆಂಟ್. ಅವರ

ಖರ್ಚಿನಲ್ಲಿ, ಸರ್ಕಾರದ ಖರ್ಚಿನಲ್ಲಿ ಇದನ್ನು ಹಾಕತಕ್ಕ ಪ್ರಮೇಯ ಏನಿದೆ? ಕೊನೇಪಕ್ಷ ಇದನ್ನು ಮಾಡಬಾರದು ಎಂದು ಹೇಳುವುದಕ್ಕೂ ನೀವು ತಯಾರಿಲ್ಲವಲ್ಲ.

ಶ್ರೀ ಎಸ್. ಬಂಗಾರಪ್ಪ:- ಮಹಾನಗರಪಾಲಿಕೆಯ ಖರ್ಚು, ಅದು ನಮ್ಮ ಅಕೌಂಟಿಗೆ ಬರುವುದಿಲ್ಲ; ಅವರ ಅಕೌಂಟ್‌ಗೆ ಹೋಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಹಾಗಾದರೆ ಮಹಾನಗರಪಾಲಿಕೆ ಸರ್ಕಾರದ ಅಧೀನದಲ್ಲಿ ಅಲ್ಲವೇ ಸ್ವಾಮಿ ಕೆಲಸ ಮಾಡುವುದು?

ಶ್ರೀ ಎಸ್ ಬಂಗಾರಪ್ಪ:- ಎಂ.ಜಿ.ಆರ್. ಬಗ್ಗೆ ಗೌರವ ನಮ್ಮದು ನಿಮ್ಮದು ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಗೌರವ ಇಟ್ಟುಕೊಳ್ಳಿ. ಸ್ಟೈಟ್ ಹಂಚಿ. ಹಾಗಾದರೆ ಎಂ.ಜಿ.ಆರ್. ಪ್ರತಿಮೆಯನ್ನು ಹಾಕಿಸುತ್ತೀರಾ ಕಾರ್ಪೊರೇಷನ್ ಮುಂದೆ?

ಶ್ರೀ ಎಸ್. ಬಂಗಾರಪ್ಪ:- ಇಂದಿರಾಗಾಂಧಿ ಅವರದು ಹಾಕಿದ್ದಾರೆ. ರಾಜೀವ್ ಗಾಂಧಿ ಅವರದು ಹಾಕಿದ್ದಾರೆ. ಅವರದೂ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಹಾಕಿದ್ದಾರೆ. ಇವತ್ತಿನ ಪರಿಸ್ಥಿತಿ ಹಿನ್ನೆಲೆಯಲ್ಲಿ ಡಿಫೆಂಡ್ ಮಾಡಿಕೊಳ್ಳುವುದಾದರೆ....

ಅಧ್ಯಕ್ಷರು:- ಅದನ್ನು ನೋಡೋಣ. ಅದು ಯಾವುದು ಹಾಕಿದ್ದಾರೆ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಧ್ಯಕ್ಷರೆ, ಸರ್ಕಾರದ ಈ ಧೋರಣೆಯನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ನಾನು ತೀವ್ರವಾಗಿ ಇದನ್ನು ಪ್ರತಿಭಟನೆ ಮಾಡುತ್ತೇನೆ. ಇದೇನಾಗುತ್ತದೆ ಎಂದರೆ, ನಾವು ಒಂದು ಪ್ರಾರಂಭ ಮಾಡಿದರೆ ಇದು ಎಲ್ಲಿ ಅಂತ್ಯವಾಗುತ್ತದೆ ತಾವು ವಿಚಾರ ಮಾಡಿ. ಏನೋ ಬಹಳ ದೊಡ್ಡ ರಾಜಕೀಯ ನಾಯಕರುಗಳಿದ್ದಾರೆ ಎಂದು ಹೇಳಿದರೆ ಒಪ್ಪೋಣ. ಈಗ ರಾಜೀವ್ ಗಾಂಧಿಯವರ ಫೋಟೋ ಹಾಕಿದ್ದೀರಿ. ನಾವೇನಾದರೂ ಅದರ ಬಗ್ಗೆ ಚಕಾರ ಎತ್ತಿದ್ದೇವೆಯೇ ? ನೀವು ಎಲ್ಲ ಕಾರ್ಯಕ್ರಮಗಳಲ್ಲೂ ರಾಜೀವ್ ಗಾಂಧಿಯವರ ಹೆಸರನ್ನು ಹಾಕುತ್ತೀರಿ. ಈಗ ಆಶ್ರಯ ಕಾರ್ಯಕ್ರಮ ಮಾಡುತ್ತಿದ್ದೀರಿ. ಅದರ ಅಡ್ವರ್ಟೈಸ್‌ಮೆಂಟ್‌ಗಳಲ್ಲಿ ಇಂದಿರಾ ಗಾಂಧಿಯವರದು, ರಾಜೀವ್ ಗಾಂಧಿಯವರದು ಫೋಟೋಗಳನ್ನು ಹಾಕಿದ್ದೀರಿ. ಅವರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಏಕೆಂದರೆ, ಅವರು ರಾಷ್ಟ್ರದ ಪ್ರಧಾನಿಗಳಾಗಿದ್ದರು. ಆದರೆ ಎಂ.ಜಿ.ಆರ್. ಅವರದು ಹಾಕುತ್ತೇವೆ ಎಂದು ಹೇಳುವುದಾದರೆ, ದಯವಿಟ್ಟು ಕ್ಷಮಿಸಬೇಕು, ಅದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಧೋರಣೆಯನ್ನು ನಾನು ಬಹಳ ತೀವ್ರವಾಗಿ ಪ್ರತಿಭಟನೆ ಮಾಡುತ್ತೇನೆ. ಇದನ್ನು ಖಂಡನೆ ಮಾಡಿ ಇವತ್ತು ಸದನದಿಂದ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ನಿಲುವನ್ನು ಖಂಡತುಂಡವಾಗಿ ಪ್ರತಿಸಲವೂ ನಾವು ಟೀಕೆ ಮಾಡಿದ್ದೇವೆ.

(ಶ್ರೀ ಪಿ. ಜಿ. ಆರ್. ಸಿಂಧ್ಯವರು ಸಭಾತ್ಯಾಗ ಮಾಡಿದರು. ಅವರನ್ನು ಹಿಂಬಾಲಿಸಿ ಉಳಿದ ಜನತಾದಳ ಪಕ್ಷದ ಸದಸ್ಯರು ಸಹ ಹೊರನಡೆದರು. ಅವರಲ್ಲಿ ಡಾ: ಜೀವರಾಜ ಆಳ್ವ ಅವರು ಸಹ ಇದ್ದರು)

ಅಧ್ಯಕ್ಷರು:- ಭಕ್ತವಚ್ಚಲಂ ಲಾಸ್ಟ್ ಪಾಯಿಂಟ್.

ಶ್ರೀ ಎಸ್. ಬಂಗಾರಪ್ಪ:- ಇದು ಬಹಳ ಚೆನ್ನಾಗಿದೆ. ಅವರು ಸಭಾತ್ಯಾಗ ಮಾಡಿದಾಗ ಡಾ: ಜೀವರಾಜ ಆಳ್ವ ಅವರಿಗೆ ಏನೂ ಗೊತ್ತಿಲ್ಲ. ಅವರು ಬಂದವರು ಹಾಗೆಯೇ ಹೊರಟು ಹೋಗಿಬಿಡುವುದೆ?

SRI M. BHAKTHAVACHALAM:- The photos of former Prime Minister....

MR. SPEAKER:- If you are reading it over, I am not going to allow.

ಶ್ರೀ ಎಂ. ಭಕ್ತವಚ್ಚಲಂ:- ರೀಡಿಂಗ್ ಆದಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು:- ನೀವು ಮಾತನಾಡಿ ಮುಗಿಸಿ. No reading. Only speaking here.

SRI M. BHAKTHAVACHALAM:- The photos of former....

MR. SPEAKER:- Again you are reading. Mr. Bhakthvachalam, you can only quote. You cannot read a speech.

ಶ್ರೀ ಎಂ. ಭಕ್ತವಚ್ಚಲಂ:- ನನ್ನದು ಲಾಸ್ಟ್ ಪಾಯಿಂಟ್ ಏನೆಂದರೆ, ಈ ಅಸೆಂಬ್ಲಿ ಒಳಗೆ ಫಾರ್ಮರ್ ಪ್ರೈಮ್ ಮಿನಿಸ್ಟರ್ ಶ್ರೀಮತಿ ಇಂದಿರಾಗಾಂಧಿ ಮತ್ತು ಶ್ರೀ ರಾಜೀವ್ ಗಾಂಧಿಯವರ ಫೋಟೋಗಳನ್ನು ಇಲ್ಲಿ ಹಾಕಬೇಕು. ಇದು ನನ್ನ ಲಾಸ್ಟ್ ಪಾಯಿಂಟ್. ಇಷ್ಟು ಹೇಳಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಸದನದಲ್ಲಿ ಮಂಡಿತವಾಗಿರತಕ್ಕಂಥ ನಿರ್ಣಯದ ಬಗ್ಗೆ ಚರ್ಚೆ ಏನು ಸುಧೀರ್ಘವಾಗಿ ಆಗಿದೆ, ಇದರ ಬಗ್ಗೆ ಉತ್ತರ ಕೊಡಲು ನಾನು ನಿಂತಿದ್ದೇನೆ. ನಿರ್ಣಯವನ್ನು ಮಂಡನೆ ಮಾಡಿರತಕ್ಕಂಥವರು ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೋಳಿವಾಡ ಅವರು ಮತ್ತು ಹಿರಿಯ ಸದಸ್ಯಣೆಯಾಗಿರತಕ್ಕಂಥ ಶ್ರೀಮತಿ ಮೋಟಮ್ಮನವರು ಅನುಮೋದನೆಯನ್ನು ಕೂಡ ಮಾಡಿದ್ದಾರೆ. ಈ ನಿರ್ಣಯ ಸದನದ ಒಪ್ಪಿಗೆ ಪಡೆಯಬೇಕು ಎನ್ನತಕ್ಕಂಥ ಸಂದರ್ಭದಲ್ಲಿ ನಾನು ಇವತ್ತು ನಿರ್ಣಯ ಮಂಡನೆ ಮಾಡಿರತಕ್ಕವರು, ಅನುಮೋದನೆ ಮಾಡಿರತಕ್ಕ ಮಾನ್ಯ ಸದಸ್ಯರು, ಅಲ್ಲದೆ ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ, ಮತ್ತು ಬೇರೆ ಬೇರೆ ಪಕ್ಷಗಳ ನಾಯಕರು ಹಾಗೂ ಇನ್ನು ಉಳಿದಿರತಕ್ಕಂಥ ಮಾನ್ಯ ಸದಸ್ಯರುಗಳು ಹಲವಾರು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದರ ಮೂಲಕ ತಮ್ಮ ತಮ್ಮ ಅಭಿಪ್ರಾಯಗಳನ್ನು ಇಟ್ಟಿದ್ದಾರೆ. ಇವುಗಳನ್ನು ನಾನು ಎರಡು ಭಾಗವಾಗಿ ವಿಂಗಡಣೆ ಮಾಡುತ್ತೇನೆ. ಒಂದು ಭಾಗ, ಅವರು ಆಡಿರತಕ್ಕಂಥ ಮಾತುಗಳನ್ನು ಸ್ವೀಕಾರ ಮಾಡತಕ್ಕಂಥಾದ್ದು. ಅದು ಅತಿಯಾಗಿದೆ ಎಂದು ನಾನು ಭಾವಿಸುವುದಿಲ್ಲ, ಅವರು ನೇರವಾಗಿ ಸ್ವಾಗತ ಮಾಡತಕ್ಕಂಥ ಮಾತನ್ನು ಆಡುವುದರ ಮುಖಾಂತರ ವಿಷಯಗಳನ್ನು ಪ್ರಸ್ತಾಪ ಮಾಡಿದ್ದರೆ, ಇನ್ನು ಆ ಕೆಲವು ಟೀಕೆಗಳ ಮುಖಾಂತರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಾತಿನ ಧಾಟಿ ಏನೇನೇ ಇರಬಹುದು. ಆದರೆ ವಿಷಯ ಒಳ್ಳೆಯದು ಇದ್ದರೆ, ಧಾಟಿಯನ್ನು ಬದಿಗೊತ್ತಿ ಆ ಟೀಕೆ, ಅವರ ಚಿಂತನೆಯ ಮೂಸೆಯಿಂದ ಒಡಮೂಡಿ ಬಂದಿರತಕ್ಕಂಥ ವಿಷಯವಾಗಿದ್ದು, ನಾನು ಸ್ವೀಕಾರ ಮಾಡತಕ್ಕಂಥ ಅರ್ಹತೆ ಆ ವಿಷಯ ಪಡೆದಿದೆ ಎನ್ನತಕ್ಕಂಥ ದೃಷ್ಟಿಯಿಂದ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಟೀಕೆ ಸಕಾರಣಗಳ ಆಧಾರದ ಮೇಲೆ ಇದ್ದಾಗ ಅದನ್ನು ಸ್ವಾಗತ ಮಾಡತಕ್ಕಂಥ ಹೃದಯ ವೈಶಾಲ್ಯ ಇದಕ್ಕೆ ಅತಿ ಅಗತ್ಯವೆಂದು ನಾನು ಭಾವಿಸುತ್ತೇನೆ. ಸಕಾರಣ ರಹಿತವಾದ ಟೀಕೆ ಇದ್ದರೆ ಅದಕ್ಕೆ ಉತ್ತರ ಕೊಡತಕ್ಕಂಥ ಪ್ರಾಮಾಣಿಕ ಪ್ರಯತ್ನ ಮತ್ತು

12.25 ಪಿ.ಎಂ.

ಅಂತಹ ಟೀಕೆಗಳಿಂದ ದೂರ ಇದ್ದರೆ ಒಳ್ಳೆಯದು ಎನ್ನುವ ಸಲಹೆಯನ್ನು ಇಡತಕ್ಕ ಪ್ರಯತ್ನ ನನ್ನಲ್ಲಿದೆ ಮತ್ತು ದೂರ ಇದ್ದರೆ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ. ಇವತ್ತು ಶ್ರೀಮಾನ್ ಕೋಳಿವಾಡರವರು, ಅವರ ಹಲವಾರು ವರ್ಷಗಳ ಈ ಸದನದ ಅನುಭವ, ರಾಜಕಾರಣದ ಅನುಭವ, ಅದರ ಹಿನ್ನೆಲೆಯಲ್ಲಿ ಈ ನಿರ್ಣಯವನ್ನು ಸದನದ ಒಪ್ಪಿಗೆಗಾಗಿ ಮಂಡನೆ ಮಾಡತಕ್ಕಂಥ ಕಾಲದಲ್ಲಿ, ಸನ್ಮಾನ್ಯ ರಾಜ್ಯಪಾಲರು ಏನು ತಮ್ಮ ಭಾಷಣವನ್ನು ಈ ಸದನಕ್ಕೆ ಕೊಟ್ಟಿದ್ದಾರೆ ಅದನ್ನು ಅನುಮೋದನೆ ಮಾಡುತ್ತಾ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ಅನುಮೋದನೆ ಮಾಡಿರತಕ್ಕಂಥ ಶ್ರೀಮತಿ ಮೋಟಮ್ಮನವರಿಗೂ ಅಭಿನಂದನೆ ಸಲ್ಲಿಸುವುದರ ಜೊತೆಗೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವ ಮುಖಾಂತರ, ಟೀಕೆ ಟಿಪ್ಪಣಿಗಳ ಮುಖಾಂತರ ಹಲವಾರು ವಿಚಾರಗಳನ್ನು ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಡಿ. ಬಿ. ಚಂದ್ರೇಗೌಡರು ಪ್ರಸ್ತಾಪ ಮಾಡಿದ್ದಾರೆ. ಅವರಾಗಲೀ, ಶ್ರೀಮಾನ್ ಯಡಿಯೂರಪ್ಪನವರಾಗಬಹುದು, ಶ್ರೀಮಾನ್ ವಾಟಾಳ್‌ರವರು ಇರಬಹುದು ಅಥವಾ ಬೇರೆ ಯಾವುದೇ ಮಾನ್ಯ ಸದಸ್ಯರು ಇರಬಹುದು. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ತಮಗೆ ಅಭಿನಂದನೆ ಸಲ್ಲಿಸುವುದಕ್ಕೆ ಒಂದು ಕಾರಣ, ಆಡಳಿತ ನಡೆಸತಕ್ಕ ಒಂದು ಸಂದರ್ಭದಲ್ಲಿ ನಾವು ಕೆಲವೊಮ್ಮೆ ತಪ್ಪು ಮಾಡತಕ್ಕಂಥ ಸಂದರ್ಭಗಳು ಇರುತ್ತವೆ.